ವಚನ ಸಂಕಲನ ಸಂಪುಟ

[ಸಂಪುಟ : ಮೂರು]

C.NO-956



S:682x1,1
33N1.3

ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ

S:682x1,1 956
33N1
Shivana, S, ed.
Vachanasankalana.

S:682x1,1
33N1.3

956

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನಸಾಹಿತ್ಯ ಪ್ರಕಟನಮಾಲೆ : ೩೮

ವಚನ ಸಂಕಲನ

ಸಂಪುಟ: ೩

ಸಂಪಾದನೆಯ ಸಿದ್ಧವೀರಣ್ಣೊಡೆಯರು ಸಂಕಲಿಸಿದ
ಪ್ರಭುದೇವರ ಸ್ತ್ರೋತ್ರದ ವಚನಗಳು ಮತ್ತು
ಶಿವನ ಬಿರುದಾವಳಿ ಸ್ತ್ರೋತ್ರದ ವಚನಗಳು

ಸಂಪಾದಕರು
ಎಸ್. ಶಿವಣ್ಣ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

ಪ್ರಕಾಶಕರು:
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ

ಪ್ರಕಾಶಕರು:
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.

S:682x1,L
33N1·3

ಸಲಹೆ-ಸಹಾಯ:
ಡಾ. ವೀರಣ್ಣ ರಾಜೂರ
ರೀಡರ್. ಕನ್ನಡ ಅಧ್ಯಯನಪೀಠ, ಕ. ವಿ. ಧಾರವಾಡ.
ಡಾ॥ ಬಿ. ಆರ್. ಹಿರೇಮಠ
ರೀಡರ, ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ
ಶ್ರೀ ಎಸ್. ಶಿವಣ್ಣ
ಸಂಪಾದಕರು, ಹಸ್ತಪ್ರತಿ ವಿಭಾಗ, ಬೆಂಗಳೂರು. ವಿ.ವಿ.ಬೆಂಗಳೂರು.

ನಿರ್ದೇಶಕರು:
ಡಾ॥ ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕ. ವಿ ಧಾರವಾಡ

ಗ್ರಂಥದಾನ:

ಲಿಂ. ಶ್ರೀ ಅಮರಗುಂಡಪ್ಪ ಅರಳಿ, ಗಂಗಾವತಿ ಇವರ ಧರ್ಮಪತ್ನಿ ಶ್ರೀಮತಿ ಜಡೆಮ್ಮ ಅರಳಿ ಇವರು ತಮ್ಮ ಮೊಮ್ಮಕ್ಕಳಾದ ಚಿ: ಅಮರಗುಂಡಪ್ಪ ಹಾಗೂ ಚಿ. ನಾಗಭೂಷಣ ಅರಳಿ ಇವರ ಶುಭವಿವಾಹದ ಸವಿನೆನಹಿಗಾಗಿ ಸಲ್ಲಿಸಿದ ಭಕ್ತಿಸೇವೆ (ದಿ. ೩-೨-೧೯೯೧ ರವಿವಾರ)

ಗ್ರಂಥಸ್ವಾಮ್ಯ: ಪ್ರಕಾಶಕರು

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 956

ಬೆಲೆ: ೧೫-೦೦ ರೂ.

ಮುದ್ರಕರು:
ಗಂಗಾಪೂರ ಓಣಿ, ಕುಂಬಾರ ಗರಡಿ ಹತ್ತಿರ
ಫ. ಶಿ. ಭಾಂಡಗೆಯವರ ತ್ವರಿತ ಮುದ್ರಣ
ಗದಗ-೫೮೨೧೦೧.

ಪ್ರಕಾಶಕರ ನುಡಿ

"ವೀರಶೈವ ಅಧ್ಯಯನ ಸಂಸ್ಥೆ" ಗದುಗಿನ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಆಶ್ರಯದಲ್ಲಿ ತಲೆಯೆತ್ತಿರುವ ವೀರಶೈವ ಚಟುವಟಿಕೆಗಳ ಒಂದು ಸಾಂಸ್ಕೃತಿಕ ಕೇಂದ್ರ. ವೀರಶೈವ ಸಂಸ್ಕೃತಿಯ ಸಮಸ್ತಮುಖಗಳ ಅಧ್ಯಯನ-ಪ್ರಕಟನ ಇದರ ಗುರಿ. ಈ ಸಂಸ್ಥೆ ಈ ವರೆಗೆ ಕ್ರಮುವತ್ತಾಗಿ ಅನೇಕ ಮಾರ್ಗಗಳಲ್ಲಿ ಮುನ್ನಡೆದಿದೆ. ಅವುಗಳಲ್ಲಿ 'ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಪ್ರಕಟನ ಯೋಜನೆ'ಯೂ ಒಂದು.

ಪ್ರಾಚೀನ ಕನ್ನಡ ಸಾಹಿತ್ಯಕ್ಕೆ ಧರ್ಮವೇ ಗುರಿ, ಧರ್ಮವೇ ಗುರು. ಹೀಗಾಗಿ ನಮ್ಮ ವಾಙ್ಮಯ ಜೈನ, ವೀರಶೈವ, ಬ್ರಾಹ್ಮಣ ಧರ್ಮಗಳಿಗೆ ಬರೆದ ಸಾಹಿತ್ಯಕ ವ್ಯಾಖ್ಯಾನವಾಗಿದೆ. ಈ ತ್ರಿವೇಣಿಯ ಒಂದು ಭಾಗವಾದ ವೀರಶೈವ ಸಾಹಿತ್ಯದ ಪ್ರಕಟನೆಯೆಂದರೆ ಪ್ರಾಚೀನ ಕನ್ನಡಸಾಹಿತ್ಯದ ಮೂರರಲ್ಲೊಂದು ಭಾಗದ ಪ್ರಕಟನೆಯೇ ಆಗುವುದರಿಂದ ಈ ಯೋಜನೆ ವೀರಶೈವ ಪರವೂ ಹೌದು, ಕನ್ನಡ ಪರವೂ ಹೌದು.

ಇತ್ತೀಚಿನ ದಿನಗಳಲ್ಲಿ ಪ್ರಾಚೀನಸಾಹಿತ್ಯದ ಬಗೆಗೆ, ಅದರಲ್ಲಿಯೂ ಅಪ್ರಕಟಿತ ಪ್ರಾಚೀನಸಾಹಿತ್ಯದ ಬಗೆಗೆ ಉಪೇಕ್ಷೆ ಬೆಳೆಯುತ್ತಲಿದೆ. ನಮ್ಮ ಹಿರಿಯರು 'ಜನ ಬದುಕಬೇಕೆಂದು' ಬಯಸಿ ಬರೆದಿಟ್ಟಿರುವ ಈ ಎಲ್ಲ ಕೃತಿಗಳನ್ನು ಸಾಧ್ಯವಿದ್ದ ಮಟ್ಟಿಗಾದರೂ ಉಳಿಸಿಕೊಳ್ಳುವುದು ಅವರ ಉತ್ತರಾಧಿಕಾರಿಗಳಾದ ನಮ್ಮ ಕರ್ತವ್ಯವಾಗಿದೆ. ಈ ಕರ್ತವ್ಯಪ್ರಜ್ಞೆಯ ಸಾಕಾರರೂಪ 'ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನಸಾಹಿತ್ಯ ಪ್ರಕಟನಯೋಜನೆ'.

ಬಹಳ ಜನರಿಗೆ ಪ್ರಾಚೀನ ಶ್ರೇಷ್ಠಕೃತಿಗಳು ಮಾತ್ರ ಪ್ರಕಟವಾಗಬೇಕೆಂಬ ಭಾವನೆಯಿದೆ. ಆದರೆ ಪ್ರತಿಯೊಂದು ಕೃತಿಗೆ ತನ್ನದೇ ಆದ ಬೆಲೆಯಿರುವುದರಿಂದ ಎಲ್ಲ ಗ್ರಂಥಗಳನ್ನುಪ್ರಕಟಿಸುವುದೇ ಯೋಗ್ಯ ಉಪಕ್ರಮ. ಹೊಸಗನ್ನಡದ ನವೋದಯ ಕಾಲದಲ್ಲಿ ಸಾಹಿತ್ಯವನ್ನು ಸೌಂದರ್ಯ ದೃಷ್ಟಿಯಿಂದ ನೋಡುವ ಧೋರಣೆ ಬೆಳೆದು ಅದರ ಉಳಿದ ಮುಖಗಳಾದ ಸಂಸ್ಕೃತಿ, ಭಾಷೆ, ಛಂದಸ್ಸು, ಸಮಾಜ, ಜಾನಪದ ಇತ್ಯಾದಿಗಳು ತೀರ ಅಲಕ್ಷಿತವಾಗಿವೆ. ಇದನ್ನು ಮನಗಂಡು ಈ ಯೋಜನೆ ಸಮಸ್ತಕೃತಿಗಳನ್ನು ಪ್ರಕಟಿಸಲು ಮುಂದೆ ಬಂದಿದೆ.

ವೀರಶೈವಸಾಹಿತ್ಯದಲ್ಲಿ ವಚನ, ಕಾವ್ಯಗಳನ್ನು ಬಿಟ್ಟರೆ, ಮಿಕ್ಕ ಪ್ರಕಾರಗಳ ಪ್ರಕಟನೆ ಉಪೇಕ್ಷೆಗೆ ಗುರಿಯಾಗಿದೆ. ಸ್ವರವಚನ, ಟೀಕಾಸಾಹಿತ್ಯ, ತತ್ತ್ವಸಾಹಿತ್ಯ ಇತ್ಯಾದಿಗಳೆಲ್ಲ ಇನ್ನೂ ಕತ್ತಲಲ್ಲಿ ಕುಳಿತಿವೆ. ಇದೆಲ್ಲವನ್ನು ಒಂದು

ವ್ಯವಸ್ಥಿತ ಕ್ರಮದಲ್ಲಿ, ಅಕಾಡೆಮಿಕ್ ಮಟ್ಟದಲ್ಲಿ ಪ್ರಕಟಿಸಲು ಸಿದ್ಧವಾಗಿದೆ, ಈ ಸಂಸ್ಥೆ.

ಇದು ಒಂದೆರಡು ವರ್ಷಗಳಲ್ಲಿ ಒಬ್ಬಿಬ್ಬರು ವಿದ್ವಾಂಸರಿಂದ ಮುಗಿಯುವ ಕೆಲಸವಲ್ಲ. ಹೊಸದೆಲ್ಲ ಹಳತಾಗುತ್ತ ನಡೆದಂತೆ ಅದರ ಬೆನ್ನು ಬಿಡದೆ ಮುನ್ನಡೆಯುವ ಶಾಶ್ವತ ಯೋಜನೆಯಿದು. ಈ ದಿಸೆಯಲ್ಲಿ ಈ ಯೋಜನೆ ಒಂದು ಪಂಥ(School)ವನ್ನೇ ನಿರ್ಮಿಸಿದರೆ ಆಶ್ಚರ್ಯವೇನಲ್ಲ.

ಈ ಮಾಲಿಕೆಯಲ್ಲಿ ೩೮ನೆಯ ಕೃತಿಯಾಗಿ "ಸಂಪಾದನೆಯ ಸಿದ್ಧವೀರಣ್ಣೊಡೆಯರ ವಚನ ಸಂಕಲನಗಳು" ಗ್ರಂಥ ಪ್ರಕಟವಾಗುತ್ತಲಿದೆ. ವೀರಶೈವ ಸಂಕಲನ ಸಾಹಿತ್ಯವರ್ಗದ ಈ ಕೃತಿಯನ್ನು ಪರಿಶ್ರಮವಹಿಸಿ ಸಂಪಾದಿಸಿಕೊಟ್ಟ ಶ್ರೀ ಎಸ್. ಶಿವಣ್ಣ ಅವರಿಗೂ, ಗ್ರಂಥದಾನ ಪೂರೈಸಿದ ಭಕ್ತಿವಂತರೂ ಅಭಿಮಾನಿಗಳೂ ಆದ ಗಂಗಾವತಿಯ ಶ್ರೀ ಅಮರಗುಂಡಪ್ಪ ಹಾಗೂ ಶ್ರೀ ನಾಗಭೂಷಣ ಅರಳಿ ಅವರಿಗೂ, ಈ ಯೋಜನೆಯ ಕರ್ಣಧಾರತ್ವ ವಹಿಸಿದ ಸಲಹಾ ಸಮಿಯ ಸದಸ್ಯರಿಗೂ ತೋಂಟದ ಸಿದ್ಧಲಿಂಗಮಹಾಶಿವಯೋಗಿ ಸಕಲ ಸನ್ಮಂಗಳ ಕರುಣಿಸಲೆಂದು ಹಾರೈಸುತ್ತೇವೆ.

ಪ್ರಕಾಶಕರು
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ತೋಂಟದಾರ್ಯಮಠ, ಗದಗ

೧೯೯೧

ಮೊದಲ ಮಾತು

ಶ್ರೀ ಎಲ್. ಬಸವರಾಜು ಅವರು 'ಅಲ್ಲಮನ ವಚನಚಂದ್ರಿಕೆ'ಯ ಪೀಠಿಕೆಯಲ್ಲಿ[೧] 'ಬಿರುದಾವಳಿ ಸ್ತೋತ್ರದ ವಚನ' ವೆಂಬ ಕೃತಿಯ ಬಗೆಗೆ ಈ ರೀತಿ ಉಲ್ಲೇಖಿಸಿದ್ದಾರೆ. 'ಅವಿದಿತನೊಬ್ಬನಿಂದ ಸಂಕಲನವಾಗಿರುವ "ಬಿರುದಾವಳಿ ಸ್ತೋತ್ರದ (ಶಿವ ಪ್ರಾರ್ಥನಾರೂಪಪಹಾದ) ವಚನಗಳು". ಮುಂದೆ ಕ್ರಿ. ಶ. ೧೯೬೬ ರಲ್ಲಿ ಡಾ|| ಎಲ್. ಬಸವರಾಜು ಅವರು 'ಅಕ್ಕನ ವಚನಗಳು' ಕೃತಿಯನ್ನು ಸಂಪಾದಿಸಿ ಪ್ರಕಟಿಸಿದಾಗ ಅದರ ಪೀಠಿಕೆಯಲ್ಲಿ ಸಂಪಾದನೆ ಸಿದ್ಧವೀರಣಾರ್ಯ 'ಲಿಂಗಸ್ತೋತ್ರದ ವಚನ' ಅಥವಾ 'ಬಿರುದಾವಳಿ ಸ್ತೋತ್ರದ ವಚನ'ವನ್ನು ಸಂಗ್ರಹಿಸಿದುದಾಗಿ ತಿಳಿಸಿದ್ದಾರೆ. ಅಲ್ಲದೆ ಈ ಸಂಕಲನದಲ್ಲಿ 'ಅಕ್ಕನ ವಚನಗಳಿವೆ' ಎಂದಿದ್ದಾರೆ.[೨]

ವಾಸ್ತವವಾಗಿ 'ಲಿಂಗಸ್ತೋತ್ರದ ವಚನ' ಹಾಗೂ 'ಬಿರುದಾವಳಿ ಸ್ತೋತ್ರದ ವಚನ' (ಬಿರುದಾ) ಡಾ|| ಎಲ್. ಬಸವರಾಜು ಅವರು ತಿಳಿಸಿರುವಂತೆ ಅಭಿನ್ನ ಸಂಕಲನ ಕೃತಿಯಾಗಿರದೆ ಭಿನ್ನ ಭಿನ್ನ ವಚನ ಸಂಕಲನಗಳಾಗಿವೆ. 'ಲಿಂಗಸ್ತೋತ್ರದ ವಚನ'ಗಳಲ್ಲಿ ೧೦೮ ವಚನಗಳಿದ್ದು ಮಹಾದೇವಿಯಕ್ಕನ ೧೦ ವಚನಗಳಿವೆ,'ಬಿರುದಾ....' ಸಂಕಲನದಲ್ಲಿ ೧೧೧ ವಚನಗಳಿದ್ದು ಮಹಾದೇವಿಯಕ್ಕನ ಒಂದೇ ಒಂದು ವಚನವಿದೆ. (ಕ್ರಮಾಂಕ–೬೯),

ಕನ್ನಡ ಅಧ್ಯಯನಕೇಂದ್ರ (ಬೆಂಗಳೂರು ವಿಶ್ವವಿದ್ಯಾಲಯ)ದ ಓಲೆ ಕೃತಿ ಕ್ರಮಾಂಕ ೨೧೨ನೆಯ ಕಟ್ಟಿನ ಸಂಖ್ಯಾ ನಿರ್ದೇಶವಿಲ್ಲದ ಕೊನೆಯ ಗರಿಯೊಂದರಲ್ಲಿ ವೀರಶೈವ ಮಠವೊಂದರಲ್ಲಿದ್ದ ಕೃತಿಗಳ ಹೆಸರುಗಳಿವೆ. ಆ ಪಟ್ಟಿಯಲ್ಲಿ ಸಂಪಾದನೆಯ ಸಿದ್ಧವೀರಾಹ್ವಯಾಚಾರ್ಯರು ಸೇರಿಸಿದ ಆಚರಣೆಯ ವಚನಂಗಳು, ಸಂಬಂಧದ ವಚನ, ಲಿಂಗಸ್ತೋತ್ರದ ವಚನ, ಶಿವನ ಬಿರುದಾವಳಿ ಸ್ತೋತ್ರದ ವಚನ' ಗಳನ್ನು ಹೆಸರಿಸಿದೆ. ಇಲ್ಲಿ ನಮೂದಿತವಾದ ಕೃತಿಗಳಲ್ಲಿ 'ಆಚರಣೆಯ ಸಂಬಂಧದ ವಚನ' (ಸಂ. ಪಿ. ಎಂ. ಗಿರಿರಾಜ್, ಮೈಸೂರು, ೧೯೮೦.) ಮತ್ತು 'ಲಿಂಗಸೋತ್ತ್ರದ ವಚನ' ಗಳು (ಸಂ. ವೀ. ರು. ಕೊಪ್ಪಳ, ಧಾರವಾಡ, ೧೯೬೪.) ಈಗಾಗಲೇ ಪ್ರಕಟವಾಗಿವೆ. ಈಗ 'ಬಿರುದಾ....'ಗಳ ಸಂಕಲನಕಾರ ಸಂಪಾದನೆ ಸಿದ್ಧವೀರನೆಂಬ ಅಂಶ ಬೆಳಕಿಗೆ ಬಂದಿದೆ.

ಸಂಪಾದನೆ ಸಿದ್ಧವೀರಶಿವಯೋಗಿ ಸಂಸ್ಕೃತದಲ್ಲಿ 'ಅನಾದಿ ವೀರಶೈವ ಸಾರ ಸಂಗ್ರಹ' ವೆಂಬ ಕೃತಿಯನ್ನು ರಚಿಸಿದ್ದು ಅದರಲ್ಲಿ ತನ್ನನ್ನು 'ಶ್ರೀ ಮದ್ವೀರಮಾಹೇಶ್ವರಾಚಾರ್ಯವರ್ಯ ವೀರಶೈವ ಷಟ್ಸ್ಥಲಮಾರ್ಗಸ್ಥಾಪನಾಗ್ರಗಣ್ಯ ಶ್ರೀಸಂಪಾದನಾ ಸಿದ್ಧವೀರಾಖ್ಯ ಶಿವಯೋಗೀಂದ್ರ' ಎಂದು ಕರೆದುಕೊಂಡಿದ್ದಾನೆ.

ಈತನ ಶಿಷ್ಯ ವೀರಸಂಗಯ್ಯ 'ಸಂಪಾದನೆಯ ಸಿದ್ಧವೀರೇಶ್ವರದೇವರು' ಎಂದಿದ್ದಾನೆ.[೩] ಈತನ ಕಿರಿಯ ಸಮಕಾಲೀನನಾದ ಹೂಲಿಯ ಚಿಕ್ಕ ನಂಜೇಶನು

(ಸು ೧೬೦೦) 'ರಾಘವಾಂಕ ಚರಿತೆ'ಯಲ್ಲಿ(೧೯-೯೫)'ಸಂಪಾದನೆಯ ಸಿದ್ಧವೀರೇಶ್ವರಾಚಾರ್ಯ' ನೆಂದಿದ್ದಾನೆ.[೪] ಈತನ ಗುರುಪರಂಪರೆಗೆ ಸಂಬಂಧಿಸಿದ ಸಂಪಾದನೆ ಗುರುಲಿಂಗದೇವ (ಸು. ೧೬೭೦) ಶೀಲವಂತಯ್ಯನ ತ್ರಿವಿಧಿ ವ್ಯಾಖ್ಯಾನದಲ್ಲಿ 'ಸಂಪಾದನೆಯ ಸಿದ್ಧವೀರಣಾಚಾರ್ಯ'ನೆಂದಿದ್ದಾನೆ.[೫] ಇದೇ ಗುರುಸಂಪ್ರದಾಯಕ್ಕೆ ಸಂಬಂಧಿಸಿದ ಸಂಪಾದನೆ ಪರ್ವತೇಶ (ಕ್ರಿ. ಶ. ೧೬೯೮) 'ಚತುರಾಚಾರ್ಯ ಚಾರಿತ್ರ'ದಲ್ಲಿ 'ಸಂಪಾದನಾ ದೇಶಿಕ' (೧-೧-೧೯); 'ಸಂಪಾದನಾ ಸಿದ್ಧವೀರ' (೧-೧-೨೧); 'ಸಂಪಾದನಾ ಸಿದ್ಧವೀರೇಶ'(೧-೧-೨೦, ೧-೧-೨೪); 'ಸಂಪಾದನಾ ಸಿದ್ಧವೀರೇಶ್ವರ'(೬-೮-೪೬)ನೆಂದು ಕರೆದಿದ್ದಾನೆ.[೬] ಇವನ ಆಚರಣೆಯ ಸಂಬಂಧದ ವಚನಗಳ ಪ್ರತಿಗಳಿಂದ ಇವನಿಗೆ ಮುದಯ್ಯ,[೭] ಮುಪ್ಪಿನಯ್ಯ[೮] ಎಂಬ ಹೆಸರುಗಳೂ ಇದ್ದಂತೆ ತಿಳಿಯುತ್ತದೆ. ಅಲ್ಲದೆ ಇವನನ್ನು 'ಗಡ್ಡದ ಸಿದ್ಧವೀರಣ್ಣೊಡೆಯ'ನೆಂದು ಜನ ಸಂಬೋಧಿಸುತ್ತಿದ್ದ ಸಂಗತಿ 'ಲಿಂಗಸ್ತೋತ್ರ ಷಟ್ಪದಿ ಟೀಕೆ'ಯ ಕೃತಿಯೊಂದರ ಆದಿಯಲ್ಲಿ[೯] ಉಲ್ಲೇಖವಾಗಿದೆ.

ಸಂ. ಸಿದ್ಧವೀರಣ್ಣೊಡೆಯರು ತಮ್ಮ ವೈಯಕ್ತಿಕ ಸಂಗತಿಗಳ ಬಗೆಗೆ "ಅನಾದಿ ವೀರಶೈವ ಸಾರಸಂಗ್ರಹ"ದಲ್ಲಿ ಶ್ರೀ ಮದ್ವೀರಮಾಹೇಶ್ವರಾಚಾರ್ಯವರ್ಯ, ವೀರಶೈವ ಷಟ್ಸ್ಥಲಮಾರ್ಗ ಸ್ಥಾಪನಾಗ್ರಗಣ್ಯ' ರೆಂದು ತಿಳಿಸಿದ್ದಾರೆ. ಈ ಮಾತಿಗೆ ಪೂರಕ-ಪೋಷಕವಾಗಿ ಇವರ ಶಿಷ್ಯ ವೀರಸಂಗಯ್ಯ 'ಶಿವನಮಹಿಮಾಸ್ತೋತ್ರದ ವಚನ'ಗಳ ಆದಿಯಲ್ಲಿ 'ಶ್ರೀ ವೀರಶೈವ ಷಟ್ಸ್ಥಲಾಚಾರ ಸಾರೋದ್ಧಾರ'ರೆಂದು ಉಲ್ಲೇಖಿಸಿದ್ದಾನೆ. ಅಲ್ಲದೆ ಇವರ ಪರಂಪರೆಯ ಸಂಪಾದನೆ ಗುರುಲಿಂಗದೇವ ಇವರ ಬಗೆಗೆ '....ಎಳಮಲೆಯ ಗುರುಶಾಂತದೇವರು, ಅವರ ಭಕ್ತಿ ಜ್ಞಾನ ವೈರಾಗ್ಯದ ಸಮರಸಾನಂದಾನುಭಾವಿ'ಗಳೆಂದು ಕರೆದಿದ್ದಾನೆ. ಸಂಪಾದನೆ ಪರ್ವತೇಶ ಇವರನ್ನು 'ಎಳಮಲೆಯ ಗುರುಶಾಂತರನುಭವಾಂಬುಧಿ ಷಟ್ಸ್ಥಲಬ್ರಹ್ಮ' (೧-೧-೧೯) ಹಾಗೂ 'ಜರೆದು ಶೈವವ ವೀರಶೈವಮಂ ಸ್ಥಾಪಿಸಿದಂ' ಎಂದಿದ್ದಾನೆ (೧-೧-೨೦). 'ಲಿಂಗ ಸ್ತೋತ್ರ ಷಟ್ಪದಿಯ ಪ್ರತಿಯೊಂದು ಇವರನ್ನು 'ಷಡುಸ್ಥಲಚಕ್ರವರ್ತಿ ವಿರಕ್ತ ಶಿರೋಮಣಿ' ಎಂದು ಕೀರ್ತಿಸಿದೆ.

ಈಗಾಗಲೇ ಗಮನಿಸಿರುವಂತೆ ಇವರ ಶಿಷ್ಯ ವೀರಸಂಗಯ್ಯ 'ಶಿವನ ಮಹಿಮಾ ಸ್ತೋತ್ರದ ವಚನ'ಗಳನ್ನು ಸಂಕಲಿಸಿದ್ದು ಇದನ್ನು ಡಾ॥ ವೀರಣ್ಣ ರಾಜೂರ ಅವರು 'ಸಂಪಾದನೆಯ ಸಿದ್ಧವೀರೇಶ್ವರ ದೇವರು ಸೇರಿಸಿದ ಶಿವನ ಮಹಿಮಾಸ್ತೋತ್ರದ ವಚನ' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದಾರೆ. 'ಸುಜ್ಞಾನಬೋಧೆ' ಯೆಂಬ ಕೃತಿಯ ಕರ್ತೃ ಪುರಾಣದ ಸಿದ್ಧಲಿಂಗೇಶನು ಸಂಪಾದನೆ ಸಿದ್ಧವೀರಣಾರ್ಯರು ತನ್ನ ಕೃತಿಗೆ ಹೆಸರಿಟ್ಟಂತೆ ತಿಳಿಸಿದ್ದಾನೆ.[೧೦]

ಎಳೆಮಲೆ ಗುರುಶಾಂತದೇವರಶಿಷ್ಯರಾದ ಸಂಪಾದನೆಯ ಸಿದ್ಧವೀರಣ್ಣೊಡೆಯರ ಕಾಲದ ಬಗೆಗೆ ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು 'ಕರ್ನಾಟಕ ಕವಿ ಚರಿತೆ' ದ್ವಿತೀಯ ಸಂಪುಟ (೧೯೧೯) ಪುಟ. ೩೨೫ರಲ್ಲಿ 'ಎಳಮಲೆಯ ಗುರು ಶಾಂತದೇವನ (ಸು. ೧೫೬೫)ಶಿಷ್ಯನೆಂದು ತಿಳಿಸುವುದರಿಂದ ಇವನ ಕಾಲವು ಸುಮಾರು

೧೬೦೦ ಆಗಿರಬಹುದು' ಎಂದಿದ್ದಾರೆ. ಈತನ ಆ ಚರಣೆ-ಸಂಬಂಧದ ವಚನಗಳನ್ನು ಸಂಪಾದಿಸಿ ಪ್ರಕಟಿಸಿದ ಶ್ರೀ. ಪಿ. ಎಂ. ಗಿರಿರಾಜು ಅವರು 'ಇವರ ಶಿಷ್ಯರ ಶಿಷ್ಯ ಸಂ. ಪರ್ವತೇಶ್ವರದೇವರು ೧೯೬೮ರಲ್ಲಿ ಕೃತಿರಚನೆ ಗೈದಿದ್ದಾರೆ. ಮುಪ್ಪಿನಯ್ಯರೆಂಬ ಮುದಯ್ಯರೆಂಬ ಅನ್ವರ್ಥ ನಾಮಗಳನ್ನು ಗಮನಿಸಿದಲ್ಲಿ ಇವರು ೧೬೫೦ರ ಸುಮಾರಿನಲ್ಲಿ ಸುಪ್ರಸಿದ್ಧರಾಗಿರಬಹುದೆಂದು ತೋರುತ್ತದೆ' ಎಂದಿದ್ದಾರೆ. ಡಾ॥ ವೀರಣ್ಣ ರಾಜೂರ ಅವರು 'ಶಿವಮಹಿಮಾ ಸ್ತೋತ್ರದ ವಚನ'ಗಳ ಪ್ರಸ್ತಾವನೆಯಲ್ಲಿ ಇತ್ತೀಚಿನ ಸಂಶೋಧನೆಗಳಿಂದ ಬದಲಾವಣೆಗೆ ಗುರಿಯಾದ ತೋಂಟದ ಸಿದ್ಧಲಿಂಗರ ಕಾಲದ ಹಿನ್ನಲೆಯನ್ನು ಗಮನಿಸಿ 'ಸಿದ್ಧವೀರೇಶ್ವರದೇವರ ಕಾಲ ೧೭೦೦ಕ್ಕೆ ಇಳಿದು ಬರುತ್ತದೆ' ಎಂದಿದ್ದಾರೆ.

ಆದರೆ ಈಗಾಗಲೇ ಹಿಂದೆ ಪ್ರಸ್ತಾಪಿಸಿರುವಂತೆ ಚಿಕ್ಕನಂಜೇಶ (ಸು. ೧೬೦೦) 'ರಾಘವಾಂಕ ಚರಿತೆ'ಯಲ್ಲಿ (೧೯-೯೫) ಸಂ. ಸಿದ್ಧವೀರನನ್ನು ತನ್ನ ಹಿರಿಯ ಸಮಕಾಲೀನನೆನ್ನುವಂತೆ ಉಲ್ಲೇಖಿಸಿದ್ದಾನೆ. ಹೀಗಾಗಿ ಸಂ. ಸಿದ್ಧವೀರೇಶನ ಕಾಲವನ್ನು ಕುರಿತ ಕವಿಚರಿತೆಕಾರರ ಅಭಿಪ್ರಾಯವನ್ನೇ ಇಟ್ಟುಕೊಳ್ಳಬಹುದಾಗಿದೆ.

ಸಂ. ಸಿದ್ಧವೀರನ "ಶಿವನ ಬಿರುದಾವಳಿ ಸ್ತೋತ್ರದ ವಚನಗಳು" ಕೃತಿಯಲ್ಲಿ ೭೦ ವಚನಕಾರ/ಕಾರ್ತಿಯರ ೧೧೧ ವಚನಗಳಿವೆ.೧೧

ಈಗ ತಿಳಿದು ಬಂದಿರುವಂತೆ ಸಂ. ಸಿದ್ಧವೀರರ ಕೃತಿಗಳಲ್ಲಿ ೧೬ ಕನ್ನಡದಲ್ಲಿವೆ, ೧ ಮಾತ್ರ ಸಂಸ್ಕೃತದಲ್ಲಿದೆ. ಈ ೧೭ ಕೃತಿಗಳು ಇಂತಿವೆ:

ಕನ್ನಡ ಕೃತಿಗಳು

೧.	ಅಷ್ಟಾವರಣಸ್ತೋತ್ರದ ತ್ರಿವಿಧಿ(ಸಂಕಲನ) (ಮೂಲ– ಸಿದ್ಧರಾಮ)	೧೪೩
೨.	ಆಚರಣೆಯ ಸಂಬಂಧದ ವಚನ (ಸಂಕಲನ)	೨೭೫
೩.	ಏಕೋತ್ತರ ಸಾರ ಟೀಕೆ(ಸಂಕಲನ) ಬ್ಯಾಡಗಿ 'ಮುರುಘಾಮಠ'ದ ಪ್ರತಿಯೊಂದರ ಉಲ್ಲೇಖ ೩೯೬	
೪.	ಚೆನ್ನಬಸವೇಶ್ವರದೇವರ ಸ್ತೋತ್ರದ ವಚನ (ಸಂಕಲನ)	೧೦೪
೫.	ಪ್ರಭುದೇವರ ಸ್ತೋತ್ರದ ವಚನ (ಸಂಕಲನ)	೧೦೮
೬.	ಪಾದಸ್ತೋತ್ರ (ಸಂಕಲನ)	
೭.	ಬಸವಸ್ತೋತ್ರದ ತ್ರಿವಿಧಿ(ಸಂಕಲನ) (ಮೂಲ–ಸಿದ್ಧರಾಮ)	೧೨೩
೮.	ಮಿಶ್ರಸ್ತೋತ್ರ (ಸಂಕಲನ) (ಮೂಲ-ಕಿಕ್ಕೇರಿ ನಂಜಡಾರಾಧ್ಯ)	೧೧೧
೯.	ಮಿಶಸ್ತೋತ್ರದ ತ್ರಿವಿಧಿ(ಸಂಕಲನ) (ಮೂಲ–ಸಿದ್ಧರಾಮ)	೧೦೯
೧೦.	ಮಿಶ್ರಸ್ತೋತ್ರದ ಷಟ್ಪದಿ(ಸಂಕಲನ)	೧೧೨

೧೧. ಲಿಂಗಸ್ತೋತ್ರದ ಕಂದ(ಸಂಕಲನ)
(ಮೂಲ- ಕೊಂಡಗುಳಿ ಕೇಶಿರಾಜ) ೧೦೮
೧೨. ಲಿಂಗಸ್ತೋತ್ರದ ವಚನ(ಸಂಕಲನ) ೧೦೮
೧೩. ಲಿಂಗಸ್ತೋತ್ರದ ಷಟ್ಪದಿ(ಸಂಕಲನ) ೧೧೧
೧೪. ಶಂಕರದೇವರ ಕಂದ(ಸಂಕಲನ)
(ಮೂಲ-ಶಂಕರದೇವ) ೧೨೧-೧೨೨
೧೫. ಶಿವನ ಬಿರುದಾವಳಿ ಸ್ತೋತ್ರದ ವಚನ(ಸಂಕಲನ) ೧೧೧
೧೬. ಸಿದ್ಧಲಿಂಗಸ್ತೋತ್ರ ಷಟ್ಪದ ಟೀಕೆ(ಸಂಕಲನ)
(ಮೂಲ- ?)

ಸಂಸ್ಕೃತಕೃತಿ

೧೭. ಅನಾದಿವೀರಶೈವ ಸಾರಸಂಗ್ರಹ (ಪ್ರಕರಣ-೨೭)

ಸಂ. ಸಿದ್ಧವೀರಣ್ಣೊಡೆಯ ಸಂಕಲಿಸಿದ 'ಶಿವನ ಬಿರುದಾವಳಿ ಸ್ತೋತ್ರದ ವಚನ'ಗಳನ್ನು ಆಧರಿಸಿ ವೀರಸಂಗಯ್ಯ ತನ್ನ 'ಶಿವಮಹಿಮಾಸ್ತೋತ್ರದ ವಚನ'ಗಳನ್ನು ಸಂಕಲಿಸಿದ್ದಾನೆ. ವೀರಸಂಗಯ್ಯ ತನ್ನ ಕೃತಿಯ ಆಕರದ ಬಗೆಗೆ ಆದಿಯಲ್ಲಿ 'ಸಂಪಾದನೆ ಸಿದ್ಧವೀರೇಶ್ವರದೇವರು ಸೇರಿಸಿದ ಅನುಕ್ರಮದಿ ವೀರಸಂಗಯ್ಯನವರು ಸಂಗ್ರಹಿಸಿದ ಶಿವಮಹಿಮಾಸ್ತೋತ್ರವಚನ'ಗಳು ಎಂದಿದ್ದಾನೆ. ಈ ಎರಡು ಕೃತಿಗಳಲ್ಲಿ ಉಲ್ಲೇಖವಾಗಿರುವ ೯೩ ವಚನಗಳು ಒಂದೇ ಆಗಿವೆ. ಅಲ್ಲದೆ ೪೦ ವಚನಗಳು ಅಲ್ಲಲ್ಲಿ ಒಂದೇ ಅನುಕ್ರಮದಲ್ಲಿವೆ.[೧೨]

ಪ್ರಭುದೇವರ ಸ್ತೋತ್ರದ ವಚನಗಳು ಸಂಕಲನ ಕೃತಿಯಲ್ಲಿ ೧೦೮ ವಚನಗಳಿವೆ. ಕೃತಿಯ ಪ್ರಾರಂಭದಲ್ಲಿ 'ಸಂಪಾದನೆಯ ಸಿದ್ಧವೀರಣ್ಣೊಡ್ಡೇವರು ಸೇರಿಸಿದ ಪ್ರಭುದೇವರ ಸ್ತೋತ್ರದ ವಚನ' ವೆಂದಿದೆ. ಅಂತ್ಯದಲ್ಲಿ 'ಪ್ರಭುದೇವರ ಸ್ತೋತ್ರ ಸಮಾಪ್ತ' ವೆಂದಿದೆ. ಈ ಕೃತಿಯಲ್ಲಿ ೧೪ ವಚನಕಾರ ವಚನಕಾರ್ತಿಯರ ೧೦೮ ವಚನಗಳಿವೆ. ಇಲ್ಲಿನ ೧೦೮ ವಚನಗಳಲ್ಲಿ ೮೯ ವಚನಗಳು ಗೂಳೂರು ಸಿದ್ಧವೀರಣ್ಣೊಡೆಯರ (೧೬೦೦) 'ಶೂನ್ಯಸಂಪಾದನೆ' (ಸಂ. ಶಿ. ಭೂಸನೂರಮಠ, ರಾಮೂರ-ಆದವಾನಿ, ೧೯೫೮)ಯಲ್ಲಿವೆ.[೧೩] ಕ್ರಮಾಂಕ ೯೦ ಹಾಗೂ ೯೨ ನೆಯ ವಚನಗಳು ಹಲಗೆ ದೇವ| ಕೆಂಚವೀರಣ್ಣೊಡೆಯ(ಸು.೧೫೨೦)ರ 'ಶೂನ್ಯ ಸಂಪಾದನೆ'ಯಲ್ಲಿವೆ. ಕ್ರಮಾಂಕ ೧೮ ಹಾಗೂ ೨೦ ನೆಯ ವಚನಗಳು ಗುಮ್ಮಳಾಪುರದ ಸಿದ್ಧಲಿಂಗದೇವರ (೧೫೮೦) 'ಶೂನ್ಯಸಂಪಾದನೆ'ಯಲ್ಲಿವೆ.

ಪ್ರಭುದೇವರ ಸ್ತೋತ್ರದ ವಚನಗಳನ್ನು ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರ ಮಠದ ಓಲೆಪ್ರತಿ ಕ್ರಮಾಂಕ ೮೩ (ಗ೨ ೧೪೫-೧೫೫)ರಿಂದ ಪರಿಷ್ಕರಿಸಿ ಪ್ರಕಟಿಸಲಾಗಿದೆ. "ಶಿವನ ಬಿರುದಾವಳಿ ಸ್ತೋತ್ರದ ವಚನಗಳು' ಕೃತಿಯನ್ನು ಪರಿಷ್ಕರಿಸಲು ೨ ಕಾಗದದ ಪ್ರತಿಗಳನ್ನು ಬಳಸಿಕೊಳ್ಳಲಾಗಿದೆ. ಒಂದು ಕಾಗದದ ಪ್ರತಿಯನ್ನು ಮಿತ್ರರಾದ ಪ್ರೊ. ಎಸ್. ಉಮಾಪತಿ, (ದಾವಣಗೆರೆ) ಅವರು ಒದಗಿಸಿ

ದ್ದಾರೆ. ಈ ಕೃತಿಯ ಆದಿಯಲ್ಲಿ 'ಶಿವನ ಬಿರುದಾವಳಿ ಸ್ತೋತ್ರ ಬರುವದಕ್ಕೆ ಶುಭಮಸ್ತು' ಎಂದಿದೆ. ಅನಂತರ, 'ಶ್ರೀಗುರು ಮುರಿಗೆಯೇ ನಮಃ ಶ್ರೀ ತೋಂಟದ ಸಿದ್ಧಲಿಂಗಯೇ ನಮಃ, ನಿಜಗುಣ ಶಿವಯೋಗಿನೇ ನಮಃ, ಶ್ರೀ ವಿರೂಪಾಕ್ಷಯಯೇ ನಮಃ, ಶ್ರೀ ಗುರು ಬಸವಲಿಂಗಾಯ ನಮಃ, ಶ್ರೀ ಪ್ರಮಥ ಗಣಾಧೀಶ್ವರರ ಚರಣಾರವಿಂದವೇ ಗತಿ ಮತಿ' ಎಂದಿದೆ. ಅಂತ್ಯದಲ್ಲಿ 'ಶಿವನ ಬಿರುದಾವಳಿ ಸ್ತೋತ್ರದ ವಚನಂಗಳು ಸಮಾಪ್ತ ಮಂಗಳ ಮಹಾ' ಎಂದಿದೆ. ಈ ಪ್ರತಿಯ ೪೮-೫೮ನೆಯ ಹಾಳೆಗಳಲ್ಲಿ ಪ್ರಸ್ತುತ ಕೃತಿ ಲಿಖಿತವಾಗಿದೆ. ೫೮ರ ಹಿಂಭಾಗದಲ್ಲಿ ಬರವಣಿಗೆ ಇಲ್ಲ. ಮತ್ತೊಂದು ಕಾಗದದ ಪ್ರತಿಯನ್ನು ಮಿತ್ರರಾದ ಶ್ರೀ ಜಿ. ಎ. ಶಿವಲಿಂಗಯ್ಯನವರು ಒದಗಿಸಿಕೊಟ್ಟಿದ್ದಾರೆ.

ಈ ಅಪ್ರಕಟಿತ ವಚನಸಂಕಲನಗಳನ್ನು ಪ್ರಕಟಿಸಲು ಮುಂದಾದ ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯಮಠದ 'ವೀರಶೈವ ಅಧ್ಯಯನಸಂಸ್ಥೆಗೆ' ಧನ್ಯವಾದಗಳು.

ಈ ಕೃತಿ ಪರಿಷ್ಕರಣಕ್ಕೆ ಹಸ್ತಪ್ರತಿ ಒದಗಿಸಿದ ಮೂರುಸಾವಿರ ಮಠದ ಜಗದ್ಗುರುಗಳಿಗೆ,ಮಿತ್ರರಾದ ಪ್ರೊ. ಎಸ್.ಉಮಾಪತಿ ಹಾಗೂ ಶ್ರೀ ಜಿ.ಎ.ಶಿವಲಿಂಗಯ್ಯ ಅವರಿಗೆ ಹಾಗೂ ಈ ಕೃತಿಯನ್ನು ಅಂದವಾಗಿ ಮುದ್ರಿಸಿದ ಗದುಗಿನ ತ್ವರಿತ ಮುದ್ರಣಾಲಯದ ಶ್ರೀ. ಫ. ಶಿ. ಭಾಂಡಗೆ ಅವರಿಗೆ ನನ್ನ ವಂದನೆಗಳು.

ಬೆಂಗಳೂರು

—ಎಸ್. ಶಿವಣ್ಣ

ಅಡಿಟಿಪ್ಪಣಿಗಳು

೧) ಬಸವರಾಜು, ಎಲ್. (ಸಂ) ಅಲ್ಲಮನ ವಚನ ಚಂದ್ರಿಕೆ, ಮೈಸೂರು, ೧೯೬೦, ಪು. ೨೩.

೨) ಬಸವರಾಜು, ಎಲ್. (ಸಂ) ಅಕ್ಕನ ವಚನಗಳು, ಮೈಸೂರು, ೧೯೬೬, xxx–xxxi

೩) ವೀರಣ್ಣ ರಾಜೂರ, (ಸಂ) ಸಂಪಾದನೆಯ ಸಿದ್ಧವೀರೇಶ್ವರದೇವರು ಸೇರಿಸಿದ ಶಿವಮಹಿಮಾಸ್ತೋತ್ರದ ವಚನ, ಕರ್ನಾಟಕ ಭಾರತಿ, ಧಾರವಾಡ, ೧೯-೨-೧೯೮೬, ೧೧೪-೪೫.

೪) ಮಾಳವಾಡ, ಸ.ಸ. (ಸಂ) ರಾಘವಾಂಕ ಚರಿತೆ, ಧಾರವಾಡ, ೧೯೫೪.

೫) ನರಸಿಂಹಾಚಾರ್. ಆರ್. ಕರ್ನಾಟಕ ಕವಿಚರಿತೆ, ದ್ವಿತೀಯ ಸಂಪುಟ, ಬೆಂಗಳೂರು, ೧೯೧೯, ಪು. ೪೫೪.

೬) ಬಸವರಾಧ್ಯ, ಎನ್. (ಸಂ) ಮೈಸೂರು, ೧೯೮೬.

೭) ಉಸ್ಮಾನಿಯ ವಿಶ್ವವಿದ್ಯಾಲಯದ ಹಸ್ತಪ್ರತಿಸೂಚಿ.

೮) ಕ್ರಮಾಂಕ '೫'ರಂತೆ, ಪು. ೫೫೫.

೯) ಕನ್ನಡ ಅಧ್ಯಯನಕೇಂದ್ರ (ಬೆಂ.ವಿ.ವಿ.) ಸಂಗ್ರಹ

೧೦) ಚನ್ನಮಲ್ಲಿಕಾರ್ಜುನ:ವೀರಶೈವ ಪಂಚಾಚಾರ್ಯಚರಿತ್ರೆ, ಮೊದಲನೆಯ ಸಂಪುಟ ಶ್ರೀ ರೇವಣಸಿದ್ಧರು, ಬ್ಯಾಡಗಿ, ೧೯೫೮.

೧೧) ಅನುಬಂಧ '೧' ನೋಡಿ.

೧೨) ಅನುಬಂಧ '೨' ನೋಡಿ.

೧೩) ಅನುಬಂಧ '೩' ನೋಡಿ,

ಪ್ರಭುದೇವರ ಸ್ತೋತ್ರದ ವಚನಗಳು

೧

ದೇವ ದೇವ ಶರಣಾರ್ಥಿ, ಅವಧರಿಸಯ್ಯಾ ಪ್ರಭುವೆ, ಎನ್ನ ಬಿನ್ನಪವ:
ಕೇಳಿದ ಸುಖ ಕಿವಿಗಳಿಗೆ ಬೇಟವಾಯಿತ್ತಯ್ಯಾ ಪ್ರಭುವೆ.
ಕಿವಿಗಳ ಬೇಟ ಕಂಗಳ ಮುಂದೆ ಮೂರ್ತಿಗೊಂಡಿತ್ತಯ್ಯಾ ಪ್ರಭುವೆ.
ಕಂಗಳ ಮುಂದೆ ಕಂಡ ಸುಖವು ಮನಕ್ಕೆ ವೇದ್ಯವಾಯಿತ್ತಯ್ಯಾ ಪ್ರಭುವೆ.
ಶಿವಶರಣರ ದರ್ಶನದ ಸುಖವನೇನೆಂದುಪಮಿಸಬಹುದು?
ಮರಣವಳಿದು ಮಹವನೊಡಗೂಡಿದ ಎನ್ನ ಅಜಗಣ್ಣತಂದೆಯನಗಲಿದ ದುಃಖ
ನಿಮ್ಮ ಸಂಗದಲ್ಲಿ ಸಯವಾಯಿತ್ತಯ್ಯಾ ಪ್ರಭುವೆ

೨

ಅಹುದಹುದು,
ಶಿವಶರಣರ ಮಹಿಮೆ ಆರಿಗೆ ಕಾಣಬಹುದಯ್ಯಾ ಪ್ರಭುವೆ?
ಕಬ್ಬುನ ಉಂಡ ನೀರಿನಂತೆ
ಕಬ್ಬಿಸಿಲುಂಡ ಅರಿಸಿನದಂತೆ
ಉರಿಯೊಳಡಗಿದ ಕರ್ಪುರದಂತೆ
ಬಯಲನಪ್ಪಿದ ವಾಯುವಿನಂತೆ—ಇಪ್ಪ ನಿಲವು
ನುಡಿದು ಹೇಳಿಹೆನೆಂಬ ಮಾತಿಗೆ ಅಳವಡುವುದೇ ಪ್ರಭುವ?
ಅಱಿವೊಡೆ ಮತಿಯಿಲ್ಲ, ನೆನೆವೊಡೆ ಮನವಿಲ್ಲ
ಎನ್ನ ಅಜಗಣ್ಣತಂದೆಯನೊಳಕೊಂಡಿಪ್ಪ ನಿಮ್ಮ ಮಹಿಮೆಗೆ
ನಮೋ ನಮೋಯೆನುತಿರ್ದೆನಯ್ಯಾ ಪ್ರಭುವೆ

೩

ಅಱಲುಗೊಂಡ ಕೆಱೆಗೆ ತೊಱೆ ಬಂದು ಹೊಯಿದಂತೆ ಎಲೆ ಅಯ್ಯಾ ಪ್ರಭುವೆ.
ನಿಮ್ಮ ಕಂಡು ಕಂಗಳು ಕಡೆಗೋಡಿವರಿದವಯ್ಯಾ ಪ್ರಭುವೆ.
ಎನ್ನ ಮನಕ್ಕೆ ಮನ ವೇದ್ಯವಾದರೆ ಕೈಮಱೆದೆನೆಲೆ, ಹಾ ಅಯ್ಯಾ ಪ್ರಭುವೆ.
ಕಪಿಲಸಿದ್ಧ ಮಲ್ಲಿನಾಥಪ್ರಭುವ ಕಂಡ ಸುಖವು ಆರಿಗೆಯೂ ಇಲ್ಲ.

೪

ಅಯ್ಯಾ, ನಿಮ್ಮ ಕಂಡ ಕಂಗಳು ನೋಡಲಮ್ಮದೆ ಬೆರ್ಚಿ ಬೆದಱಿದವಯ್ಯ ಪ್ರಭುವೆ.
ನೀನು ಶತಕೋಟಿಸೂರ್ಯಪ್ರಕಾಶಕ್ಕತೀತನು.

ನಿನ್ನ ಕಂಡ ಬಳಿಕ ಕರ್ಮವುಂಟೇ ಪ್ರಭುವೆ?
ಕಪಿಲಸಿದ್ಧ ಮಲ್ಲಿಕಾರ್ಜುನಾ.

೫

ಹರಿಯೆಂಬಾತ ನಿಮ್ಮ ಚರಣವನಱಿಯ.
ಬ್ರಹ್ಮನೆಂಬಾತ ನಿಮ್ಮ ಮ(ಕು)ಟವನಱಿಯ.
ಯತಿವ್ರತಿಋಷಿಗಳೆಂಬವರು ನಿಮ್ಮ ಒಳಗನಱಿಯರು.
ಸಮಸ್ತದೇವರ್ಕಳು ನಿಮ್ಮ ರೋಮದ ಪ್ರಮಾಣ(ವ)ನಱಿಯರು.
ಶತಕೋಟಿಸೂರ್ಯರು ನಿಮ್ಮ ಬೆಳಗ ಕಾಣಲಱಿಯರು.
ನಾ ನಿಮ್ಮನಱಿಯಬಲ್ಲನೇ ಅಯ್ಯಾ ಪ್ರಭುವೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ.

೬

ನಿಮ್ಮ ನಿಜದಂತುವನಾರು ಬಲ್ಲರಯ್ಯಾ?
ಚತುರ್ದಶಭುವನಂಗಳೆಲ್ಲವು ನಿಮ್ಮ ಕರಸ್ಥಲದೊಳಗೆ ಅಡಗಿಪ್ಪವಯ್ಯಾ ಪ್ರಭುವೆ.
ನಿಮಗೆಣೆಯಪ್ಪ ದೇವರುಂಟೇ ಮೂಲೋಕದೊಳಗೆ ಪ್ರಭುವೆ.
ಕಪಿಲಸಿದ್ಧ ಮಲ್ಲಿಕಾರ್ಜುನಾ.

೭

ಉತ್ಪತ್ಯ ಸ್ಥಿತಿ ಲಯವಿಲ್ಲದಭವ ನೀನು ಕಂಡಯ್ಯಾ ಪ್ರಭುವೆ.
ನಿನಗೆ ಬೇಱೆ ಸ್ವತಂತ್ರವಿಲ್ಲ ಕೇಳಯ್ಯಾ ಪ್ರಭುವೆ.
ನಿನ್ನ ಇಚ್ಛಾ ಮಾತ್ರದಲ್ಲಿ ನಾನಿಪ್ಪೆನಯ್ಯಾ ಪ್ರಭುವೆ.
ಹಿರಿಯ ನೀನೆ, ದೇವ ನೀನೆ, ಕಪಿಲಸಿದ್ಧ ಮಲ್ಲಿನಾಥಯ್ಯಾ
ನಾನೇತಱೊಳಗೇನಪ್ಪೆ ಹೇಳಾ ಪ್ರಭುವೆ.

೮

ಸ್ತೋತ್ರವೆಂಬುದು ನೀ ಮಾಡಲಾದುವು ಕಂಡಯ್ಯಾ ಪ್ರಭುವೆ.
ಮೂರ್ತಿಯೆಂಬುದು ನೀನು ನೆನೆದಡಾದುದು ಕಂಡಯ್ಯಾ ಪ್ರಭುವೆ.
ಅಮೂರ್ತಿಯೆಂಬುದು ನಿನ್ನ ಸ್ವಭಾವ ಕಂಡಯ್ಯಾ ಪ್ರಭುವೆ.
ಎನ್ನ ಹೃದಯಕಮಲದೊಳಗೆ ಹುಟ್ಟುವ
ಸ್ವಸ್ಮರಣೆ ನಿನ್ನ ಗತಿ ನೋಡಯ್ಯಾ ಪ್ರಭುವೆ.

ಕಪಿಲಸಿದ್ಧ ಮಲ್ಲಿನಾಥಯ್ಯಾ
ನೀನು ಸ್ತೋತ್ರಪ್ರಿಯನಲ್ಲದಿರ್ದಡೆ
ಬಾಣ ಮಯೂರ ಹಲಾಯುಧಂಗೆ ಒಲಿದೆಯೆಂತು ಹೇಳಾ ಪ್ರಭುವೆ?

೯

ವೇದಪ್ರಿಯನಲ್ಲಯ್ಯ ಪ್ರಭುವೆ ನೀನು.
ಶಾಸ್ತ್ರಪ್ರಿಯನಲ್ಲಯ್ಯ ಪ್ರಭುವೆ ನೀನು.
ನಾದಪ್ರಿಯನಲ್ಲಯ್ಯ ಪ್ರಭುವೆ ನೀನು.
ಸ್ತೋತ್ರಪ್ರಿಯನಲ್ಲಯ್ಯ ಪ್ರಭುವೆ ನೀನು.
ಯುಕ್ತಿಪ್ರಿಯನಲ್ಲಯ್ಯ ಪ್ರಭುವೆ ನೀನು.
ಮುಕ್ತಿಪ್ರಿಯನಲ್ಲಯ್ಯ ಪ್ರಭುವೆ ನೀನು,
–ಇವೆಲ್ಲಕ್ಕೂ ಅಸಾಧ್ಯ ಕಂಡಯ್ಯ ಪ್ರಭುವೆ ನೀನು.
ಭಕ್ತಿಪ್ರಿಯನೆಂದು ನಂಬಿ ಬಂದು
ನಿಮ್ಮ ಮಱಹೊಕ್ಕೆ ಕಾಯಯ್ಯಾ ಪ್ರಭುವೆ ನೀನು,
ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೦

ಎಲೆ ಅಯ್ಯಾ
ಎನ್ನ ಶಿರ ನಿಮ್ಮ ಚರಣವ ಮುಟ್ಟಿದ ಬಳಿಕ
ಎನ್ನಲ್ಲಿ ಗುಣದೋಷವನಱಸುವರೆ ಪ್ರಭುವೆ?
'ಭೃತ್ಯಾಪರಾಧಃ ಸ್ವಾಮಿನೋ ದಂಡಃ'
ಕಪಿಲಸಿದ್ಧ ಮಲ್ಲಿಕಾರ್ಜುನದೇವಾ
ತ್ರಾಹಿ ತ್ರಾಹಿ ಕಾಯಯ್ಯಾ ಪ್ರಭುವೆ.

೧೧

ಪುಣ್ಯಪಾಪಂಗಳನಱಯದ ಮುನ್ನ
ಅನೇಕಭವಂಗಳಲ್ಲಿ ಬಂದು
ನಿಮ್ಮ ನಿಲವನಱಯದೆ ಕೆಟ್ಟೆನಯ್ಯಾ ಪ್ರಭುವೆ.
ಇಂದು ನಿಮಗೆ ಶರಣಾಗತಿವೊಕ್ಕೆನು.
ನಾ ನಿಮ್ಮನೆಂದೂ ಅಗಲದಂತೆ ಮಾಡಯ್ಯಾ ಪ್ರಭುವೆ ನಿಮ್ಮ ಧರ್ಮ.
ಇದೊಂದನೆ ಬೇಡುವೆನು

ಎನ್ನ ಕರ್ಮಬಂಧನ ಬಿಡುವಂತೆ ಉಪದೇಶವ ಮಾಡಯ್ಯಾ ಪ್ರಭುವೆ.
ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೨

ಆದಿಯಲ್ಲಿ ನಿಮ್ಮಿಂದ ಅನಾದೆನಯ್ಯಾ ಪ್ರಭುವೆ.
ಅನಾದಿಯಲ್ಲಿ ನಿಮ್ಮೊಳಗೆ ತದುಗತನಾಗಿರ್ದೆನಯ್ಯಾ ಪ್ರಭುವೆ.
ನಿಮ್ಮ ಹಸ್ತವೆನ್ನ ಮಸ್ತಕವ ಮುಟ್ಟಿದಲ್ಲಿ
ಎನ್ನ ಮನದೊಳಗೆ ನಿಮ್ಮ ನಿಂಬಿಟ್ಟುಕೊಂಡಿರ್ದೆನಯ್ಯಾ ಪ್ರಭುವೆ.
ಕಾಯವೆಂಬ ಕಪಟವನೊಡ್ಡಿ ಅಹಂ ಮಮತೆಯಿಂದ ಮಱದಿರ್ದಡೆ
ನಿಮ್ಮ ಕೃಪಾವಲೋಕನದ ಬೆಂಬಳಿಯ ಸಂದು ನಿಮ್ಮ ಕಂಡೆನಯ್ಯಾ ಪ್ರಭುವೆ,

ಕಪಿಲಸಿದ್ಧ ಮಲ್ಲಿನಾಥಯ್ಯಾ,
ಎನ್ನ ಅಂತರಂಗವ ಶುದ್ಧಮಾಡಿ,
ನಿಮ್ಮ ನಿಜದುಳುಮೆಯ ತಿಳುಹಿಕೊಡಯ್ಯಾ ಪ್ರಭುವೆ,
ನಿಮ್ಮ ಧರ್ಮದ ಶಿಶುವಾನಯ್ಯಾ.

೧೩

ಅಯ್ಯಾ, ನಿಮ್ಮ ಕರಸ್ಥಲದ ಘನವನುಪಮಿಸಬಲ್ಲವರಿಲ್ಲಯ್ಯಾ ಪ್ರಭುವೆ,
ನಿಮ್ಮ ಮಹಿಮೆಯನಱವರೆ ನಾನೇತಱೊಳಗೇನಯ್ಯಾ ಪ್ರಭುವೆ.
ಆ ಇಷ್ಟಲಿಂಗವ ಮುಟ್ಟಿದ ಶರಣನೊಳಗೆ
ಹುಟ್ಟಿದ ಸ್ಥಲವೆಷ್ಟೆಂಬುದ ತಿಳುಹಿ ಎನ್ನನುಳುಹಿಕೊಳ್ಳಾ ಪ್ರಭುವೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೪

ಅಯ್ಯಾ, ನಿಮ್ಮ ಸರ ಉಂಡ ಶಬುದವೆನ್ನ ಮನಕ್ಕೆ ವೇದ್ಯವಾಯಿತ್ತು ಪ್ರಭುವೆ.
ನಿಮ್ಮ ನಿಜ ಉಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು ಪ್ರಭುವೆ.
ನಿಮ್ಮ ಕರುಣಪ್ರಸಾದವೆನ್ನ ಸರ್ವಾಂಗಕ್ಕೆ ವೇದ್ಯವಾಯಿತ್ತು ಪ್ರಭುವೆ,
ನಿಮ್ಮ ಕಾಯವಿಡಿದಿಪ್ಪ ಕರಸ್ಥಲದ ಕಾರಣವ ಹೇಳಾ ಪ್ರಭುವೆ.
ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೫

ಉಪಮೆ ಅನುಪಮೆಯೆಂಬುದು ನಿಮ್ಮಾಧೀನ ಕಂಡಯ್ಯಾ ಪ್ರಭುವೆ.
ಹೇಳಿಹೆ ಕೇಳಿಹೆನೆಂಬುದು ನೀನೆ ಕಂಡಯ್ಯಾ ಪ್ರಭುವೆ.
ಎನ್ನ ಅಂತರಂಗ ಬಹಿರಂಗಕ್ಕೆ ನೀನೆ ಕರ್ತನಾದ ಕಾರಣ
ನಿಮ್ಮ ನಿಜವ ಹೇಳದಿರ್ದಡೆಯೆಂತು ನಾನುಳಿವೆನಯ್ಯಾ ಪ್ರಭುವೆ
ಕಪಿಲಸಿದ್ಧ ಮಲ್ಲಿನಾಥಯ್ಯಾ.

೧೬

ನೀರುಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲುದು ನೋಡಯ್ಯಾ ಪ್ರಭುವೆ.
ದೇಹದ ಜೀವದ ಸಂದ ನೀವು ಬಿಚ್ಚಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ ಪ್ರಭುವೆ?
ನೀನಿಕ್ಕಿದ ತೊಡಕ ಬಿಡಿಸಬಾರದು
ನೀವು ಬಿಡಿಸಿದ ತೊಡಕನಿಕ್ಕಬಾರದಯ್ಯಾ ಪ್ರಭುವೆ.
ಕಪಿಲಸಿದ್ಧ ಮಲ್ಲಿನಾಥಯ್ಯಾ
ನೀನೆನ್ನ ಕಾಯದ ಜೀವದ ಹೊಲಿಗೆಯ ಬಿಡಿಸಾ ಪ್ರಭುವೆ ನಿಮ್ಮ ಧರ್ಮ.

೧೭

ನಾನೇನ ಮಾಡುವ ಜ್ಞಾನಕ್ರೀಯೆಲ್ಲವು ನೀನೆ ಎಂದಿರ್ದೆನಯ್ಯಾ ಪ್ರಭುವೆ.
ನಾನೇನ ಮಾಡುವ ಅಱುವಿನ ಕ್ರೀಯ ನೀನೆ ಅಲ್ಲವೆಂದರೆ
ಆದು ಮಾಣಲಿ, ಮಾಣಲಿ ನಿಮ್ಮಾಣತಿ.
ಕಾಣಬಾರದ ಘನವ ಕಾಯದಲ್ಲಿ ಧರಿಸಿ
ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ
ತೋಱಬಾರದ ಕುಱುಹ ಎನ್ನ ಅಱುವಿನಲ್ಲಿಯಿರಿಸಿ
ಇನ್ನು ನಿಮ್ಮ ಕೂಡೆಯಿಪ್ಪಂತೆ ಮಾಡಾ ಪ್ರಭುವೆ
ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೮

ಅಂಗವಿಸದಿರು ಇನ್ನು ಹಿಂಗಿ ಹೋಗೆಂದೆನುತ
ಮಂಗಳಾತ್ಮಕ ನುಡಿದ ಗುರುಕರುಣದಾ.
ಅಂಗವಿಸದಿರುಯೆಂದು ಅನಂಗಹರ ಪ್ರಭುರಾಯ,
ಬಂದು ನೂಂಕಿದನೆನ್ನನೇಡಿಸುವ ಮಾಯೆಯನು.

ಮಂಗಳಾತ್ಮಕ ಕಪಿಲಸಿದ್ಧ ಮಲ್ಲಿಕಾರ್ಜುನ
ಲಿಂಗ ನಿಮ್ಮನು ಅಱಿದೆ ಮಾಯೆಯನು ಗೆಲಿದೆ ಪ್ರಭುವಿನಿಂದಲಿ.

೧೯

ಕೆಱೆ ತೊಱೆ ದೇಗುಲಂಗಳ ಕಡೆಯಿಂದ ನಿಮ್ಮ ಕಂಡೆನು ಪ್ರಭುವೆ.
ಎಡಹುವ ಕಲ್ಲತೆಗವ ಮಱೆಯಲ್ಲಿ ನಿಧಾನವ ಕಂಡಂತೆ
ಎನ್ನ ಮಱವೆಯ ತಮದ ಅದ್ರಿಗೆ ದಿನಮಣಿ ಜನಿಸಿದಂತೆ
ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವೆಂಬ ಭ್ರಾಂತು
ಸ್ವಯವಾಯಿತ್ತು ಪ್ರಭುದೇವರ ಕಾರುಣ್ಯದಿಂದಾ.

೨೦

ಕರಸ್ಥಲಕ್ಕೆ ಕರುಣದ ಸುಧಾಪ್ರಸಾದ ಬರೆ
ಅದು ಲಿಂಗವಾಯಿತ್ತೈ ಎನ್ನ ಒಳಗು ಹೊಱಗು
ಎಲೆ ಮಾಯೆ ನೀನೆನ್ನನೊರೆದು ನೋಡಿಹೆನೆನಲು ಹುರುಳುಗೆಡುವೆ,
ನೀನೆನ್ನೊಡೆಯ ಪ್ರಭುರಾಯನಿಂದಲು.
ಕಾಡದೆ ನೀ ಹೋಗು ನಾ ಕಾಡುವೆನುಯೆನುತ
ಆಱೂಢದಿಂ ಶ್ರೀ ಯೋಗಿನಾಥಪದವಾ.

೨೧

ನಿಯಮ ಸಿಂಹಾಸನೋಪ
ಸಮಯ ಕಾಲ ಗುಣ ಕಲ್ಪಿತ ನಾಶನೆ ನಮೋ ಪ್ರಭುವೆ.
ಇಷ್ಟೋಪದೃಷ್ಟಿಸಮಯೇಕಂ ನಮೋ ಪ್ರಭುವೆ.
ರಕ್ಷಾಗುಣಕಲ್ಪಿತಂ ನಮೋ ಪ್ರಭುವೆ.
ಪಾಲಿಸು ಪ್ರಸಾದವ ಕಪಿಲಸಿದ್ಧ ಮಲ್ಲಿನಾಥಪ್ರಭುವೆ.

೨೨

ಅಯ್ಯಾ ಅಯ್ಯಾ ನೀನು ಬಾರದಿದ್ದರೆ ಅಂತು ಹಂಬಲಿಸುತ್ತಿದ್ದೆನಯ್ಯಾ ಪ್ರಭುವೆ.
ಎನ್ನ ಹಂಬಲ ಕೇಳಿ ಕರುಣದಿಂದ ಭೋರನೆ ಬಂದರೆ
ಆನು ತಳವೆಳಗಾಗಿ ಅವಗುಣವೆಂಬ ರಜವ ಕಳೆದು
ಕಂಬಳಿಯ ಪೀಠವನೊಲ್ಲದೆ ಹೃದಯ ಪೀಠವನಿಕ್ಕಿ
ಮೇಲುಪ್ಪರಿಗೆಯ ಒಱತೆಯ ತಂದು, ಪಾದಾರ್ಚನೆಯ ಮಾಡಿ

ಎರಡೆಸಳ ಕಮಲವನೆರಡು ಪಾದಕ್ಕೆ ಪೂಜಿಸಿ
ಕಂಗಳ ತಿರುಳ ತೆಗದು ಆರತಿಯನೆತ್ತಿ
ಉಸುರ ನುಂಗಿದ ಪರಿಮಳದ ಧೂಪಮಂ ಬೀಸಿ
ನೆತ್ತಿಯ ಪರಿಯಾಣದೊಳಟ್ಟ ಬೋನವ ಗಡಣಿಸಿದರೆ
ಸಯದಾನ ಸವೆಯದೆ ಆರೋಗಣೆಯ ಮಾಡಿ,
ಉಂಡ ಬಾಯ ತೊಳೆದರೆ ಸಂದೇಹವಾದೂದೆಂದು
ಮೇಲು ಸೆಱಗಿನೊಳಗೆ ತೊಡದುಕೊಂಡು
ಬಾಯಮುಚ್ಚುಳ ತೆಗೆಯದೆ,
ತ್ರಿಕರಣವೆಂಬ ತಾಂಬೂಲನವಧರಿಸಿದ ಪ್ರಭುದೇವರು.
ಭಾವದ ಕನ್ನಡವ ಹಱಿದು ಹಾಕಿದ ಪ್ರಭುದೇವರು.
ಆತನ ಪಾದಕ್ಕೆ ನಾನು ಶರಣೆಂದು ಪಾದೋದಕವ ಕೊಂಡೆ.
ಆತನ ಪ್ರಸಾದಕ್ಕೆ ಎನ್ನ ಸೆಱಗ ಹಾಸಿ ಆರೋಗಿಸಿ ಸುಖಿಯಾದೆನು.
ಕಲಪಿಸಿದ್ಧ ಮಲ್ಲಿಕಾರ್ಜುನಯ್ಯಾ ನಿಮ್ಮ ಶರಣ ಪ್ರಭುದೇವರ ಕರುಣವೆನಗೆ
ಸಾಧ್ಯವಾದ ಪರಿಯನೇನೆಂದುಪಮಿಸುವೆನು?

೨೩

ತ್ರಾಹಿ ತ್ರಾಹಿ ದಯಗುಣ ಮನಜ್ಞಾನಿ ಪ್ರಭುವೆ.
ತ್ರಾಹಿ ತ್ರಾಹಿ ಶಿವಭಕ್ತಿದಾಯಕ ಪ್ರಭುವೆ.
ತ್ರಾಹಿ ತ್ರಾಹಿ ಹೃತ್ಕಮಲವಾಸಿನೀ ಪ್ರಭುವೆ.
ತ್ರಾಹಿ ಮಾಂ ಪರಮಗುರುವೆ ಪ್ರಭುವೆ.
ತ್ರಾಹಿ ಮಾಂ ಪ್ರಾಣಲಿಂಗಸಂಬಂಧಿ ಪ್ರಭುವೆ.
ತ್ರಾಹಿ ಮಾಂ ಕಪಿಲ ಸಿದ್ಧಮಲ್ಲಿನಾಥ ಪ್ರಭುವೆ.

೨೪

ಎಲೆ ಅಯ್ಯಾ, ನಿಮ್ಮ ನಚ್ಚಿನ ಮಚ್ಚಿನ ಶರಣರನಂಗದಲ್ಲಿರಿಸಿ ಎನ್ನನಾಗು ಮಾಡಿದಿರಿ.
ಹಾ ನಿಮ್ಮ ಕರುಣವನೇನೆಂದುಪಮಿಸುವೆನಯ್ಯಾ ಪ್ರಭುವೆ.
ಎರಡು ಪುರವ ಮೆಟ್ಟಿ ಮೇಲುಪುರವ ನೋಡುತ್ತಿರ್ದೆನಯ್ಯಾ ಪ್ರಭುವೆ.
ಮೇಲುಪುರವ ಭೇದಿಸಲೊಡನೆ ಆನು ನೀನಾದೆನಯ್ಯಾ ಪ್ರಭುವೆ.
ಕಪಿಲಸಿದ್ಧ ಮಲ್ಲಿನಾಥ,
ನಿಮ್ಮ ಶರಣ ಪ್ರಭುದೇವರ ಕರುಣದಿಂದ ಆನು ಬದುಕಿದೆ.

೨೫

ಭವರೋಗವೈದ್ಯನೆಂದು ನಂಬಿದೆ ನಾನು,
ಒಮ್ಮಿಗೆ ಕರುಣಿಸಯ್ಯಾ ಪ್ರಭುವೆ.
ಭಕ್ತಿಫಲದಾಯಕ ನೀನು,
ಒಮ್ಮಿಗೆ ಕರುಣಿಸಯ್ಯ ಪ್ರಭುವೆ.
ಜಯ ಜಯ ಶ್ರೀಮಹಾದೇವಾಯೆಸುತಿರ್ದೆನು ಪ್ರಭುವೆ.
ಕೂಡಲ ಸಂಗಮದೇವಯ್ಯಾ,
ನಿಮ್ಮ ಶ್ರೀಪಾದಕ್ಕೆ–
ನಮೋ ನಮೋಯೆನುತಿರ್ದೆನಯ್ಯಾ ಪ್ರಭುವೆ.

೨೬

ಮನ ಮುಟ್ಟಿದ ಭಕ್ತಿಗೆ ತನುವೆ ಅರ್ಪಿತ.
ತನು ಮುಟ್ಟಿದ ಭಕ್ತಿಗೆ ಮನವೆ ಅರ್ಪಿತವಯ್ಯಾ ಪ್ರಭುವೆ.
ಎನ್ನ ತನು–ಮನವೆರಡೂ ನಿಮ್ಮ ಚರಣಕ್ಕೆ ವೇದ್ಯ ನೋಡಯ್ಯಾ ಪ್ರಭುವೆ.
ದೀರ್ಘದಂಡ ನಮಸ್ಕಾರಂ। ನಿರ್ಲಜ್ಜಾ ಗುರುಸನ್ನಿದೌ।
ಶರೀರಮರ್ಥಪ್ರಾಣಂ ಚ। ಸದ್ಗುರುಭ್ಯೋ ನಿವೇದಯೇತ್॥
–ಎಂದುದಾಗಿ
ತ್ರಾಹಿ ತ್ರಾಹಿ ಶರಣಾರ್ಥಿ ನೀವೆ ಬಲ್ಲಿರಿ ಪ್ರಭುವೆ
ಕೂಡಲ ಸಂಗಮದೇವಾ.

೨೭

ಎನ್ನ ಶಿರ ನಿಮ್ಮ ಚರಣವ ಒರಸೊರಸಿ ಬೆರಸಿ ಭೇದವಿಲ್ಲಯ್ಯಾ ಪ್ರಭುವೆ.
ಎನ್ನ ಕಾಯದ ಕಪಟ
ಎನ್ನ ಮನದ ವಿಕಾರ
ನಿಮ್ಮ ಅಂಗುಷ್ಠದ ಮೊನೆಯ ಸೋಂಕಲೊಡನೆ ಹಱಿದುದು ನೋಡಯ್ಯಾ ಪ್ರಭುವೆ.
ಕೂಡಲ ಸಂಗಮದೇವಾ
ನಿಮ್ಮ ಶ್ರೀಪಾದದ ಬೆಳಗ ಕಂಡು
ಎನ್ನ ಅಂತರಂಗದ ಕತ್ತಲೆ ಓಡಿತ್ತಯ್ಯಾ ಪ್ರಭುವೆ.

೨೮

ಕತ್ತಲೆಯ ನುಂಗಿದ ದೀಪದ ಬೆಳಗಿನಂತೆ,
ಕರ್ದಮುವನೀಂಟಿದ ಸುಜಲದಂತೆ,
ಮಧುರರಸವನಱಿವ ಜಿಹ್ವೆಯಂತೆ,
ಎನ್ನ ಕಂಗಳಿಗೆ ದೃಷ್ಟವಾಗಿ,
ಮನಕೆ ಮನೋಹರವಾಗಿ,
ಕೂಡಲ ಸಂಗಮದೇವರಲ್ಲಿ
ಪ್ರಭುದೇವರ ಸುಳುಹು ಚಿನ್ಮಯವಾಯಿತ್ತು.

೨೯

ಮರುಗದ ಗಿಡುವಿನಂತೆ ಹುಟ್ಟುತ್ತಲೆ ಪರಿಮಳ,
ಎರವಿನ ಬಣ್ಣದೊರೆಗೆಡಿಸಿದ ಪರಿಯ ನೋಡಾ.
ಹರನ ಪ್ರೇರಣೆಯೊಳಗೆ ಹಿರಿದೊಂದು ವಾರುಧಿ.
ಆ ವಾರುಧಿಯೊಳಗಣ ಕಮಲ ಬಾಡಿ
ಕಮಲದೊಳಗೆ ಸುಳಿವ ಭ್ರಮರನ ಪಕ್ಕ ಮುಱಿದು
ಉರುಳಿದರೆ ನಿರಂಜನವಾಯಿತ್ತು ನೋಡಾ.
ಹಱಿಗೊಯಿದ ಮಿಂಚಿನ ಗೊಂಚಲ ನೆಱೆವೋತು
ಇಂದುಕೋಟಿಯ ಪ್ರಭೆಯು ಶಾಂತಿಯನೊಳಕೊಂಡು
ಕೂಡಲ ಸಂಗಮದೇವರ ನೆಱೆ ಓತ ಪ್ರಭುದೇವರ
ಶ್ರೀಪಾದಪದ್ಮದಲ್ಲಿ ಭೃಂಗನಾಗಿ ನಾನು ಬದುಕಿದೆನೂ.

೩೦

ನೀಲದ ಮಣಿಯೊಂದು ಮಾಣಿಕವ ನುಂಗಿದರೆ
ವಜ್ರ ಒಂದು ಅದ ಬೇಡವೆಂದು ಉಗುಳಿಸಿತ್ತು ನೋಡಾ.
ಅಡಗಿರ್ದ ಮಾಣಿಕ್ಯ ನೀಲದ ತಲೆಯ ಮೆಟ್ಟಿ ಆನಂದ ನಾಟ್ಯವನಾಡುತಿದ್ದಿತ್ತು.
ಅಂಬರದೊಳಗಣ ಮಬಗ್ದೆ ಕಂಗಳ ಮುತ್ತಿನ ಮಣಿಯ
ಮಥನವಿಲ್ಲದೆ ನುಂಗಿ ಉಗುಳುತ್ತಿರ್ದಳು.
ಲಿಂಗಜಂಗಮುವೆಂಬುದ ಇಂದಱಿದು ಸುಖಿಯಾದೆನು,
ಕೂಡಲ ಸಂಗಮದೇವರಲ್ಲಿ ಪ್ರಭುವಿನ ಕೃಪೆಯಿಂದ ನಾನು ಬದುಕಿದೆನು.

೩೧

ಆದಿಯುನಱುಹಿದ – ಅನಾದಿಯು ತೋಱಿದ ಪ್ರಭುದೇವರು.
ಇಹವ ಕೆಡಿಸಿದ – ಪರವ ನಿಲಿಸಿದ ಪ್ರಭುದೇವರು.
ಘನವ ತೋಱಿದ – ಮನವ ಸಂತವಿಟ್ಟ ಪ್ರಭುದೇವರು.
ಅನುವ ತೋಱಿ ಆಯತವ ಮಾಡಿ
ತನುವ ವಱಿಸಿ ಮಹವನಱುಪಿದ ಪ್ರಭುದೇವರು.
ಹಿಂದಣ ಪೂರ್ವಾಶ್ರಯವ ಹಿಂದಕ್ಕೆ ತೋಱಿ
ಮುಂದಣ ಗತಿಯ ಸಂದೇಹವಂ ಬಿಡಿಸಿದ ಪ್ರಭುದೇವರು.
ಕೂಡಲಸಂಗಮದೇವರಲ್ಲಿ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋಯೆನುತಿರ್ದೆನೂ.

೩೨

ಅಯ್ಯಾ ನಿಮ್ಮ ಮಹಾನುಭಾವಿಗಳ ಸಂಗದಿಂದೆನ್ನ
ತನು ಶುದ್ಧವಾಯಿತ್ತು.
ಮನು ಶುದ್ಧವಾಯಿತ್ತು.
ಧನ ಶುದ್ಧವಾಯಿತ್ತು.
ಎನ್ನ ಸರ್ವಾಂಗಶುದ್ಧವಾಯಿತ್ತು.
ವಾರಿಕಲ್ಲ ಪುತ್ಥಳಿಯನಪ್ಪಿಕೊಂಡಂತಾಯಿತ್ತು.
ಕೂಡಲಸಂಗಮದೇವಾ
ನಿಮ್ಮ ಶರಣ ಪ್ರಭುದೇವರ ಕೃಪೆಯಿಂದ
ಎನಗೊದಗಿದ ಘನವನೇನೆಂದುಪಮಿಸುವೆನು?

೩೩

ವೀರ ದನುಜರೆಲ್ಲಾ ಧಾರುಣಿ ಎಂಬುದರೊಳಗೆ
ಸಾರಂಗವಾಗಿರ್ದುದನಾರೂ ಅಱಿಯರಲ್ಲಾ.
ದ್ವಾರಾವತಿಯ ಪುರದೊಳಗೆ ಪರವು ಬಂದಿರ್ದಡೆ
ಶರೀರ ಸಂಬಂಧವ ಮಾಡಲಱಿಯರಲ್ಲಾ.
ಕರಗಸವ ತಳೆದುಕೊಂಡು ಪರಶುರಾಮನ ಗೆಲಿದು
ಸುರರೊಳಗೆ ಸುಳಿದಾಡಲಱಿಯರಲ್ಲಾ.
ವಾರುಧಿಯನೇಱಿಕೊಂಡು ಮರಣವೆಂಬುದ ನಿಲಿಸಿ
ತ್ರಿಪುರವ ಮೂರ್ತಿಗೊಳಿಸಲಱಿಯರಲ್ಲಾ.

ಮೇರುವೆಂಬುದ ಹೊಕ್ಕು ನೂಱಿಂಟನೆಣಿಸಿಕೊಂಡು
ನಿರಾಕಾರದಲಡಗುವರಿನ್ನಾರು ಹೇಳಾ?
ಸಾಸಿರದ ಮೇಲೆ ನೂಱಿಂಬತ್ತೆಂಟು ರಾಸಿ
ಪರುಷವೇಧಿಗಳಾಗಲಱಿಯರಲ್ಲಾ.
ಕೂಡಲಸಂಗನ ಶರಣರ ಸಂಬಂಧವು
ಪ್ರಭುವಿಂಗಲ್ಲದೆ ಮತ್ತಾರಿಗೆಯೂ ಅಳವಡದೂ.

೩೪

ಜನನವಿಲ್ಲದ ಜನಿತನು ನೀನು ಕಂಡಯ್ಯಾ ಪ್ರಭುವೆ.
ಜನಿಯಿಸಿ ಸಂಸಾರವನಱಿಯದ ನಿರ್ವಿಕಾರಿ ನೀನು ನೋಡಯ್ಯಾ ಪ್ರಭುವೆ.
ಭವಬಂಧನಂಗಳಿಲ್ಲದ ನಿತ್ಯ ನಿಜತತ್ವವು ನೀನು ಕಂಡಯ್ಯಾ ಪ್ರಭುವೆ.
ನಿಮ್ಮ ಚರಣ ಸೇವೆಯ ಮಾಡಿ
ಎನ್ನ ಭವಹಱಿಯಲೆಂದಿಪ್ಪೆನಲ್ಲದೆ
ನಿಮ್ಮ ಘನವೆಂತೆಂದು ಅಱಿಯೆ ನೋಡಯ್ಯಾ ಪ್ರಭುವೆ.
ಕೂಡಲ ಸಂಗಮದೇವಾ
ನೀನು ಕೊಂಡಾಡಲಾನು ಪ್ರಾಪ್ತನೇ ಹೇಳಾ ಪ್ರಭುವೆ.

೩೫

ಲಿಂಗ ಜಂಗಮ, ಜಂಗಮ ಲಿಂಗವೆಂಬುದನೆನಗೆ
ತೋಱಿದವರಾರಯ್ಯಾ ಪ್ರಭುವೆ ನೀವಲ್ಲದೆ?
ಲಿಂಗವ ಪೂಜಿಸಿದರೆ ಭವ ಹಱಿಯುದೆಂದು
ಜಂಗಮಮುಖ ಲಿಂಗವಾಗಿ ಬಂದು ಶಿಕ್ಷಿಸಿ ರಕ್ಷಿಸಿ
ಎನ್ನ ಆದಿ ಅನಾದಿಯ ತೋಱಿ
ಪ್ರಾಣಲಿಂಗ ಜಂಗಮವೆಂದು
ಎನಗೆ ಪ್ರತಿಷ್ಠಿಸಿ ತೋಱಿದಿರಾಗಿ
ಕೂಡಲಸಂಗಮದೇವಾ
ನಿಮ್ಮಿಂದಲಾನು ಬದುಕಿದೆನು ಕಾಣಾ ಪ್ರಭುವೆ.

೩೬

ನಿಮ್ಮ ಕಂಡು ಕೈಮುಗಿದು ನಿಮಗೆ ಭಕ್ತನಾದೆನಲ್ಲದೆ
ನಿಮ್ಮ ಕಾಣದಿರ್ದಡೆ ಕೈಮುಗಿವ ಭಕ್ತಿಯುಂಟೇ ಅಯ್ಯಾ ಪ್ರಭುವೆ?

ನಿಮ್ಮ ಮುಟ್ಟಿ (ಪೂಜಿಸಿ) ಆಚಾರಿಯಾದೆನಲ್ಲದೆ
ನಿಮ್ಮ ಮುಟ್ಟದಡೆನಗೆ ಆಚಾರವೆಲ್ಲಿಯದಯ್ಯಾ ಪ್ರಭುವೆ?
ನಿಮ್ಮ ಘನವ ಮನದಲ್ಲಿ ಧರಿಸಿದ ಕಾರಣ ಜ್ಞಾನೋದಯವಾಯಿತ್ತಲ್ಲದೆ
ನೀವಿಲ್ಲದಡೆನಗೆ ಜ್ಞಾನವೆಲ್ಲಿಯದಯ್ಯಾ ಪ್ರಭುವೆ?
ಇಂತು ಆವ ಮುಖದಲ್ಲಿಯೂ ಎನ್ನ ಆಗು ಮಾಡಲೆಂದು ನೀನು ಮುಂದಿರ್ದ ಕಾರಣ
ನಿಮ್ಮ ಸನ್ನಿಧಿಯಿಂದಲಾನು ಸದಾಚಾರಿಯಾದಡೆ
ನಿಮಗಾನು ಸರಿಯೆ ಪ್ರಭುವೆ?
ಕೂಡಲ ಸಂಗಮದೇವಾ
ಜಂಗಮಮುಖದಿಂದ ಸಂಗನಬಸವಣ್ಣ ಬದುಕಿದನೆಂಬುದ
ಮೂಜಗಲೋಕವೆಲ್ಲವು ಬಲ್ಲದು ಕಾಣಾ ಪ್ರಭುವೆ.

೩೭

ಜಂಗಮವೆ ಜ್ಞಾನರೂಪು, ಭಕ್ತನೆ ಆಚಾರರೂಪೆಂಬುದು
ತಪ್ಪದು ನೋಡಯ್ಯಾ ಪ್ರಭುವೆ.
ನಾನು ನಿಮ್ಮಲ್ಲಿ ಆಚಾರಿಯಾದೊಡೇನಯ್ಯಾ ಪ್ರಭುವೆ, ಜ್ಞಾನವಿಲ್ಲದನ್ನಕ್ಕರ?
ತಲೆಯಿಲ್ಲದ ಮುಂಡದಂತೆ
ಜ್ಞಾನ ಉದಯವಾಗದ ಮುನ್ನವೆ
ತಲೆದೋಱುವ ಆಚಾರವುಂಟೆ ಪ್ರಭುವೆ ಜಗದೊಳಗೆ?
ಜ್ಞಾನದಿಂದಲಾಚಾರ, ಜ್ಞಾನದಿಂದ ಅನುಭವ,
ಜ್ಞಾನದಿಂದ ಪ್ರಸಾದವಲ್ಲದೆ
ಜ್ಞಾನವನುಳಿದು ತೋಱುವ ಘನವ ಕಾಣೆನು ಪ್ರಭುವೆ.
ಎನ್ನಾಚಾರಕ್ಕೆ ನೀನು ಜ್ಞಾನರೂಪಾದ ಕಾರಣ
ಸಂಗನಬಸವಣ್ಣನೆಂಬ ಹೆಸರುವಡೆದೆನು ಪ್ರಭುವೆ.
ಅನಾದಿಪರಶಿವನು ನೀನೆಯಾಗಿ
ಘನಚೈತನ್ಯಾತ್ಮಕನೆಂಬ ಮಹಾಜ್ಞಾನವು ನೀನಾದೆಯಲ್ಲದೆ
ನಾನೆತ್ತ ಶಿವತತ್ವವೆತ್ತಲಯ್ಯಾ ಪ್ರಭುವೆ?
ಕೂಡಲ ಸಂಗಮದೇವರು ಸಾಕ್ಷಿಯಾಗಿ
ನಾನು ಪ್ರಭುದೇವರ ತೊತ್ತಿನ ಮಗನೆಂಬುದ
ಮೂಜಗಲೋಕವೆಲ್ಲವು ಬಲ್ಲುದು ಕಾಣಾ ಪ್ರಭುವೆ.

೩೮

ಕಂಗಳಲಿಂಗ ಕರಸ್ಥಲದ ನೋಟ
ಅಂಗವಿಕಾರವೆಂಬುದನಱಿಯ ನೋಡಾ ಪ್ರಭುದೇವರು.
ಮನದ ಕೊನೆಯ ಮೊನೆಯ ಮೇಲಣ ಸುಭಾವ ಗಮನಗೆಟ್ಟು
ಭಾವನಿರ್ಭಾವವೆಂಬುದನಱಿಯ ನೋಡಾ ಪ್ರಭುದೇವರು.
ಕೂಡಲಸಂಗಮದೇವರಲ್ಲಿ
ಪ್ರಭುದೇವರಿಂದಲಾನು ಬದುಕಿದೆನು ಕಾಣಾ
ಚೆನ್ನಬಸವಣ್ಣಾ.

೩೯

ಕಾಲಿಲ್ಲದೆ ನಡೆವನು ಪ್ರಭುದೇವರು.
ಕೈಯಿಲ್ಲದೆ ಹಿಡಿವನು ಪ್ರಭುದೇವರು.
ಕಣ್ಣಿಲ್ಲದೆ ನೋಡುವನು ಪ್ರಭುದೇವರು, ಸಹಜವಾಗಿ.
ಮೈಯಿಲ್ಲದ ಬಣ್ಣ ಮಥನವಿಲ್ಲದ ಕೂಟ
ಆಲಿ ಸೈವೆಱಗಾಗಿ ಶಿಲೆಯ ಮೇಲೆ ಒಡಲು ತನ್ನನಱಿಯದು
ಒಡಲ ತಾನಱಿಯದು.
ಬಿಡದೆ ಎನ್ನ ಬೆಂಬತ್ತಿ ಬಂದ ಪ್ರಭುದೇವರ ಪರಿಯ ನೋಡಾ.
ಜಡವಿಡದ ಎನ್ನ ಕಾಯದ ಕಳವಳವ ತಿಳುಹಲೆಂದು
ಅಡಿಗಡಿಗೆ ಅನುಭಾವವ ತೋಱುತ್ತಲಿವಾನೆ ಪ್ರಭುದೇವರು.
ಕುಳ್ಳಿರ್ದಡೆಯಲ್ಲಿ ಕುಂಟ,
ನಿಂದಿರ್ದಡೆಯಲ್ಲಿ ಹೆಳವ,
ಎಲ್ಲಿ ನೋಡಿದಡಲ್ಲಿ ಪರಿಪೂರ್ಣನು ಪ್ರಭುದೇವರು.
ಮೆಲ್ಲಮೆಲ್ಲನೆ ಒಳಗನೊರೆದು ತೋಱುತ್ತಲೈದಾನೆ ಪ್ರಭುದೇವರು.
ಬಲ್ಲವರೆಲ್ಲಾ ನೀವು ಬದುಕಿರೆಂದು
ಝಲ್ಲರಿಯ ಮೇಲೊಂದು ಬೆಳುಗೊಡೆಯ ಹಿಡಿದುಕೊಂಡು
ಬಲ್ಲಿದನಾನೆಯ ತಡದು ನಿಲಿಸಬಲ್ಲನು ಪ್ರಭುದೇವರು.
ಕೂಡಲಸಂಗಮದೇವರ ಮಹಾಮನೆಯಲ್ಲಿ
ಪ್ರಭುದೇವರನು ಮಱೆಹೊಕ್ಕು ಬದುಕಿದೆನು.

೪೦

ಹೊನ್ನಿಂಗೆಂದು ಬಂದಾತನಲ್ಲ ಪ್ರಭುದೇವರು.
ಹೆಣ್ಣಿಂಗೆಂದು ಬಂದಾತನಲ್ಲ ಪ್ರಭುದೇವರು.
ಮಣ್ಣಿಂಗೆಂದು ಬಂದಾತನಲ್ಲ ಪ್ರಭುದೇವರು.
ಆಶನಕ್ಕೆಂದು ಬಂದಾತನಲ್ಲ ಪ್ರಭುದೇವರು,
ವ್ಯಸನಕ್ಕೆಂದು ಬಂದಾತನಲ್ಲ ಪ್ರಭುದೇವರು.
ಎನ್ನ ಆಗುಮಾಡ ಬಂದ ಅನುಪಮನು
ಕೂಡಲ ಸಂಗಮದೇವರ ಮಹಾಬೆಳಗಿನೊಳಗೆ
ಇಂಬಿಡ ಬಂದನಯ್ಯ ಪ್ರಭುದೇವರು.

೪೧

ಹೊನ್ನಿನಾಪ್ಯಾಯನಕ್ಕೆ ಬೋಳಾದವನಲ್ಲ ಪ್ರಭುದೇವರು.
ಹೆಣ್ಣಿನಾಪ್ಯಾಯನಕ್ಕೆ ಬೋಳಾದವನಲ್ಲ ಪ್ರಭುದೇವರು.
ಮಣ್ಣಿನಾಪ್ಯಾಯನಕ್ಕೆ ಬೋಳಾದವನಲ್ಲ ಪ್ರಭುದೇವರು.
ಹಸಿವಿನಾಪ್ಯಾಯನಕ್ಕೆ ಬೋಳಾದವನಲ್ಲ ಪ್ರಭುದೇವರು.
ವಿಷಯದಾಪ್ಯಾಯನಕ್ಕೆ ಬೋಳಾದವನಲ್ಲ ಪ್ರಭುದೇವರು.
ಕೂಡಲ ಸಂಗಮದೇವರಲ್ಲಿ ಎನಗಾಗಿ ಬೋಳಾದನೆನ್ನ ಪ್ರಭುದೇವರು.

೪೨

ಸಾಕಾರ ನಿರಾಕಾರದೊಳಗೆ ನಿರವಯಾಂಗನಾಗಿ ಸುಳಿದು
ಭಕ್ತರ ಭವವ ಹಱಿಯಲೆಂದು ಬಂದ ಜಂಗಮದ ಪರಿಯ ನೋಡಾ.
ಉಣಲುಡಲು ಬಂದವನಲ್ಲಾ ಪ್ರಭುದೇವರು.
ತ್ರಿವಿಧದಾಸೆ ಮುನ್ನವೆಯಿಲ್ಲ ಪ್ರಭುದೇವರಿಗೆ.
ಭಕ್ತನೆಂಬ ತನ್ನಂಗವ ತನ್ನೊಳೈಕ್ಯವ ಮಾಡಿಕೊಂಡು
ನಿರವಯವಾಗಬಂಡ ನಿರವಯನಯ್ಯಾ,
ಕೂಡಲ ಸಂಗಮದೇವರಲ್ಲಿ ಪ್ರಭುದೇವರು.

೪೩

ಮನದೊಡೆಯನೆನ್ನ ಮನೆಗೆ ಬಂದರೆ
ಕನಕದ ತೋರಣವ ಕಟ್ಟಿ, ಪಡುಸಮ್ಮಾರ್ಜನೆಯಂ ಮಾಡಿ,
ರಂಗವಾಲಿಯನಿಕ್ಕಿ, ಉಘೇ ಚಾಂಗು ಭಲಾ ಎಂದೆ.

ಕೂಡಲಸಂಗಮದೇವಾ ನಿಮ್ಮ ಶರಣ ಪ್ರಭುದೇವರು ಬಂದರೆ
ಉಬ್ಬಿಕೊಬ್ಬಿ ನಲಿನಲಿದಾಡುವೆ.

೪೪

ಎನ್ನ ಮನವು ನಿಮ್ಮ ಚರಣವ ಕಂಡ ಬಳಿಕ
ಬೆರಸಿಯಲ್ಲದೆ ಅಗಲಿ ಸೈರಿಸಲಾಜಿನಯ್ಯಾ ಪ್ರಭುವೆ.
ತ್ರಾಹಿ ತ್ರಾಹಿ ಘನಮಹಿಮಾ ನಿಮ್ಮ ಪಾದಾರ್ಚನೆಗೆ
ಎನ್ನ ಪರಮಾನಂದ ಜಲವತುಂಬುವೆನಯ್ಯಾ ಪ್ರಭುವೆ.
ಪೂಜೆಯ ಮಾಡುವರೆ ಎನ್ನ ಹೃದಯಕಮಲವನರ್ಚಿಸುವೆ.
ಆ ರತಿಯಿಂದ ಆರತಿಯನೆತ್ತುವೆ.
ಎನ್ನ ಮಹಾಪ್ರಕಾಶದ ಧೂಪವ ಬೀಸುವೆ.
ಎನ್ನ ಸ್ವಾನುಭಾವದ ಗಂಧವನೀವೆ.
ಈ ತೆಜನಲ್ಲದೆ ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬುದಕ್ಕೆ
ಬೇಜಿ ತೆಱಹ ಕಾಣೆನಯ್ಯಾ ಪ್ರಭುವೆ.
ಕೂಡಲಸಂಗಮದೇವಯ್ಯಾ
ಪ್ರಭುವೆನ್ನ ಪ್ರಾಣಲಿಂಗವೆಂಬುದು ಎನಗಿಂದು ಕಾಣಬಂದಿತ್ತು ನೋಡಯ್ಯಾ.

೪೫

ಅಯ್ಯಾ ನೀವೆನ್ನ ಬಲ್ಲಿರಲ್ಲದೆ ನಾ ನಿಮ್ಮ ಬಲ್ಲನೆ ಪ್ರಭುವೆ?
ನಿಮ್ಮ ನಿಜವನೋಡಿ ಮಾಡಿಹೆನೆಂದಡೆ
ನಿಮ್ಮ ಘನವೆನ್ನ ಮನಕ್ಕೆ ಸಾಧ್ಯವಾಗದ ಕಾರಣ
ಅಂತಿಂತೆಂದುಪಮಿಸಲಮ್ಮದೆ ಇದ್ದೆ ನೋಡಯ್ಯಾ ಪ್ರಭುವೆ
ನಿತ್ಯ ತೃಪ್ತ ಮಹಿಮ ನಿಮಗೆಂದು ಅಳವಡಿಸಿರ್ದ ಪದಾರ್ಥವನು
ಸುಚಿತ್ತದಿಂದ ಅವಧರಿಸಿ ಸಲಹಯ್ಯಾ ಪ್ರಭುವೆ
ಕೂಡಲಸಂಗಮದೇವಾ.

೪೬

ದೇವದೇವ ಮಹಾಪ್ರಸಾದ
ನಿಮ್ಮಡಿಗಳೆಂದಂತೆ ಅಲ್ಲದೆ ಎನಗೆ ಬೇಜಿ ಸ್ವತಂತ್ರವುಂಟೆ ಪ್ರಭುವೆ?
ಸಂದು ಸಂಶಯವುಂಟೆ ಪ್ರಭುವೆ?

ದರ್ಪಣದೊಳಗಣ ಪ್ರತಿಬಿಂಬ[ವ] ನೋಡುವ ಮುಖಕ್ಕೆ ಭಿನ್ನ ಭಾವಮುಂಟೆ ಪ್ರಭುವೆ?
ಚರಿಸಿಬಪ್ಪ ಅನಂತ ಸುಳುಹಿನೊಳಗೆ ನೀನೊಬ್ಬನೆ
ನಿನ್ನೊಳಗೆ ಅನಂತ ಸುಳುಹು ಅಡಗಿದವು
ನಿಮಗೆ ಮಾಡಿದ ಸಯಿಧಾನವ ನಿಮಗೆ ನೀಡುವೆನು ಅವಧರಿಸಯ್ಯಾ ಪ್ರಭುವೆ
ಕೂಡಲಸಂಗಮದೇವಾ.

೪೭

ಆದಿಯ ಲಿಂಗವ ತಂದಾತನಲ್ಲಯ್ಯನು
ಅನಾದಿಯ ಲಿಂಗವ ತಂದಾತನಲ್ಲಯ್ಯನು
ಭಾಪ್ಪುರೆ ಜಂಗಮವೆ ನಿರ್ವಯಲನವಗ್ರಹಿಸಿದಿರಿ
ನಿಮಗೋಸುಕರ ಮಾಡುವ ಸಯಿಧಾನವನು
ನಡೆಗೆಟ್ಟು ಮಾಡುವೆನು
ನುಡಿಗೆಟ್ಟು ಮಾಡುವೆನು
ಸರ್ವ ಕುಳಕ್ಕೆ ನೀನೆಂದು ಅಲ್ಲಯ್ಯನ ಪ್ರಸಾದಕ್ಕೆ ಕೈಯಾನುವೆನು
ನವಬ್ರಹ್ಮರ ಕೇರಿಯೊಳಗೆ ಅಲ್ಲಯ್ಯನಪ್ರಭೆ
ರುದ್ರಭೂಮಿಯೊಳಗೆ ಅಲ್ಲಯ್ಯನಪ್ರಭೆ
ಬಂದು ನಿಂದ ನಿಲವಿಂಗೆ ಅಲ್ಲಯ್ಯನಪ್ರಭೆ
ಸಯಧಾನವಿಲ್ಲದಡೆ ಎನ್ನ ನಿಡುವೆನಯ್ಯಾ ಪ್ರಭುವೆ
ಕೂಡಲಸಂಗಮದೇವಾ.

೪೮

ಅರಿದರಿದು ಎನಗಿಂದು ಕಣ್ಗೆ ಮುಗಳವಾಯಿತ್ತು
ಒಂದಹುದು ಒಂದಾಗದೆಂಬ ಭ್ರಮೆಯುವನಲ್ಲ ಪ್ರಭುದೇವರು
ಬೇಕು ಬೇಡೆಂದೆಂಬ ಜಂಜಡದವನಲ್ಲ ಪ್ರಭುದೇವರು
ಎಡವಱಿಯದನೋಟ ನುಡಿಯ ಸಡಗರವಱಿತು
ಎಡೆಯಾಟ ಕೋಟಲೆಯು ಕಳೆಯ ಬಂದನು ಪ್ರಭುದೇವರು
ನೋಡುವರ ಮನದ ಸುಖಸಾಗರದ ನಿಧಿಯನೇನೆಂದುಪಮಿಸುವೆನು
ಎನ್ನ ಉಭಯ ಕರ್ಮವ ಕಳೆದು ತನ್ನೊಳಗೆ ಇಂಬಿಟ್ಟುಕೊಳ್ಳಬಂದನು
ಕೂಡಲಸಂಗಮದೇವಾ
ಕೃಪಾಮೂರ್ತಿ ಪ್ರಭುರಾಯನು.

೪೯

ದೇವ ದೇವ ಮಹಾಪ್ರಸಾದ ಅವಧರಿಸಯ್ಯಾ ಪ್ರಭುವೆ ಎನ್ನ ಬಿನ್ನಪವ
ಅತಳ ವಿತಳ ಸುತಳ ಮ[ಹಾತ]ಳ ತಳಾತಳ ರಸಾತಳ
ಪಾತಾಳ ಲೋಕದಿಂದತ್ತತ್ತ ನಿಮ್ಮ ಶ್ರೀಚರಣ
ಭೂಲೋಕ ಭುವರ್ಲೋಕ ಸ್ವರ್ಲೋಕ ಮಹರ್ಲೋಕ ಜನೋಲೋಕ
ತಪೋಲೋಕ ಸತ್ಯಲೋಕದಿಂದತ್ತತ್ತ ನಿಮ್ಮ ಉತ್ತುಮಾಂಗ
ಈರೇಳು ಭುವನವೆಲ್ಲವೂ ನಿಮ್ಮ ಉದರದ ಕೊನೆಯಲ್ಲಿ ಅಡಗಿಹುದಯ್ಯಾ ಪ್ರಭುವೆ.
ಆರೋಗಣೆಯ ಮಾಡುವರೆ ಆ ಮಹಾಲಿಂಗವಿನ್ನೆಹೆಗೆ?
ತರುವಿನೊಳಗೆ ಅನಲಭರಿತವಾಗಿರ್ದು ಮಥನದಿಂದತೋರಿ ಆಹುತಿಗೊಂಬಂತೆ
ಸರ್ವ ಕರ್ತ ನೀನು ನಿತ್ಯಾನಂದಮಯನೆ
ಭಕ್ತಿಲೀಲಾವಿನೋದನೆ ದೇವಾ
ಕೂಡಲಸಂಗಮದೇವಾ
ಸುಚಿತ್ತದಲ್ಲಿ ಮನಮೀಸಲ ಬೋನವನಾರೋಗಿಸಯ್ಯಾ ಪ್ರಭುವೆ.

೫೦

ಕಾಲಮುಟ್ಟಲಮ್ಮದ ಸಯಧಾನ
ಕಲ್ಪಿತವಿಲ್ಲದ ಸಯಧಾನ
ಅನಂತರತಿಯೆಂಬ ಹೆಂಗೂಸು ಮುಟ್ಟದ ಸಯಧಾನ
ಭಾಳಲೋಚನನೆಂಬ ಜಂಗಮ ಮುಟ್ಟದ ಸಯಧಾನ
ಎಲ್ಲಿಯೂ ಮುಟ್ಟದ ಸಯಧಾನವ
ನಿಮಗರ್ಪಿಸಿದೆನು ಆರೋಗಿಸಯ್ಯಾ ಪ್ರಭುವೆ
ಕೂಡಲಸಂಗಮದೇವಾ.

೫೧

ಅಂಗದಲಳವಟ್ಟ ಲಿಂಗಕ್ಕೆ ಅಂಗವೆ ಭಾಜನ
ಪ್ರಾಣದ ಮೇಲಣ ಲಿಂಗಕ್ಕೆ ಮನವೆ ಭಾಜನ
ಅರಿವಿನ ಮೇಲಣ ಲಿಂಗಕ್ಕೆ ನಿರ್ಭಾವವೆ ಭಾಜನ
ಕೂಡಲಸಂಗಮದೇವಯ್ಯಾ
ಪ್ರಭುದೇವರು ಆರೋಗಣೆಯ ಮಾಡುವರೆ
ಭಕ್ತಿ ಪರಿಯಾಣವಲ್ಲದೆ ಬೇರೆ ಭಾಜನವ ಕಾಣೆನೂ.

೫೨

ಪರಿಮಿತಕ್ಕೆ ನಡೆತಂದು ಪರುಷದ ಸಿಂಹಾಸನದ ಮೇಲೆ
ಪರಮಗುರು ಪ್ರಭುರಾಯ ಮೂರ್ತಿಗೊಂಡಿರಲು
ಪರಮಾನಂದ ಜಲದಿಂದ ಪಾದಾರ್ಚನೆಯಮಾಡಿ
ದಿವ್ಯ ಸುಗಂಧಮಂ ಲೇಪಿಸಿ
ಅಕ್ಷಯವೆಂಬ ಅಕ್ಷತೆಯನಿಟ್ಟು
ಹೃದಯಕಮಲದ ಪುಷ್ಪದಿಂದ ಪೂಜೆಯಂ ಮಾಡಿ
ಸುಜ್ಞಾನ ವಾಸನೆಯೆಂಬ ಧೂಪಮಂ ಬೀಸಿ
ಭಕ್ತಿ ಸಾರಾಯವೆಂಬ ನೈವೇದ್ಯಮಂ ಸಮರ್ಪಿಸಿ
ಪರಮ ಪರುಷವನೆ ಹಸ್ತಮಜ್ಜನಕ್ಕೆಱೆದು
ತ್ರಿಕರಣಶುದ್ಧವೆಂಬ ತಾಂಬೂಲಮಂ ಕೊಟ್ಟು
ಸಮರಸಸಂಗದಿಂದ ಕೂಡಲಸಂಗಮದೇವರ
ಶರಣ ಪ್ರಭುದೇವರ ಕರುಣವೆನಗಾಯಿತ್ತು.

೫೩

ಕೆಱೆಯ ತುಂಬಿ ನಾಪ್ಯಾಯನದಂತೆ
ಪ್ರಭುದೇವಾ ನಿಮ್ಮ ಆಪ್ಯಾಯನವು
ಕೆಱೆಯ ತುಂಬ ಬಿಡಲೊಡನೆ ಹಲವು ಕದಳಿಗಳೆಲ್ಲಾ ದಣಿದವಯ್ಯಾ
ಪರಿಣಾಮವೆಂಬ ಕೆಱೆಗೆ ಪ್ರಭುವೆಂಬ ತುಂಬನುಚ್ಚಲು
ಅಸಂಖ್ಯಾತರೆಂಬ ಕದಳಿಗಳೆಲ್ಲಾ ದಣಿದವಯ್ಯಾ
ಕೂಡಲಸಂಗಮದೇವಾ ನಿಮ್ಮ ಶರಣ ಪ್ರಭುದೇವರು
ಸರ್ವಜೀವ ದಯಾಪಾರಿಗಳೆಂಬುದು ಇಂದೆನಗೆ ಅಱಿಯಬಂದಿತ್ತಯ್ಯಾ.

೫೪

ತೊಱೆಯುದಕವ ಕೆಱೆಯುಂಡು ತೃಪ್ತವಾಗಲು
ಆ ಕೆಱೆಯುದಕವ ಹಲವು ಕೆಲವು ಸ್ಥಾವರ ಜಂಗಮವುಂಡು ತೃಪ್ತಿಯೊಡದಂತೆ
ಪ್ರಭುದೇವರ ತೃಪ್ತಿ ಅಸಂಖ್ಯಾತ ಮಹಾಗಣಂಗಳೆಲ್ಲವಕ್ಕೆ ತೃಪ್ತಿಯಾಯಿತ್ತು ನೋಡಾ
ಬಸಿಱವೆಂಡತಿಯುಂಡಲ್ಲಿ ಒಡಲ ಶಿಶು ತೃಪ್ತಿಯಾದಂತೆ
ಸಚರಾಚರವೆಲ್ಲವೂ ತೃಪ್ತಿಯಾದವು ನೋಡಾ
ಕೂಡಲಸಂಗಮದೇವಾ ನಿಮ್ಮ ಶರಣ ಪ್ರಭುದೇವರ
ಪ್ರಸಾದದ ಮಹಿಮೆಗೆ ನಮೋ ನಮೋ ಎಂಬೆನು.

೫೫

ದೇವ ದೇವ ಮಹಾಪ್ರಸಾದ
ಅವಧರಿಸುದೇವಾ ಎನ್ನ ಬಿನ್ನಪವ
ಕಾಯದ ಮಾಯದ ಸಡಗರದಲ್ಲಿ ಹುಟ್ಟಿಸಿದಿರಿ ಎನ್ನ
ಅದು ನಿಮ್ಮ ಲೀಲಾವಿನೋದ ಪ್ರಭುವೆ.
ಆ ಕಾಯದ ಮಾಯದ ತಲೆಯ ಚಿವುಟಿ ಶ್ರೀಗುರುಕಾರುಣ್ಯವ ಮಾಡಿ
ಗುರುಲಿಂಗಜಂಗಮ ತ್ರಿವಿಧ ಭಕ್ತಿಯ ಘನವತೋಱಿ
ನಿಮ್ಮ ಪಾದೋದಕ ಪ್ರಸಾದವನಿತ್ತು ರಕ್ಷಿಸಿದಿರಿ
ಅದು ನಿಮ್ಮ ಲೀಲಾವಿನೋದ ಪ್ರಭುವೆ
ಪರವಾದಿ ಬಿಜ್ಜಳ ಒರೆಗಲ್ಲಾದಲ್ಲಿ ಮುನ್ನೂಱಱುವತ್ತು ಸತ್ತಪ್ರಾಣಯನೆತ್ತಿ
ಮೂವತ್ತಾಱುಕೊಡೆಯರ ಪರಿಹರಿಸಿ
ಎಂಬತ್ತೆಂಟು ಪವಾಡವ ಮೆಱೆದಿರಿ
ಅದು ನಿಮ್ಮ ಲೀಲಾವಿನೋದ ಪ್ರಭುವೆ
ಎನ್ನ ಮನದ ಮಲಿನವ ತೊಳೆಯಲೆಂದು ಬಂದು
ಶೂನ್ಯ ಸಿಂಹಾಸನದ ಮೇಲೆ ಮೂರ್ತಿಗೊಂಡು
ನಿಮ್ಮ ನಿಜಮಹಿಮೆಯನೆಲ್ಲಾ ನಿಜ ಪ್ರಮಥರ ಮುಂದೆತೋಱಿ
ಎನ್ನ ಪಾವನವ ಮಾಡಿ
ಷಟ್ಸ್ಥಲಮಂ ಎನ್ನಸರ್ವಾಂಗದಲ್ಲಿ ಪ್ರತಿಷ್ಠಿಸಿ
ಎನ್ನ ನಿಮ್ಮಂತೆ ಮಾಡಿದಿರಿ
ಅದು ನಿಮ್ಮ ಲೀಲಾವಿನೋದಪ್ರಭುವೆ
ಕೂಡಲಸಂಗಮದೇವಾ
ಎನ್ನ ವರ್ಮದ ಸಕಲವ ನೀಬಲ್ಲೆಯಾಗಿ
ಎನಗೂವೆ ತಿಳುಹಿಕೊಟ್ಟು ಎನ್ನನುಳುಹಿಕೊಳ್ಳಾ ಪ್ರಭುವೆ.

೫೬

ಬಸುಱೆ ಬಾಯಾಗಿ ಬಾಯೆ ಬಸುಱಾಗಿಪ್ಪುದ ತೊಡೆದ ಪ್ರಭುದೇವರು
ಕಣ್ಣೆ ತಲೆಯಾಗಿ ತಲೆಯೆ ಕಣ್ಣಾಗಿಯಿರಿಸಿದ ಪ್ರಭುದೇವರು
ಕಾಲೆ ಕೈಯಾಗಿ ಕೈಯೆ ಕಾಲಾಗಿ ನಡಸಿದ ಪ್ರಭುದೇವರು
ನೆಳಲಸುಟ್ಟಸೀರೆಯನೆನಗೆ ಉಡುಗೊಱೆಯ ಕೊಟ್ಟನು ಪ್ರಭುದೇವರು
ಮಥನವಿಲ್ಲದ ಸಂಗಸುಖವನೆನಗೆ ತೋಱಿಸಿದನು ಪ್ರಭುದೇವರು

ಕೂಡಲಸಂಗಮದೇವಾ
ಪ್ರಭುದೇವರ ಶ್ರೀಪಾದಕ್ಕೆ ಶರಣೆನುತಿರ್ದೆನೂ.

೫೭

ನೀರ ಒರಳಮಾಡಿ ನೆಳಲ ಒನಕೆಯಮಾಡಿ
ಆಕಾರವಿಲ್ಲದ ಅಕ್ಕಿಯ ಥಳಿಸುತ್ತಿರಲು
ಮೇರುಗಿರಿಯಾಕಳ ಕಱೆದು ಕ್ಷೀರದಲ್ಲಿ ಅಡಿಗೆಯ ಮಾಡಿ
ನಾರಿಯ ಬಸುಱೊಳಗೆ ಗಂಡಬಂದು ಕುಳ್ಳಿರಲು
ಮಾಡಿದಡಿಗೆಯು ಮನವುಂಡುಪೋಗಲು
ಮೇಲುಕಯ್ಯ ತಲೆಹಿರಿದು ಸಂತೋಷದಿಂದ
ಪ್ರಾಣಸಖಿ ತನ್ನ ಗಂಡಂಗೆ ನೀಡುತ್ತಿರಲು
ಅರಳ ಹುಟ್ಟಿಗೆಯಲ್ಲಿ ಹೊರಳಿ ಕೂಡುವ ಭೇದ
ಮರಳಿಕೂಡಲಿಕೆಂತು ರಪಣವಿಲ್ಲಿ
ಕೆರಳಿಮುನಿದು ಘುಡುಘುಡಿಸಿ ಮೇಲು ಘರ್ಜಿಸಲೊಡನೆ
ತೆರಳಲಮ್ಮದೆ ಅಂಜಿ ಒಳಗಡಗಿದ
ಶರಣಸತಿ ಲಿಂಗಪತಿ ಎಂಬ ಭಾಷೆ
ನೀವು ಹರನಬಟ್ಟೆಯ ನೋಡಿ ಸುಯ್ಯಬೇಡ
ಜನನ ಮರಣವಿರಹಿತ ಕೂಡಲಸಂಗನ ಅನುಭಾವ
ಪ್ರಭುವಿನ ಶ್ರೀಪಾದದೊಳಗಿರ್ದು ಸುಖಿಯಾದೆನೂ.

೫೮

ಆರತವಡಗಿತ್ತೆನ್ನ
ಬಯಕೆ ಸಮನಿಸಿತ್ತೆನ್ನ
ಸಂಕಲ್ಪ ಸವೆಯಿತ್ತೆನ್ನ
ಸ್ವಯವು ದೊರಕೊಂಡಿತ್ತೆನ್ನ
ನಿಮ್ಮ ನೋಡಿದ ಎನ್ನಕಂಗಳು ಮುಗಳದ ಮುಸಕವಾಯಿತ್ತಯ್ಯಾ ಪ್ರಭುವೆ
ಒಳಗು ಹೊಱಗು ಹೊಱಗು ಒಳಗೆಂಬುದ ತಿಳಿದು
ಪ್ರಭುವಿನ ಕರುಣದಿಂದ ಕೂಡಲಸಂಗಮದೇವರಲ್ಲಿ
ತೆಱಹಿಲ್ಲದಿರ್ದೆನು.

೫೯

ಲಿಂಗಗಂಭೀರ ಗಮನಗೆಟ್ಟುತ್ತಲ್ಲಾ
ಜಂಗಮಗಂಭೀರ ಸುಳುಹುಗೆಟ್ಟುತ್ತಲ್ಲಾ
ಪ್ರಸಾದ ಗಂಭೀರ ರೂಪುಗೆಟ್ಟುತ್ತಲ್ಲಾ
ಆಚಾರಗಂಭೀರ ಅವಯವಗೆಟ್ಟುತ್ತಲ್ಲಾ
ಜ್ಞಾನಗಂಭೀರ ನಡೆಗೆಟ್ಟುತ್ತಲ್ಲಾ
ಕೂಡಲಸಂಗಮದೇವರಲ್ಲಿ
ಪ್ರಭುದೇವರ ನಿಜವನ್ನೈಯ್ದಲು
ಸಂಗನಬಸವಣ್ಣನ ಪ್ರಾಣವೊಡನೆ ಬಳಿಸಂದಿತ್ತಲ್ಲಾ.

೬೦

ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು
ಆ ಮಾಮರಕ್ಕೆ ಕೊಂಬೆರಡು ಎಲೆ ಮೂಱು
ಮೂವತ್ತಾರುಪುಷ್ಪ ಕಾಯಿ ಒಂದೆ
ಹಣ್ಣುರಸತುಂಬಿದಲ್ಲಿ ಏನನೂ ಕಾಣೆ
ಎಲೆಯುದುರಿದಡೆ ಹಣ್ಣುತೊಟ್ಟು ಬಿಟ್ಟು ಬಿದ್ದಿತ್ತು.
ಆ ಹಣ್ಣ ಪ್ರಭುದೇವರು ಆರೋಗಣೆಯ ಮಾಡಿ
ನಿಜದಲ್ಲಿ ನಿರ್ವಯಲಾದರು
ಪ್ರಭುದೇವರ ಕಾರುಣ್ಯದ ಪ್ರಸಾದವ ನಾನು ಕೊಂಡೆನಾಗಿ
ಕೂಡಲಸಂಗಮ ದೇವರು ಇತ್ತ ಬಾರೆಂದು
ತಮ್ಮ ಹೃದಯಕಮಲದಲ್ಲಿ ಇಂಬಿಟ್ಟುಕೊಂಡರು.

೬೧

ಇಲ್ಲದ ಸಂಸಾರ ಕಣ್ಣಮುಂದೆ ರೂಪಾಗಿ ಕಾಡುತ್ತಿದೆ
ಸುಜ್ಞಾನವೆಂಬ ಅಂಜನವನೆಚ್ಚಲು
ಸಕಲಭ್ರಮೆಯೆಂಬ ಕತ್ತಲೆಯು ಕಳದು
ನಿಜಲಿಂಗಸಂಬಂಧವ ನೆಲೆಗೊಳಿಸಿ
ನಿತ್ಯದಲ್ಲಿ ಅಚ್ಯೊತ್ತಿದನಾಗಿ
ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

೬೨

ಹಸಿವು ಹರೆದು ತೃಷೆ ಬತ್ತಿ ಪರಿಣಾಮವೆ ಪಥ್ಯವಾಗಿ
ನಿಂದಂಗ ನೀನಾದ ಕಾರಣ
ಪ್ರಭುವೆ ನಿಮ್ಮ ಕಾರುಣ್ಯ ಚಕ್ಷು ಎನ್ನ ನಿರೀಕ್ಷಿಸಿದಲ್ಲಿ
ಎನ್ನ ಬಂಧಮೋಕ್ಷವೆಂಬಿವು ಅಂದೇನಿಂದವು.
ಕೂಡಲಚೆನ್ನಸಂಗಮದೇವರಲ್ಲಿ
ಪ್ರಭುದೇವರ ಸುಳುಹು ಗೋಪ್ಯವಾದಲ್ಲಿ.

೬೩

ರೂಪಿಲ್ಲದ ರೂಪು ನಿಜವಿಲ್ಲದ ನಿಃಪತಿ
ಸೀಮೆಯ ಮೀಱಿದ ನಿಸ್ಸೀಮೆ
ಗಮನವಿಲ್ಲದ ಗಮ್ಯ
ನುಡಿಯಡಗಿದ ನಿಃಶ್ಶಬ್ದ
ಪರವನಱಿಯದ ಪರಿಣಾಮಿ
ಕೂಡಲಚೆನ್ನಸಂಗನ ಶರಣ
ಪ್ರಭುದೇವರಿಂಗೆ ನಮೋ ನಮೋಯೆನುತಿರ್ದೆನು.

೬೪

ಆಯತವಿಲ್ಲದನುಭಾವ
ಸ್ವಾಯತವಿಲ್ಲದ ಸಮಾಧಾನ
ಸನ್ನಹಿತವಿಲ್ಲದ ಸಂಬಂಧವನೇನೆನಬಹುದಯ್ಯಾ?
ಘನಮನವ ಭೇದಿಸಿ
ಆದಿಲಿನಾದಿಯನೊಳಕೊಂಡು
ಆಧಾರವಿಲ್ಲದ ನಿಲುವು ಸಾಧ್ಯವಾಯಿತ್ತು ನೋಡಾ ಪ್ರಭುದೇವರಿಗೆ.
ಕೂಡಲಚೆನ್ನಸಂಗಮದೇವರ ಶರಣಪ್ರಭುದೇವರು
ಅಜಾತನೆಂಬಭೇದವೆನಗಿಂದು ತಿಳಿಯಿತ್ತು.
ಆಮಿಷ ತಾಮಸವೆಂಬ ಸಂದೇಹ ನಿಂದಿತ್ತು.
ಪುಣ್ಯಪಾಪವೆಂಬ ಉಭಯುವಳಿಯಿತ್ತು.
ಇಷ್ಟಪ್ರಾಣವೆಂಬ ಬೆಳಗೊಡಗೂಡಿತ್ತು.
ಪ್ರಭುದೇವರ ಸುಳುಹ ಕಾಣಲಾಗಿ,
ಕೂಡಲಚೆನ್ನಸಂಗಮದೇವರ ಕಾಣಬಂದಿತ್ತು.

೬೬

ಮನೆಯೊಳಗಣ ಕಿಚ್ಚು ಕಾನನವ ಸುಟ್ಟಿತ್ತು.
ಕಾನನ ಬೆಂದಲ್ಲಿ ಮನೆ ಉರಿಹತ್ತಿತ್ತು.
ಮನೆ ಬೆಂದು ಕಂಭ ಉರಿಯಿತ್ತು.
ಆ ಕಂಭದ ಮೇಲೊಂದು ರತ್ನವಿದ್ದುದ ಕಂಡೆ
ಅದಱ ಬೆಳಗು ಮೂಱು ಲೋಕವ ತುಂಬಿತ್ತಲ್ಲಾ.
ಇದು ಕಾರಣ ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವರ ನಿಲವಿಂಗೆ ನಾನು ಶರಣೆನುತಿರ್ದೆನು.

೬೭

ಅಂಗದಲ್ಲಿ ಲಿಂಗವಱಿತು
ಲಿಂಗದಲ್ಲಿ ಅಂಗವಱಿತು
ಒಡಲುಪಾಧಿ ಎಂಬುದಿಲ್ಲ ನೋಡಾ ಪ್ರಭುದೇವರಿಗೆ
ನಿಂದಡೆ ನೆಳಲಿಲ್ಲ ಸುಳಿದಡೆ ಹೆಜ್ಜೆಯಿಲ್ಲ
ಅಪರಮಿತ ಘನಮಹಿಮನನೇನೆಂಬೆನಯ್ಯಾ?
ಶಬ್ದವಿಡಿದು ಸಾರಾಯನಲ್ಲ ಪ್ರಭುದೇವರು
ಗತಿವಿಡಿದು ಆಱೂಢನಲ್ಲ ಪ್ರಭುದೇವರು
ಈ ಎರಡೂ ಅಳಿದುಳಿದ ನಿಶ್ಚಿಂತನು ಪ್ರಭುದೇವರು
ತನಗೆ ತಾ ನಿಜವಾದ ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋಯೆನುತಿರ್ದೆನೂ.

೬೮

ಹೆಣ್ಣಿಂಗೆ ಬಂದಾತನಲ್ಲ ಪ್ರಭುದೇವರು
ಹೊನ್ನಿಂಗೆ ಬಂದಾತನಲ್ಲ ಪ್ರಭುದೇವರು
ಮಣ್ಣಿಂಗೆ ಬಂದಾತನಲ್ಲ ಪ್ರಭುದೇವರು
ಅಸನಕ್ಕೆ ಬಂದಾತನಲ್ಲ ಪ್ರಭುದೇವರು
ವ್ಯಸನಕ್ಕೆ ಬಂದಾತನಲ್ಲ ಪ್ರಭುದೇವರು
ಕೂಡಲಚೆನ್ನಸಂಗಯ್ಯನಲ್ಲಿ
ಭಕ್ತಿಯ ಪಥವ ತೋಱಬಂದನಯ್ಯಾ ಪ್ರಭುದೇವರು.

೧೯

ಕಂಗಳನೋಟ ಕರಸ್ಥಲದ ಪ್ರಾಣ
ಮನದೊಳಗೆ ಪರಿಣಾಮ ತೋಱುತ್ತಲಿದೆ ನೋಡಾ.
ನಡವರೆ ಗತಿಯಿಲ್ಲ ನಿಂದರೆ ಹೆಜ್ಜೆಯಿಲ್ಲ
ಸುಳುಹಿನೊಳಗೊಂದು ಅತಿಸಯದ ಸುಳುಹು ನೋಡಾ
ತೆರೆಯಮಱೆಯ ಪರಶಿವನು ನಡೆಗಲಿತು ಬಪ್ಪ ಕರುಣವ ನೋಡಾ
ಕೂಡಲಚೆನ್ನಸಂಗಮದೇವರು ಸಾಕ್ಷಿಯಾಗಿ
ಪ್ರಭುದೇವರು ಬಪ್ಪುದು ತಪ್ಪದು.

೨೦

ಬಟ್ಟ ಬಯಲಲ್ಲಿ ಒಂದು ತಲೆಯಿಲ್ಲದ ಆನೆ ಇದ್ದಿತ್ತು.
ಆನೆ ಬಂದು ಆನೆಯ ನುಂಗಿ ತಾನೆ ಅಳಿಯಿತ್ತು.
ಅಂತರವಿಲ್ಲದ ಒಳಗು ಅವಲಂಬವಿಲ್ಲದ ಹೊಱಗು ನೋಡಾ
ದಳವಿಲ್ಲದ ಕುಸುಮದ ಗದ್ದುಗೆಯಲ್ಲಿ
ಒಡಲಿಲ್ಲದ ಘನವು ಮೂರ್ತಿಗೊಂಡರೆ ವಿಚಿತ್ರವಾಯಿತ್ತು ಜಗವೆಲ್ಲಾ
ಕೂಡಲಚೆನ್ನಸಂಗಮದೇವರ ಶರಣ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನೂ.

೨೧

ನೀನಳವಡಿಸಿಕೊಟ್ಟ ಪದಾರ್ಥ ನಿಮಗರ್ಪಿತವಯ್ಯಾ ಪ್ರಭುವೆ.
ನಿಮ್ಮ ಆರೋಗಣೆ ಮಹಾ ಆರೋಗಣೆ
ಸಕಲಗಣಂಗಳಿಗೆ ಹಿತಾರ್ಥವಯ್ಯಾ ಪ್ರಭುವೆ.
ಕೂಡಲಚೆನ್ನಸಂಗಮದೇವಾ
ನಿನಗೆ ಕ್ಷುತ್ತಿಲ್ಲಾಗಿ ತಾನು ಅರ್ಪಿತವ ಮಾಡಲಿಲ್ಲಯ್ಯಾ ಪ್ರಭುವೆ.

೨೨

ಬಾಗಿಲಕಾಯ್ದಿರ್ದ ಗೊಲ್ಲಂಗೆ ಪಚ್ಚಕ್ಕೆ ಒಡೆತನವುಂಟೆ ಅಯ್ಯಾ?
ಸೂತ್ರದ ಬೊಂಬೆಗೆ ಪ್ರಾಣವುಂಟೆ?
ಆಡಿಸುವ ಜೋತಿ ಉತ್ತರುಗಲ್ಲದೆ?
ಎನ್ನ ಭಾವಕ್ಕೆ ಮನೋಮೂರ್ತಿಯಾಗಿ

ಕೂಡಲಚೆನ್ನಸಂಗಮದೇವರಲ್ಲಿ
ಪ್ರಭುದೇವರ ಸುಳುಹು ಅಗಮ್ಯವಾಯಿತ್ತು.

೭೩

ಗುರುವೇ ಬೋನ ಶಿಷ್ಯನೇ ಮೇಲೋಗರ
ಲಿಂಗಕ್ಕೆ ಪದಾರ್ಥವರ್ಪಿತವಯ್ಯಾ ಪ್ರಭುವೆ.
ಘನಕ್ಕೆ ಮನವೇ ಅರ್ಪಿತ
ಮನಕ್ಕೆ ಮಹವೇ ಅರ್ಪಿತ
ಘನದೊಳಗೆ ಮನವು ತಲ್ಲೀಯವಾದ ಬಳಿಕ
ಅರ್ಪಿಸುವ ಭಕ್ತರಾರು?
ಆರೋಗಿಸುವ ದೇವರಾರು?
ನಿತ್ಯ ತೃಪ್ತನು ಉಣಕಲಿತನೆಂದಡೆ
ಅರ್ಪಿಸಲುಂಟೆ ಪ್ರಭುದೇವಾ ಮತ್ತೊಂದುವನು?
ಕೂಡಲಚೆನ್ನ ಸಂಗಮದೇವಾ
ಬಸವಣ್ಣನೇ ಬೋನ ನಾನೇ ಪದಾರ್ಥ
ಸುಚಿತ್ತದಿಂದ ಅವಧರಿಸಯ್ಯಾ ಪ್ರಭುವೆ.

೭೪

ಬಟ್ಟ ಬಯಲೊಳಗೊಂದು ಐವಾಗಿಲಪಟ್ಟಣ
ಆ ಪಟ್ಟಣಕ್ಕೆ ಒಡಲಿಲ್ಲದಾತ ಅರಸು ನೋಡಾ.
ಆ ಅರಸಿಂಗೆ ಆಱುವರು ಸತಿಯುರು
ಮೂವ್ವರು ಸ್ವರೂಪಿಯರು
ಮೂವ್ವರು ಕುರೂಪಿಯರು
ಇವರಿಗೊಬ್ಬೊಬ್ಬರಿಗೊಂದೊಂದು ಪರಿಯ ಕೂಟ ನೋಡಾ.
ಐವರ ಕಣ್ಣ ಕಟ್ಟಿ ಒಬ್ಬಳ ನೆರೆದಡೆ
ಪ್ರತಿಯಿಲ್ಲದ ಸುಖವು ಸಯವಾದ ಕಾರಣ
ಕೂಡಲಚೆನ್ನಸಂಗಾ ನಿಮ್ಮ ಶರಣ
ಪ್ರಭುದೇವರಿಂಗೆ ನಮೋ ನಮೋ ಎಂಬೆನು.

೭೫

ಎನ್ನ ಅನುಭಾವದ ಗಮ್ಯನೆ
ಎನ್ನ ಅಱಿವಿನ ವಿಶ್ರಾಮವೆ
ಎನ್ನ ಭಾವದ ಬಯಕೆಯೆ
ಎನ್ನ ನಿಜದ ನಿಲವೆ
ಎನ್ನ ಪರಿಣಾಮದ ಮೇರುವೆ
ಎನ್ನ ಮನದ ಮಹಿಮನೆ
ನಿಮ್ಮ ಸುಳುಹೆತ್ತಲಡಗಿತ್ತಲೆ ಲಿಂಗವೆ?
ನಿಮ್ಮ ನಾಮವೆತ್ತ ನಿರ್ನಾಮವಾಯಿತ್ತೆಲೆ ಪರಮಗುರು
ಕೂಡಲಚೆನ್ನಸಂಗಯ್ಯನಲ್ಲಿ
ಉರಿಯುಂಡ ಕರ್ಪುರದಂತಾದೆಯೆಲ್ಲಾ ಪ್ರಭುವೆ.

೭೬

ಅಷ್ಟ ತನುವಿನ ನಿಷ್ಠಾಪರವ ಬಿಟ್ಟು
ಬಟ್ಟ ಬಯಲಲ್ಲಿ ನಿಂದ ನಿಜವ ನೋಡಾ
ಹತ್ತೆಂಬ ಪ್ರಾಣವ ಸುತ್ತಿ ಸುಳಿಯಲೀಸದೆ
ಒತ್ತಿ ಸುಟ್ಟು ಸಯವಾದ ಘನಚೈತನ್ಯ[ವ] ನೋಡಾ
ನಿಷ್ಠೆ ನಿಬ್ಬರ ತೊಟ್ಟು ಬಿಟ್ಟು ಸಚ್ಚಿದಾನಂದವಾದ
ಪ್ರಭುದೇವರ ಪರಿಯ ನೋಡಾ
ಕಲಿದೇವರದೇವಾ
ಪ್ರಭುದೇವರ ನಿಲವಿಂಗೆ ನಮೋ ನಮೋ ಎನುತಿರ್ದೆನು.

೭೭

ಬಲಕೆ ಮುಱಿದನು ಪೌಳಿಯನು
ಉತ್ತರ ಬಾಗಿಲಲ್ಲಿ ತಲೆವಾಗಿ ಹೊಕ್ಕ ಗತಿಯ ಪವಣನಲ್ಲಿ
ಧವಳಾರಮಪ್ಪ ಪಶ್ಚಿಮದ್ವಾರದಿಂ
ತ್ರಿವಿಧಗತಿಯ ಶೂನ್ಯ ಸಿಂಹಾಸನದ ಮೇಲೆ
ಮುಕ್ತಕೇಶದ ಪರಮಗುರು ಪ್ರಭುರಾಯನೇಱಿದ
ಕಲಿದೇವರ ದೇವನೂ.

೭೮

ತನುಗುಣವಳಿದು ಲಿಂಗ ಸಂಬಂಧಿಯಾದ ಪ್ರಭುದೇವರು
ಮನಗುಣವಳಿದು ಅಱಿವು ಸಂಬಂಧಿಯಾದ ಪ್ರಭುದೇವರು
ಪ್ರಾಣಗುಣವಳಿದು ಪ್ರಸಾದ ಸಂಬಂಧಿಯಾದ ಪ್ರಭುದೇವರು
ಭಾವಭ್ರಮೆಯಳಿದು ನಿಜಲಿಂಗ ಸಂಬಂಧಿಯಾದ ಪ್ರಭುದೇವರು
ಇಂತೀ ಚತುರ್ವಿಧ ಸಂಬಂಧಿಯಾಗಿ ಶೂನ್ಯ ಸಿಂಹಾಸನವನಿಂಬುಗೊಂಡ
ಕಲಿದೇವಾ ನಿಮ್ಮ ಶರಣ ಪ್ರಭುದೇವರ
ಶ್ರೀ ಪಾದಕ್ಕೆ ನಮೋ ನಮೋ ಎಂಬೆನು.

೭೯

ಸತ್ತು ಚಿತ್ತು ಆನಂದ ನಿತ್ಯ ಪರಿಪೂರ್ಣವೆಂಬರು
ನಾನದ ಹಿಡಿದು ಮಾತಾಡುವನಲ್ಲ
ಸತ್ತೆ ಗುರು ಚಿತ್ತೆ ಲಿಂಗ ಆನಂದವೆ ಜಂಗಮ
ನಿತ್ಯವೆ ಪ್ರಸಾದ ಪರಿಪೂರ್ಣವೆ ಪಾದೋದಕವೆಂಬುದನವಗ್ರಹಿಸಿ
ನಿಮ್ಮ ಜಂಗಮಕ್ಕೆ ಭಕ್ತನಾದೆನಯ್ಯಾ
ನಿತ್ಯನಾಗಿ ನಿಮ್ಮ ಜಂಗಮಕ್ಕೆ ವಂದಿಸುವೆ
ಆನಂದದಿಂದ ನಿಮ್ಮ ಜಂಗಮದ ಪಾದೋದಕವಕೊಂಬೆ
ಪರಿಪೂರ್ಣನಾಗಿ ನಿಮ್ಮ ಜಂಗಮವನರ್ಚಿಸಿ ಪೂಜಿಸಿ ಪರವಶನಪ್ಪೆನಾನೂ
ಭಕ್ತಿಪ್ರಸಾದ ನಿತ್ಯ ಪ್ರಸಾದ ಮುಕ್ತಿಪ್ರಸಾದ
ನಿಮ್ಮ ಜಂಗಮದಲ್ಲಿ ವರವಪಡೆದೆನು
ಕಲಿದೇವರದೇವಾ ನಿಮ್ಮ ಶರಣ ಪ್ರಭುದೇವರ
ಶ್ರೀ ಪಾದದಲ್ಲಿ ಮನಮಗ್ನವಾಗಿರ್ದೆನಯ್ಯಾ.

೮೦

ಎನ್ನ ಅಷ್ಟವಿಧಾರ್ಚನೆ ಶುದ್ಧವಾಯಿತ್ತಯ್ಯಾ ಪ್ರಭುವೆ
ನೀವು ಲಿಂಗಮೂರ್ತಿಯಾದ ಕಾರಣ
ಎನ್ನ ತನುಮನ ಶುದ್ಧವಾಯಿತ್ತಯ್ಯಾ ಪ್ರಭುವೆ
ನೀವು ಜಂಗಮಮೂರ್ತಿಯಾದ ಕಾರಣ
ಎನ್ನ ಆಪ್ಯಾಯನ ಶುದ್ಧವಾಯಿತ್ತಯ್ಯಾ ಪ್ರಭುವೆ
ನಿಮ್ಮ ಪ್ರಸಾದವ ಕೊಂಡೆನಾಗಿ
ಎನ್ನ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳೆಲ್ಲಾ ಅಳಿದವಯ್ಯಾ ಪ್ರಭುವೆ

ನೀವು ಜ್ಞಾನಲಿಂಗವಾದ ಕಾರಣ
ಇಂತೀ ಸರ್ವದಲ್ಲಿ ಸನ್ನಿಹಿತನಾದೆನು ಕಾಣಾ ಪ್ರಭುವೆ
ಕಲಿದೇವರದೇವಾ.

೮೧

ಲೋಕಾಚಾರಿಯಲ್ಲದ ಶರಣ ಪ್ರಭುದೇವರು
ಸ್ತುತಿ ನಿಂದೆಯಿಲ್ಲದ ಶರಣ ಪ್ರಭುದೇವರು
ಸಂಪತ್ತು ಆಪತ್ತುಗಳಿಲ್ಲದ ಶರಣ ಪ್ರಭುದೇವರು
ಶತ್ರು ಮಿತ್ರುಗಳಿಲ್ಲ[ದ] ಶರಣ ಪ್ರಭುದೇವರು
ಸುಳಿದು ಸೂತಕಿಯಲ್ಲ ನಿಂದು ಬಂಧಕನಲ್ಲ
ಕಲಿದೇವಯ್ಯಾ ನಿಮ್ಮ ಶರಣ ಪ್ರಭುದೇವರು.

೮೨

ಅಂಗಯ್ಯಲಿಂಗ ಕಂಗಳ ನೋಟದಲ್ಲಿ
ಅಜಿತ ಲಿಂಗೈಕ್ಯನು ಪ್ರಭುದೇವರು
ಮನದಱಿವು ನಿರ್ಭಾವದಲ್ಲಿ
ಅಜಿತ ಲಿಂಗೈಕ್ಯನು ಪ್ರಭುದೇವರು
ಸರ್ವಾಂಗನಿಷ್ಠೆ ನಿರ್ವಯಲಾದ ಲಿಂಗೈಕ್ಯನು ಪ್ರಭುದೇವರು
ನಿಜವನುಂಡು ತೃಪ್ತನಾದ ಲಿಂಗೈಕ್ಯನು ಪ್ರಭುದೇವರು
ಮಹಾಘನವ ಗ್ರಹಿಸಿದ ಘನವೇದ್ಯನಾದ ಲಿಂಗೈಕ್ಯನು ಪ್ರಭುದೇವರು
ಕಲಿದೇವರದೇವಾ ಪ್ರಭುವೆಂಬ ಲಿಂಗೈಕ್ಯನ ಶ್ರೀ ಪಾದದಲ್ಲಿ ಮನಮಗ್ನವಾಗಿರ್ದೆನು.

೮೩

ಜಯ ಜಯ ತ್ರಾಹಿ ತ್ರಾಹಿ.
ಗರ್ಭದೊಳಗಣ ಶಿಶುನವಮಾಸವ ಹಾರಿಕೊಂಡಿಪ್ಪಂತೆಯಿರ್ದೆನಯ್ಯಾ ಪ್ರಭುವೆ
ಎನ್ನ ಜನ್ಮ ಸಫಲವಾಯಿತ್ತಯ್ಯಾ ಪ್ರಭುವೆ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯ
ಬಸವರಾಜದೇವರ ದಯದಿಂದ ಪ್ರಭುದೇವರ ದಿವ್ಯ ಶ್ರೀ ಮೂರ್ತಿಯ ಕಂಡು
ಬದುಕಿದೆನು ನಿಮ್ಮ ಧರ್ಮ ನಿಮ್ಮ ಧರ್ಮ
ಶರಣು ಶರಣಾರ್ಥಿ ಸಕಲಪುರಾತರಿಗೆ.

೮೪

ನಿಸ್ಸಂಗತ್ವಂ ನಿರಾಭಾರೀ। ನಿಸ್ಸೀಮಂ ನಿರುಪಾಧಿಕಂ।
ನಿರ್ದೇಹಂ ನಿರ್ಮಳಂ ನಿತ್ಯಂ । ತಸ್ಯ ಜಂಗಮ ಲಕ್ಷಣಂ।
–ಇಂತೆಂದುದಾಗಿ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯ
ನಿಮ್ಮ ಘನಕ್ಕೆ ಘನವಾದ ಪ್ರಭುದೇವರ ಘನವ
ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ?
ಪ್ರಭುದೇವರ ಘನವ ನಿಮ್ಮ ಧರ್ಮ ನಿಮ್ಮಧರ್ಮಾ.

೮೫

ಎನಗೆ ಹಱಿಯಿತ್ತು ತಮವೆಂಬ ಸಂಸಾರದ ಬಂಧ
ಅಡಗಿ ಉಡುಗಿ ಕಂಡೆಹೆನೆಂಬ ಭ್ರಮೆ ಭಾವಕ್ಕೆ ಬಯಲಾಯಿತ್ತು
ನಿತ್ಯ ನಿರಂಜನ ಪರಂಜ್ಯೋತಿ ಪ್ರಕಾಶವಾಯಿತ್ತು
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚೆನ್ನಮಲ್ಲಿಕಾರ್ಜುನಲಿಂಗವು
ಕಾಣಬಂದಿತ್ತು ಪ್ರಭುದೇವರ ಕಾರುಣ್ಯದಿಂದಾ.

೮೬

ಬೆಟ್ಟವ ನೆಮ್ಮಿ ಕಟ್ಟಿಗೆಯು ತಳ್ಳುವುದು ಅದಾವಚ್ಚರಿ ಪ್ರಭುವೆ
[ಪ್ರಾಣಕ್ಕೆ ಹೊಣೆಯಾದಲ್ಲಿ ಕಾದುವುದು ಅದಾವಚ್ಚರಿ]
ಪರಕಾಯವ ತೊಟ್ಟದಲ್ಲಿ ಅಚ್ಚರಿ ಅರಿಬಿರಿದೆ ಪ್ರಭುವೆ
ನಿಮ್ಮುವ ಕಾರುಣ್ಯವಾಗಿದ್ದಲ್ಲಿ ಎನಗೆಲ್ಲಿಯೂ ಸುಖ
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚೆನ್ನಮಲ್ಲಿಕಾರ್ಜುನಲಿಂಗದಲ್ಲಿ
ಪ್ರಭುದೇವರಿಂದ ಬದುಕಿದೆನೂ.

೮೭

[ಕರ್ಣದ ಕೊನೆಯುಲ್ಲಿ ಎರಡು ಪರ್ಣ ಹುಟ್ಟಿ
ನಿರ್ನಾಮ ಶ್ರುತವ ನೆಲ ಗೊಳಲೀಯದು ನೋಡಾ]
ಕರ್ಣದ ಕೊನೆಯು ಪರ್ಣವ ಹಱಿದು
ನಿರ್ಮಲ ನಿರಾವರಣನೆ ಕರ್ಣವಾಗಿಪ್ಪ ಪ್ರಭುದೇವರ
ಶ್ರೀಪಾದಕ್ಕೆ ನಮೋ ನಮೋಯೆನುತಿರ್ದೆನು ಕಾಣಾ
ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೆ.

೮೮

ಲಿಂಗವೆ ಶರಣ ಶರಣನೆ ಲಿಂಗ
ಇವೆರಡಕ್ಕೂ ಭಿನ್ನವಿಲ್ಲವಯ್ಯಾ
ಲಿಂಗಕ್ಕಿಂದವು ಶರಣನೆ ಅಧಿಕವಯ್ಯಾ
ನಿಮಗೆ ಪಂಚಮುಖ
ನಿಮ್ಮ ಶರಣಂಗೆ ಸಹಸ್ರಮುಖ ಸಹಸ್ರಕಣ್ಣು
ಸಹಸ್ರ ಬಾಹು ಸಹಸ್ರ ಪಾದ
ಆ ಶರಣನ ಮುಖದಲ್ಲಿ ರುದ್ರ ಭುಜದಲ್ಲಿ ವಿಷ್ಣು
ಜಂಘೆಯಲ್ಲಿ ಅಜ ಜನನ ಇಂದ್ರ ಪಾದದಲ್ಲಿ
ಚಂದ್ರ ಮನಸ್ಸಿನಲ್ಲಿ ಸೂರ್ಯ ಚಕ್ಷುವಿನಲ್ಲಿ
ಅಗ್ನಿ ವಕ್ತ್ರದಲ್ಲಿ ಪ್ರಾಣದಲ್ಲಿ ವಾಯು
ನಾಭಿಯಲ್ಲಿ ಅಂತರಿಕ್ಷ ಪಾದ ತಳದಲ್ಲಿ ಭೂಮಿ
ದಶದಿಕ್ಕು ಶ್ರೋತ್ರದಲ್ಲಿ ಶಿರದಲ್ಲಿ ಉದಯ ತೆತ್ತೀಸ ಕೋಟಿ ದೇವತೆಗಳು
ಇಂತು ಕುಕ್ಷೆಯಲ್ಲಿ ಜಗವ ನಿರ್ಮಿಸಿದನು
ಅಕ್ಷಯನು ಅಗಣಿತನು
ಇಂತಪ್ಪ ಮಹಾಮಹೇಶ್ವರನ ನಿಜ ಚಿನ್ಮಯ ಸ್ವರೂಪೆ ಪ್ರಭುದೇವರು ನೋಡಾ
ಆ ಪರಮಾನಂದ ಪ್ರಭುವೆ ಎನ್ನಂತರಂಗದ ಸುಜ್ಞಾನ ಪ್ರಾಣಲಿಂಗವೆಂದಱಿದು
ಮನೋಭಾವದಿಂದ ಆರಾಧಿಸಿ ಬದುಕಿದೆನಯ್ಯಾ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೆ.

೮೯

ಅಱಿಯದೆ ಮಱಹಿಂದ ಭವದಲ್ಲಿ ಬಂದೆನಲ್ಲದೆ
ಇನ್ನು ಅಱಿದ ಬಳಿಕ ಬಳಲಲುಂಟೆ?
ಹೃದಯಕಮಲ ಮಧ್ಯದಲ್ಲಿ ನಿಜವು ನೆಲೆಗೊಂಡ ಬಳಿಕ
ಪುಣ್ಯ ಪಾಪಂಗಳೆಂಬುದಕ್ಕೆ ಹೊಱಗಾದೆನು
ಭುವನ ಹದಿನಾಲ್ಕಱೊಳಗೆ ಪರಿಪೂರ್ಣ ನಿರಂಜನ ಜ್ಯೋತಿಯಾಗಿ ಬೆಳಗುವ
ಪ್ರಭುವ ಕಂಡು ಬದುಕಿದೆನು ಕಾಣಾ
ಬಸವಣ್ಣ ಪ್ರಿಯ ಚೆನ್ನಸಂಗಯ್ಯಾ.

೯೦

ತನುವನೆಲ್ಲವ ಜಱಿದು ಮನವನಿಮ್ಮೊಳಗಿರಿಸಿ
ಘನಸುಖದಲಾಡುವ ಪರಿಯ ತೋಱಯ್ಯಾ ಪ್ರಭುವೆ ಎನಗೆ.
ಭಾವವಿಲ್ಲದ ಬಯಲಸುಖವು
ಭಾವಿಸಿದಡೆಂತಹುದು ಬಹುಮುಖಿಗಳಿಗೆ ಕೇಳಯ್ಯಾ ಪ್ರಭುವೆ
ಶ್ರೀಶೈಲಚೆನ್ನಮಲ್ಲಿಕಾರ್ಜುನಾ
ನಾನಳಿದು ನೀನುಳಿದ ಪರಿಯ ತೋಱಯ್ಯಾ ಪ್ರಭುವೆ.

೯೧

ಲಿಂಗಸಂಗ ಸುಖದಲ್ಲಿ ಮನವೇದ್ಯವಾಯಿತ್ತು
ಇನ್ನೆಲ್ಲಿಯಯ್ಯಾ ಪ್ರಭುವೆ, ಎನ್ನಲ್ಲಿ ನಿಮಗೆ ನಿರವಯವು?
ಇನ್ನೆಲ್ಲಿಯಯ್ಯಾ ಪ್ರಭುವೆ, ನಿಮ್ಮಲ್ಲಿ ಕೂಡುವ ಪರಮಸುಖದ ಪರಿಣಾಮವು
ಮನ ಮೀರೆದಪ್ಪಿ ನಾನು ನಿಜವನೆಯ್ದುವ ಠಾವ ಹೇಳಾ
ಚೆನ್ನಮಲ್ಲಿಕಾರ್ಜುನ ಪ್ರಭುವೇ.

೯೨

ಅಂಗಕ್ರಿಯಾ ಲಿಂಗನ ವೇಧಿಸಿ ಅಂಗ ಲಿಂಗದೊಳಗಾಯಿತ್ತಯ್ಯಾ ಪ್ರಭುವೆ.
ಮನ ಅಱಿವ ಬೆರಸಿ ಜಂಗಮಸೇವೆಯ ಮಾಡಿ
ಮನ ಜಂಗಮಲಿಂಗದೊಳಗಾಯಿತ್ತಯ್ಯಾ ಪ್ರಭುವೆ.
ಭಾವ ಗುರುಲಿಂಗದಲ್ಲಿ ಬೆರಸಿ ಮಹಾ ಪ್ರಸಾದವ ಭೋಗಿಸಿ
ಭಾವ ಗುರುಲಿಂಗದೊಳಗಾಯತ್ತಯ್ಯಾ ಪ್ರಭುವೆ.
ಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಒಲುಮೆಯಿಂದ ಸಂದಳಿದು ಸ್ವಯಲಿಂಗವಾದೆನಯ್ಯಾ ಪ್ರಭುವೆ.

೯೩

ಆಸೆಯಾಮಿಷವಳಿದು ಹುಸಿವಿಷಯಂಗಳೆಲ್ಲಾ ಹಿಂಗಿ
ಸಂಶಯಸಂಬಂಧ ನಿಸ್ಸಂಬಂಧವಾಯಿತ್ತು ನೋಡಾ.
ಎನ್ನ ಮನದೊಳಗೆ ಘನಪರಿಣಾಮವ ಕಂಡು
ಮನಮಗ್ನವಾಯಿತ್ತಯ್ಯಾ.
ಅಭಿನವಮಲ್ಲಿಕಾರ್ಜುನಾ
ನಿಮ್ಮ ಶರಣ ಪ್ರಭುದೇವರ ಕರುಣದಿಂದ ಬದುಕಿದೆನೂ.

೯೪

ಏಕಮೇವನದ್ವಿತೀಯಂ ಬ್ರಹ್ಮವೆಂಬ
ಘನಮಹಿಮನ ಕಂಡ ಕಾಣಿಕೆಯಲ್ಲಿ
ಮನಮನ ಬೆರಸಿ ತನುತನು ಕರಗಿ
ಕರಣಂಗಳೆಲ್ಲಾ ತರಹರವಾದವಯ್ಯಾ.
ದೀರ್ಘದಂಡ ನಮಸ್ಕಾರಂ। ನಿರ್ಲಜ್ಜಾ ಗುರುಸನ್ನಿಧೌ
ಶರೀರಮರ್ಥಪ್ರಾಣಂಚ। ಸದ್ಗುರುಭ್ಯೋ ನಿವೇದಯೇತ್
ಎಂದುದಾಗಿ ಶರಣುವೊಕ್ಕೆ ನಾನು.
ಎನ್ನ ಶಿರ ನಿಮ್ಮ ಚರಣದಲ್ಲಿ ಬಿಡಿಸಬಾರದ ಸಂಗ
ಮಹಾದಾನಿಸೊಡ್ಡಳಾ ನಿಮ್ಮ ಶರಣ ಪ್ರಭುದೇವರ
ಶ್ರೀಪಾದವ ಕಂಡು ಎನ್ನ ಭವದ ಬಳ್ಳಿಯ ಬೇರು ಹಱಿಯಿತ್ತಯ್ಯಾ.

೯೫

ಕೂರ್ಮನ ಶಿಶುವಿನ ಸ್ನೇಹದಂತೆಯಿಪ್ಪ ದೇವನೆನಗಿಂದು
ಪ್ರತ್ಯಕ್ಷ ಕಣ್ಣಮುಂದೆ ಗೋಚರವಾದ ನೋಡಾ.
ಎನ್ನ ಅಂತರಂಗದಲ್ಲಿ ಹೊಣೆಹೊಕ್ಕು
ವಿನಯ ಸದ್ಗೋಷ್ಠಿಯ ಮಾಡುವ ನಿಃಕಳಂಕ ಚೈತನ್ಯನು
ಸಕಲರೂಪ ಸನ್ನಹಿತನಾದ ನೋಡಾ.
ಬಟ್ಟಬಯಲು ಘಟ್ಟಿಗೊಂಡಂತೆ
ಏಕಾಂತವೀರಸೊಡ್ಡಳಾ ನಿಮ್ಮ ಶರಣಪ್ರಭುದೇವರ ನಿಲವು.

೯೬

ಬಱದಲ್ಲಿ ಆಱಲುಗೊಂಡವಂಗೆ ಅಮೃತ ಸಿಕ್ಕಿದಂತೆ,
ಜರಾಮರಣದುಃಖಿ ಮಱುಜವಣಿಯ ಕಂಡಂತೆ.
ಭವದ ಬಾಗಿಲ ಹೊಗದೆ ಬದುಕಿದೆನಯ್ಯಾ ನಿತ್ಯವ ಕಂಡು.
ಒಳಗೆ ಬೆಳಗುವ ಪ್ರಕಾಶ ಹೊಱಗೆ ಮೂರ್ತಿಗೊಂಡಂತೆ
ಕಂಗೆ ಮಂಗಳವಾಯಿತ್ತಯ್ಯಾ.
ಮಹಾಘನದಲ್ಲಿ ಸಾಕಾರ ಸೊಡ್ಡಳನ ಶರಣ
ಪ್ರಭುವಿಂಗೆ ನಮೋ ನಮೋ ಎನುತಿರ್ದೆನು.

೯೭

[ಮನದ] ಸಂಚದೋವರಿಯೊಳಗೆ ಮಿಂಚಿನ ಗೊಂಚಲು ಬಳ್ಳಿವರಿಯಿತ್ತಯ್ಯಾ.
ಎನ್ನ ಕಾಯದ ಕಂಗಳೊಳಗೆ ನಿರುಪಮಸುಖ ಸಾಧ್ಯವಾಯಿತ್ತು.
ಬಯಸುವ ಬಯಕೆ ಕೈಸಾರಿತ್ತು,
ಅಱಸುವ ಅಱಕೆ ನಿಂದಿತ್ತು,
ಆಹಾ! ಕರತಳಾಮಳಕವಾಯಿತ್ತಯ್ಯಾ.
ಸತ್ಯ ಶರಣನ ದರ್ಶನ ಏನ ಮಾಡದು?
ಮಹಾದಾನಿ ಸೊಡ್ಡಳನ ಶರಣ
ಪ್ರಭುದೇವರ ಶ್ರೀಪಾದವ ಕಂಡು ಬದುಕಿದೆನಯ್ಯಾ.

೯೮

ಆಕಾರವಿಲ್ಲದ ನಿರಾಕಾರದ ಮಂಟಕ್ಕೆ
ನಿರಾಳವೆಂಬ ಗಂಡ ಬಂದು ಕುಳ್ಳಿರಲು
ಮೂವರು ಹೆಮ್ಮಕ್ಕಳು ಸೇವೆಯ ಮಾಡುವರು,
ಇಬ್ಬರು ಸಂಗವ ಮಾಡುತ್ತಿಪ್ಪರು,
ಒಬ್ಬಾಕೆ ಪುರುಷನ ನುಂಗಿಕೊಂಡಿಪ್ಪಳು.
ಇವ ಆಳುವರ ಕೂಡೆ ಹೊಯಿಕೈಯಾಗಿಪ್ಪನ ಕಂಡು
ಆನು ಪ್ರಭುವೆಂದಱಿದು
ಆತನ ನಿಜಪಾದಕ್ಕೆಱಗಿ
ಎನ್ನ ಭವವ ಹಱಿದೆನು.
ಮಹಾದಾನಿ ಸೊಡ್ಡಳ ಪ್ರಭುವ ಕಂಡ
ಕಡು ಸುಖವನುಪಮಿಸ ಬಾರದು.

೯೯

ಮುತ್ತೊಡೆದ ಚಿಪ್ಪಿನಲ್ಲಿ ನಿವಾಳಿಗಳ ಮಾಡಿ
ಹೊನ್ನ ಪರಿಯಾಣಂಗಳ ನಡುವೆ ತಂದು ಮೇಳೈಸಿ
ಉಟ್ಟ ಪಟ್ಟಾವಳಿಯ ದೇವಾಂಗದ ಮೇಲುಹೊದಕೆಯ
ಸರ್ವಾಂಗ ಶೃಂಗಾರದ ರತ್ನಮಯವೆಲ್ಲಾ
ಕಳಶಕನ್ನಡಿ ಕರ್ನಿಕೆಯುರ ಜವಳಿಪಂತಿ ಶೋಭಿಸುತ್ತಿರಲು,
ಶಿವಭಕ್ತಿಜನಸತಿಯರು ನಡೆದುಬಂದರು ಶೂನ್ಯಸಿಂಹಾಸನದಲ್ಲಿಗೆ.
ನಿಃಕಳಂಕ ಮಲ್ಲಿನಾಥಪ್ರಭುವಿಂಗೆ ಆರತಿಯನೆತ್ತುವೆವೆಂದೂ.

೧೧೦

ಕೊಟ್ಟದ್ರವ್ಯವನು ತಮ್ಮತಮ್ಮ ಲಿಂಗಕ್ಕೆ ಸಮರ್ಪಣೆಯ ಮಾಡಿ
ತನು ಭೋಗಾದಿಭೋಗಂಗಳ ಸಲಿಸುತ್ತಿರ್ದರಲ್ಲಾ
ಹೊನ್ನ ಪರಿಯಾಣದಲ್ಲಿ ಪರಿಪರಿಯ ನಿವಾಳಿಗಳು
ಗುಗ್ಗುಳ ಧೂಪದಶಾಂಗವೆಸೆಯಲು
ಭರದಿಂದ ನಡೆತಂದರು.
ಶೂನ್ಯಸಿಂಹಾಸನದ ಮುಂದೆ ನಿಂದಿರ್ದರು.
ಕೇಳಿ ಪಂಚಮಹಾ[೧][ವಾದ್ಯ][೧] ವೊಳಗುತ್ತಲು
ಅವರವರ ಕಯ್ಯ ನಿವಾಳಿವಲಗೆಗಳನೀಸಿಕೊಂಡು
ನಾಗಾಯುವ್ವೆಗಳು ಶ್ರೀ [ನಿಃಕಳಂಕ]ಮಲ್ಲಿನಾಥಪ್ರಭುವಿಂಗೆ
ಆರತಿಯನೆತ್ತುತ್ತಿರ್ದರಲ್ಲಾ.

೧೧೧

ಬಡವ[೨][ಂಗೆ][೨] ನಿಧಾನ ಕಡವರ ಕೈಸಾರಿತ್ತಯ್ಯಾ,
ಕಾಣಬಾರದ ಬಯಲು ರೂಪುಗೊಂಡಿತ್ತಯ್ಯಾ,
ನಿರಾಳ ನಿರ್ಣಯದ ಮೇಲೆ ನಿಂದಿತ್ತು.
ಎನ್ನ ಭಾವದ ಕೊನೆಯ ಮೊನೆಯ ಮೇಲೆ
ಮನೆಯ ಮಾಡಿಕೊಂಡಿಪ್ಪ ಪ್ರಭುದೇವರ ಕಂಡು
ಬದುಕಿದೆನು ಕಾಣಾ ನಿಃಕಳಂಕಮಲ್ಲಿಕಾರ್ಜುನಾ.

೧೧೨

ಯೋಗದ ಹೊಲಬ ಸಾಧಿಸಬಾರದು.
ಯೋಗವೆಂಟಱ ಹೊಲಬಲ್ಲ,
ಯೋಗ ಒಂಬತ್ತಱ ನಿಲವಲ್ಲ,
ಯೋಗವಾಱಱ ಪರಿಯಲ್ಲ,
ಧರೆಯ ಮೇಲಣ ಅಗ್ನಿ ಮುಗಿಲಮುಟ್ಟಿದೆ ಇಪ್ಪರೆ ಯೋಗ.
ಜ್ಞಾನದ ಕಂಗಳ ಬೆಳಗು ಶಶಿಯ ಮುಟ್ಟಿದವೆಂದರೆ
ಘನಮನವನೊಳಕೊಂಡುದು ಯೋಗ.

೧–೧ ಸ್ಯ, ೨–೨ ರ

ವನಿತೆಯುರ ಋುವರನು ಪತಿಯೊಮ್ಮೆ ಕೂಡಿ
ತಳುವಳಿದು ಇರಬಲ್ಲಡದು ಯೋಗ.
ಘನಮಹಿಮ ಪ್ರಭುವಿನ ಸಮರಸವ ಕಂಡು
ಚಿಕ್ಕಯ್ಯಪ್ರಿಯ ಸಿದ್ಧಲಿಂಗಯಿಲ್ಲಯಿಲ್ಲಾ ವೆನುತಿರ್ದನೂ.

೧೧೩

ನೀರೊಳಗೆ ಕಿಚ್ಚಿದ್ದು ನೆಳಲ ಸುಟ್ಟಿತ್ತು,
ನೆಳಲಸುಟ್ಟ ವಿಭೂತಿಯನಿಟ್ಟುಕೊಂಡರೆ ಭೂಮಿ ಸತ್ತಿತ್ತು,
ಆಕಾಶ ಹೊತ್ತಿತ್ತು,
ದೇವನ ದೇವತ್ವ ಕೆಟ್ಟಿತ್ತು,
ದೇವಿಯು ಒಕತನ ಮುಱಿಯಿತ್ತು.
ಹೇಳಬಾರದ ಠಾವಿನಲ್ಲಿ ಕಾಣಬಾರದ ಲಿಂಗ ಮೂರ್ತಿಗೊಂಡರೆ
ನೋಡಬಾರದ ಪೂಜೆಯಾಯಿತ್ತು.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಪ್ರಭುದೇವರ ನಿಲವ ಕಂಡು
ಇಲ್ಲ ಇಲ್ಲಾ ವೆನುತಿರ್ದನೂ.

೧೧೪

ನೆಲನ ಹೊದ್ದದು ಆಕಾಶವ ಮುಟ್ಟದು.
ಎಡೆಯುಲೊಂದು ರೂಪಿಲ್ಲಿ
ಭಾವವೆಂಬ ಜ್ಞಾನವೆ ನಿವಾಸ
ನಿರ್ಲೇಪವೆ ಭಿತ್ತಿ
ನಿರಹಂಕಾರವೆ ಶಿಖರಿ
ಮಹದಹಂಕಾರವೆ ಶೃಂಗಾರಕಳಶ
ಸಹಸ್ರಪತ್ರದ ನವಕಮಳಸಿಂಹಾಸನದ ನಿತ್ಯವೆ ಮಲಗು
ನಿಜವೆಂಬ ವಿಸ್ತರದಲ್ಲಿ
ನಿತ್ಯನಿರಾಳವೆಂಬ ಮಹಾಘನವು ಬಂದು ಮೂರ್ತಿಗೊಳಲು
ಕಾಯುದ ಕಣ್ಗೆ ಕಾಣಬಾರದು,
ಮನದ ಮುಂದೆ ಅಳವಡದು,
ಭಾವದ ಬಗೆಗೆ ಮೈದೋಱದು.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದನೂ.

೧೧೫

ನಿನ್ನಳವಲ್ಲ ಎನ್ನಳವಲ್ಲ
ಇದಾರಳವಲ್ಲದ ಘನವು ನೋಡಯ್ಯಾ.
ಕಾಬವರಿಗೆ ಕಂಗಳಿಗೆ ಅಸಾಧ್ಯ
ಮುಟ್ಟುವರೆ ಸೋಂಕಿಂಗಸಾಧ್ಯ
ಮಾತನಾಡಿಸಿ ನೋಡಿದಡೆ ವಾಙ್ಮನಾತೀತ.
ನಿಂದರೆ ನೆಳಲಿಲ್ಲ ಸುಳಿದಡೆ ಹಜ್ಜೆಯಿಲ್ಲ
ಪ್ರಭುದೇವರೆಂಬ ಭಾವ ತೋಱುತ್ತದೆ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣ
ಪ್ರಭುದೇವರ ಚರಣವಿಡಿವವೇಳಾ.

೧೧೬

ಬಯಸುವ ಬಯಕೆ ಕೈಸಾರುವಂತೆ
ನಿಧಿ ನಿಧಾನ ಮನೆಗೆ ಬಪ್ಪಂತೆ
ಪರಿಮಳವನಱಸಿ ಬಪ್ಪ ಭ್ರಮರನಂತೆ
ಚಿಂತಾಮಣಿಯ ಪುತ್ಥಳಿ ನಡೆಗಲಿತಂತೆ
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣ
ಪ್ರಭುದೇವರ ಬರವು ಕಾಣ ಬರುತ್ತಿದೆ ನೋಡಾ ಸಂಗನಬಸವಣ್ಣಾ.

೧೧೭

ಅನುಮಿಷನಾದ ನಿಬ್ಬೆಱಗಿನ ಲಿಂಗೈಕ್ಯನು ಪ್ರಭುದೇವರು.
ಭಾವನಿರ್ಭಾವವನೆಯ್ದಿ ಜ್ಞಾನವೆ ಪರಮಾಶ್ರಯವಾಗಿಪ್ಪ ಲಿಂಗೈಕ್ಯನು ಪ್ರಭುದೇವರು.
ಮಹವನೊಳಕೊಂಡ ಮಹಿಮ ಲಿಂಗೈಕ್ಯನು ಪ್ರಭುಗೇವರು.
ಬಸವಪ್ರಿಯ ಕೂಡಲಚೆನ್ನಸಂಗಯ್ಯಾ ನಿಮ್ಮ ಶರಣ
ಪ್ರಭುದೇವರಿಂಗೆ ನಮೋ ನಮೋ ಎನುತಿರ್ದೆನೂ.

೧೧೮

ನಿರಾಕಾರದ ಶಕ್ತಿಯಲ್ಲಿ
ನಿರಾಳವೆಂಬ ತನು ನಿಃಶೂನ್ಯವೆಂಬ ಸಿಂಹಾಸನದ ಮೇಲೆ
ಘನವಾಗಿ ತೊಳಗಿ ಬೆಳಗುತ್ತಿರ್ದನು ಪ್ರಭುದೇವರು.
ದೆಸೆಯೆಲ್ಲಾ ಮುಖವಾಗಿ

ಮುಖವೆಲ್ಲಾ ಜಗವಾಗಿ
ಅಖಂಡ ಪರಿಪೂರ್ಣ ಪರಬ್ರಹ್ಮ ತಾನಾದನು ಪ್ರಭುದೇವರು.
ಈ ಮಹಿಮನ ನೆನೆದಡೆ ಮನೋಮುಕ್ತಿ,
ಕಂಡಡೆ ರೂಪುಮುಕ್ತಿ,
ನುಡಿಸಿದಡೆ ಶಬ್ದಮುಕ್ತಿ,
ಸಂಗವಮಾಡಿದಡೆ ಸರ್ವಾಂಗ ಲಿಂಗೈಕ್ಯ,
ಬಸವ ಪ್ರಿಯ ಕೂಡಲಚೆನ್ನಸಂಗಯ್ಯಾ ನಿಮ್ಮ ಶರಣ
ಪ್ರಭುದೇವರ ಶ್ರೀಪಾದಕ್ಕೆ ಶರಣೆಂದು ಬದುಕಿದೆನೂ.

ಪ್ರಭುದೇವರ ಸ್ತೋತ್ರ ಸಮಾಪ್ತ ಮಂಗಳ ಮಹಾ
ಶ್ರೀ ಶ್ರೀ ಶ್ರೀ

ಶಿವನ ಬಿರುದಾವಳಿಸ್ತೋತ್ರದ ವಚನಗಳು

೧

ಓಂ ಪ್ರಥಮದಲ್ಲಿ
ದಿವ್ಯ ನಿರಾಲಂಬಮೂರ್ತಿ ಜಗಹಿತಾರ್ಥವಾಗಿ ತತ್ತ್ವದಲ್ಲಿ
ಪಂಚಬ್ರಹ್ಮಸಾಕಾರಮೂರ್ತಿ ಲೀಲಾಸಂಭವನಾದಲ್ಲಿ
ಅಣುವಿಂಗಣು ಮಹತ್ತಿಂಗೆ ಮಹತ್ತಾದಲ್ಲಿ
ಅಂಗಕಗಂಡ ಜಾತ ಆತ್ಮಸುಗಂಧ ನೀನಾದೆಯಲ್ಲಾ
ಏಣಾಂಕಧರ ಸೋಮೇಶ್ವರಲಿಂಗ.

೨

ಪರಶಿವನು ಸುಖಮಯನು ಸುಖಾತ್ಮನು
ಸುಖಸ್ವರೂಪನು ನಿಷ್ಕಳನು ನಿರೂಪನು
ಅಪ್ರಮೇಯನು ಅನಾಮಯನು ಪರಾತ್ಪರನು
ಅತಿಸೂಕ್ಷ್ಮನು ಮಹಾಸ್ಥೂಲನು
'ಶಿವಂ ಪರಾತ್ಪರಂ ಸೂಕ್ಷ್ಮಂ ಸ್ಥೂಲಂ ಸರ್ವಗತಾವ್ಯಯಂ
ಆನಂದಿತಮನೌಪಮ್ಯಮಪ್ರಮೇಯಮನಾಮಯಮ್
ಶುದ್ಧತ್ವಾಚ್ಛಿವಮುದ್ದಿಷ್ಟಂ ಪರಮಾರ್ಥಾ ಪುರಾಪರಾತ್'
ಎಂದುದಾಗಿ
'ಅಣೋರಣೀಯಾನ್ ಮಹತೋ ಮಹೀಯಾನ್'
ಇಂತಹ ಶಿವನ ಘನವನೇನೆಂಬೆನಯ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೩

ಶಿವನು ಸರ್ವಗತನು,
ಸಕಲಬ್ರಹ್ಮಾಂಡಗಳೆಲ್ಲ ಸಕಲನೆಂದು ಹೇಳಿತ್ತು ಶ್ರುತಿ.
'ವಿಶ್ವತೋಶ್ಚಕ್ಷುರುತ ವಿಶ್ವಾಧಿಕೋ ರುದ್ರೋ
ಮಹಾಋಷಿಸ್ಸರ್ವೋ ಹಿ ರುದ್ರಃ' ಯೆಂಬ ಶ್ರುತಿ
ಸಕಲ ಜೀವಚೈತನ್ಯ ಶಿವನೆಂದು ಹೇಳಿತ್ತು.
ಇಂತಪ್ಪ ಶಿವ ನಿಮಗೆ ಸರಿಯುಂಟೆ?
ವಾಚಾತೀತಂ ಮನೋತೀತಂ ಭಾವಾತೀತಂ ಪರಶಿವಃ।
ಸರ್ವಶೂನ್ಯಂ ನಿರಾಕಾರಂ ನಿತ್ಯತ್ವಂ ಪರಮಂ ಪದಂ॥
—ಯಿಂತಪ್ಪ ಪರಶಿವನ ಕಾಣವು ವೇದಂಗಳು

ವೇದಕ್ಕತೀತವಾಹಂಥಾ ಶಿವನ ಮಹಾತ್ಮೆಯು
ಪೊಗಳಲಿಕೆ ಹರಿಬ್ರಹ್ಮಾದಿಗಳಿಗಳವಲ್ಲ.
ಇಂತಪ್ಪ ಶಿವನ ಮಹಾಮಹಿಮೆಗೆ
ನಮೋ ನಮೋಯೆಂಬೆನು ಕಾಣಾ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

೪

ಋಗ್ವೇದ ಕಾಣದಯ್ಯ ಸದ್ಯೋಜಾತನನು,
ಯಜುರ್ವೇದ ಕಾಣದಯ್ಯ ವಾಮದೇವನನು,
ಸಾಮವೇದ ಕಾಣದಯ್ಯ ತತ್ಪುರುಷನನು,
ಅಥರ್ವಣವೇದ ಕಾಣದಯ್ಯ ಅಘೋರನಾಥನನು.
ಅದೆಂತೆಂದೊಡೆ:
'ಅತೀತಃ ಪಂಥಾನಂ ತವ ಚ ಮಹಿಮಾ
ವಾಙ್ಮನಸಯೋರತದ್ವ್ಯಾವೃತ್ಯಾ ಪೃಥಿವ್ಯಾಂ
ಚಕಿತಮಭಿದತ್ತೇ ಶ್ರುತಿರಪಿ
ಸ ಕಸ್ಯ ಶ್ರೋತವ್ಯಃ ಕತಿ ವಿಧ ಗುಣಾಃ
ಕಸ್ಯ ವಿಷಯಃ ಪದತ್ವರ್ವಾಚನೇ ಪತತಿಃ
ನಮನಃ ತಸ್ಯ ವಚಃ'–ಎಂದುದಾಗಿ
ಚತುರ್ಮುಖದ ಬ್ರಹ್ಮಂಗೆ ಅಗಮ್ಯದೇವನಾದನೆಂದು
ಅನಂತವೇದ ಕಾಣಲರಿಯವು ಈಶಾನ್ಯ ಸಕಳೇಶ್ವರದೇವನ.

೫

ವೇದಾತೀತ ಷಡುವರ್ಣರಹಿತ
ಅಷ್ಟತ್ರಿಂಶತ್ಕಳಾತೀತ ವ್ಯೋಮಾತೀತ
ಕೂಡಲಸಂಗಮದೇವನು.

೬

ಜೀವಂಗೆ ಜೀವವಾದಾತನೆ ಪರಮಾತ್ಮನು.
ಪರಬ್ರಹ್ಮವು ಉಪಮೆಗುಪಮಾತೀತ,
ಭಾವಕ್ಕೆ ಭಾವಾತೀತ, ಅಱಿವಿಂಗೆ ಅಗೋಚರ,
ಅತರ್ಕ್ಯನಗಣಿತನಪ್ರಮೇಯ
ನಿತ್ಯನಿರಂಜನ ನೀನೆ ಸೌರಾಷ್ಟ್ರ ಸೋಮೇಶ್ವರಾ.

೭

ಆದಿಮುಕ್ತ[ನು] ಅನಾದಿಮುಕ್ತನು
ನಾದಬಿಂದುಕಳಾತೀತನು
ಭೇದಿಸಬಾರದಭೇದ್ಯನಪ್ರಮಾಣನು
ವೇದಶಾಸ್ತ್ರ ಆಗಮಪುರಾಣಂಗಳಱಿಸಿ ಕಾಣದ
ಅನಾದಿಪುರುಷನು ಸ್ವಯಂಪ್ರಕಾಶ ಸ್ವತಃಸಿದ್ಧನ
ಎಂತಱಿವರಯ್ಯ, ಸ್ವಾನುಭಾವ ಸಿದ್ಧರಲ್ಲದವರು?
ಹಲವನೋದಿ ಓದಿ ಕೇಳಿ ಹೇಳಿ
ಹಲಬರೆಲ್ಲ ಹೊಲಬುದಪ್ಪಿ ಕೆಟ್ಟರು.
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನ
ಪ್ರಸಾದವಿಲ್ಲದವರೆಲ್ಲರು
ಶಿವನ ನಿಜವನಱಿಯದೆ ಭ್ರಾಂತರಾದರು.

೮

ಕೆಲರು ಚತುರ್ವೇದ ಭಾರಕರಾದರು,
ಕೆಲವರು ಆಗಮಂಗಳದಲ್ಲಿ ಸವೆದರು,
ಕೆಲರು ಷಟ್‌ತರ್ಕಂಗಳಲ್ಲಿ ಮೋಹಿ[ಸಿ] ದರಲ್ಲದೆ
ತಾರಕಬ್ರಹ್ಮವನಱಿತುದಿಲ್ಲ.
—ಅದೆಂತೆಂದೊಡೆ
ಕೇಚಿದಾಗಮಜಾಲೇಷು ಕೇಚಿನ್ನಿಗಮ ಸಂಚಯೇ
ಕೇಚಿತ್ತರ್ಕೇಣ ಮುಹ್ಯಂತಿ ನೈವ ಜಾನಂತಿ ತಾರಕಂ॥
—ಎಂದುದಾಗಿ
ವೇದಾಗಮತರ್ಕಂಗಳಿಗೆ ಅಗಮ್ಯ ಅಗೋಚರ ಅತರ್ಕ್ಯನಾದ
ಸೌರಾಷ್ಟ್ರ ಸೋಮೇಶ್ವರಲಿಂಗವನಱಿಯದೆ
ಕಾಲಚಕ್ರ ಕರ್ಮಚಕ್ರ ಪ್ರಳಯಚಕ್ರಕ್ಕೊಳಗಾದರಯ್ಯ.

೯

ಅನಂತಕೋಟಿಪ್ರಕಾಶವೆಂದು ಗಣಿಸಬಾರದ ಬ್ರಹ್ಮದ ಬೆಳಗು,
ನೋಡಬಾರದ ಘನವು ತೆಱಹಿಲ್ಲದ ಬೆಳಗು ಮಹಾಬೆಳಗು,
ತನ್ನಿಂದ ತಾನಾದ ಸ್ವಯಸುಖದ ನಿಜದ ನಿತ್ಯನಿಜರೂಪು

ನಿರಂಜನ ನಿಗಮಕ್ಕತೀತ
ಹರಿಯಜರಿಗೆ ಜ್ಯೋತಿರ್ಮಯ ತಾನೆ
ಲೀಲೆಗೆ ಮೂಲವಾದ ಗುಹೇಶ್ವರಲಿಂಗದ
ಘನಕ್ಕೆ ಘನವಾವುದು?

೧೦

ಹರಿಯೆಂಬಾತ ನಿಮ್ಮ ಚರಣವನಱಿಯ,
ಬ್ರಹ್ಮನೆಂಬಾತ ನಿಮ್ಮ ಮಕುಟವನಱಿಯ,
ಯತಿ ವ್ರತಿ ಋಷಿಗಳೆಂಬವರು ನಿಮ್ಮ ಒಳಗನಱಿಯರು,
ಸಮಸ್ತದೇವರ್ಕಳು ನಿಮ್ಮ ರೋಮದ ಪ್ರಮಾಣವನಱಿಯರು,
ಶತಕೋಟಿಸೂರ್ಯರು ನಿಮ್ಮ ಬೆಳಗಕಾಣಲಱಿಯರು.
ಕಪಿಲಸಿದ್ಧಮಲ್ಲಿಕಾರ್ಜುನಾ
ನಾ ನಿಮ್ಮನಱಿಯಬಲ್ಲನೆ ಅಯ್ಯ?

೧೧

ವಿಶ್ವಜಿತನು ಧನುಜಿತನು
ಸ್ವರ್ಜಿತನು ಸೂತ್ರಾರ್ಜಿತನು
ನೃಜಿತನು ಊರ್ವರಾಜಿತನು
ಅಶ್ವಜಿತನು ಗೋಜಿತನು
ಅರ್ಜಿತನು ಸುಸಂವೇದ್ಯನು ವೇದನಾದಾತೀತನು
ತುರೀಯ ಪರಮಾನಂದ ನಿರವಯ
ಸೂರ್ಯಕೋಟಿಪ್ರಭೆಯ ಬೆಳಗಿನ
ಸಹಸ್ರಕಿರಣದಗ್ರಪಟಲದ ಬೆಳಗು
ಕೂಡಲಸಂಗಯ್ಯ.

೧೨

ಚಿದ್ಬ್ರಹ್ಮಾಂಡವೆಂಬ ಭಾಂಡದಲ್ಲಿ ಅನಂತ ವಿಚಿತ್ರಭುವನಂಗಳಯ್ಯ.
'ಆಲಯಂ ಸರ್ವಭೂತಾನಾಂ'—ಯೆಂದುದಾಗಿ
ಅನಂತ ಕೋಟಿ ಬ್ರಹ್ಮಾಂಡಗಳು
ನಿಮ್ಮ ರೋಮಕೂಪದೊಳಗಡಗಿಪ್ಪವೆಂದರೆ
ಬ್ರಹ್ಮ ವಿಷ್ಣು ರುದ್ರರಿವರೆಲ್ಲ ಒಂದು ಬ್ರಹ್ಮಾಂಡದೊಳಗಣ ಬಾಲಕರು.

ಇವರೆತ್ತ ಬಲ್ಲರೋ ಲಿಂಗದ ನಿಜವ?
ಅಪ್ರಮಾಣನಗೋಚರ ಮಹಂತ
ನಿಮ್ಮ ನಿಜದೊಳಗನಾರು ಬಲ್ಲರಯ್ಯ?
ಸೌರಾಷ್ಟ್ರ ಸೋಮೇಶ್ವರ.

೧೩

ಕಾಮಿತವಿಲ್ಲ ಕಲ್ಪಿತವಿಲ್ಲ
ನಾಮ ಸೀಮೆಯೆಂಬುದಿಲ್ಲ.
ಭಾವಿಸಲಿಲ್ಲ ಲಕ್ಷಿಸಲಿಲ್ಲ ರೂಹಿಸಲಿಲ್ಲ.
ವಾಙ್ಮನಾತೀತವೆಂದಲ್ಲಿ ನೆನೆಯಲಿಲ್ಲ.
'ಅತ್ಯತಿಷ್ಠದ್ದಶಾಂಗುಲಃ'ವೆಂದಲ್ಲಿ ಲಕ್ಷಿಸಲಿಲ್ಲಿ.
'ಸರ್ವಗೋಪ್ಯೋ ಮಹಾದೇವ;'ಯೆಂದಲ್ಲಿ ರೂಹಿಸಲಿಲ್ಲ.
ಇಲ್ಲ ಇಲ್ಲ ಎನಲಿಲ್ಲದಲ್ಲಿ ಅಲ್ಲಿಯೇ ನಿರ್ಲೇಪವಾದ
ಸೌರಾಷ್ಟ್ರ ಸೋಮೇಶ್ವರಲಿಂಗವ ಕಂಡೆ.

೧೪

ತಂದೆ ತಾಯಿ ಸಂಯೋಗ ಸಂಬಂಧ ಸಂಭೂತನಲ್ಲದವನು
ಶ್ವೇತ ಪೀತ ಕಪೋತ ಹರಿತ ಕೃಷ್ಣ ಮಂಜಿಷ್ಠವೆಂಬ ಷಡುವರ್ಣರಹಿತನು
ಆದಿಮಧ್ಯಾವಸಾನಂಗಳಿಲ್ಲದ ಸ್ವತಂತ್ರಮಹಿಮನು
ವೇದವಿಂತುಟೆಂದು ರೂಹಿಸಬಾರದವನು.
ನಾ ಬಲ್ಲೆನೆಂಬ ಹಿರಿಯರ ಒಗ್ಗೇಣಮಿಕ್ಕಿಪ್ಪ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

೧೫

ಹುಟ್ಟು ಹೊಂದೆಂಬುದಿಲ್ಲದ ದೇವಾ
ನಿಮ್ಮಿಂದ ನೀವೇ ಶೂನ್ಯದಲ್ಲಿ ನಿಂದು ಸ್ವಯಂಭುವಾದಿರಲ್ಲ.
ಬೀಜವೃಕ್ಷದಂತೆ ಸಾಕಾರ ನಿರಾಕಾರವು ನೀವೆಯಾದಿರಲ್ಲ.
ಸಕಲವೆಲ್ಲಕ್ಕೆ ಮೂಲಗರಾದಿರಲ್ಲ.
ನಿಮ್ಮ ನಿಜವ ನೀವೇ ಅಱಿವುತಿದ್ದಿರಲ್ಲ.
ನಿಮ್ಮ ಮಹಿಮೆಯ ನೀವೇ ಬಲ್ಲಿರಿ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ.

೧೬

ಎಲೆ ಅಯ್ಯಾ ನೀವು ನಿರಾಕಾರವಾಗಿದ್ದಿರಿಯಾಗಿ
ಆ ನಿರಾಕಾರವೆ ಪಂಚವಮದಲ್ಲಿ ನಿಂದರೆ ನಾದ ತೋಱಿತ್ತು.
ಆ ನಾದದಲ್ಲಿ ಬಿಂದು ತೋಱಿತ್ತು.
ಆ ನಾದ ಬಿಂದುಗಳನೊಡೆದು ಮೂಡಿ
ನಿರುಪಾಧಿಕ ಜ್ಯೋತಿಯಂತೆ ಸಕಲ ನಿಃಕಲರೂಪಾದಿರಯ್ಯ.
ರವಿಕೋಟಿತೇಜಪರಿಪೂರ್ಣ ಮೂಲಚೈತನ್ಯರೂಪು ನೀನು ಕಂಡಯ್ಯ.
ಭೇದಿಸಬಾರದಭೇದ್ಯ ಸಾಧಿಸಬಾರದಸಾಧ್ಯ ನೀನು ಕಂಡಯ್ಯ.
ನಿಮ್ಮ ಸಹಜದ ನಿಲವನಾರು ಬಲ್ಲರು?
ನಿಮ್ಮಿಂದ ನೀವೇ ರೂಪಾದಿರಯ್ಯ.
ನಿಮ್ಮ ಪರಿಣಾಮ ಪದದಲ್ಲಿ ಒಂದನಂತಕಾಲವಿದ್ದಿರಯ್ಯ
ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ.

೧೭

ಆ ಪರಬ್ರಹ್ಮವೆ
ಓಂಕಾರವಪ್ಪ ಪ್ರಣಮಸ್ವರೂಪು ಪರಮಾತ್ಮನೆನಿಸಿ
ಪರಶಿವನಾಮದಿಂ ಪರಶಕ್ತಿಸಂಯುಕ್ತನಾಗಿ
ಚತುರ್ದಶಭುವನಂಗಳೊಳ ಹೊರಗೆ
ಅಂತರ್ಗತ ಬಹಿರ್ಗತವಾಗಿ ನಾದವುಂ ತೋಱಿ,
'ಭರ್ಗೋ ದೇವ'ನೆಂಬ ನಾಮವುಂ ತಳೆದು
ಊರ್ಧ್ವರೇತುವೆನಿಸಿ
ವಿಶ್ವತೋಮುಖ ವಿಶ್ವತೋಚಕ್ಷು ವಿಶ್ವತೋಬಾಹು
ವಿಶ್ವತೋಪಾದದಿಂ ವಿಶ್ವಗರ್ಭೀಕೃತನಾಗಿ.
ದೇವತಾಂತರದಿಂ ಮಾನಸಾಂತರವನನುಕರಿಸಿ
ಮಾನಸದಲ್ಲಿ ರವಿಕೋಟಿತೇಜದಿಂ
ಚಿತ್ಸುಧಾಮೃತವೆ ಅಂಗವಾಗಿ
ಚಿದರ್ಕಪ್ರಭಾಕರವೆ ಪ್ರಾಣವಾಗಿ
ಸೌರಾಷ್ಟ್ರ ಸೋಮೇಶ್ವರನಿಂತಿಂತು
ಕರ್ತನು ಭರ್ತನು ಹರ್ತನು ತಾನೆಯಾಗಿ
ಪರಮ ಸ್ವಯಂಭು ಸ್ವತಃ ಸಿದ್ಧದಿ ಸಚ್ಚಿದಾನಂದಸ್ವರೂಪದಿಂ
ನಿತ್ಯಪರಿಪೂರ್ಣತ್ವದಿಂದೆಡದೆರಹಿಲ್ಲದಿಪ್ಪನಯ್ಯ.

೧೮

ನಾದಬ್ರಹ್ಮ ನಾದಾತೀತಬ್ರಹ್ಮ ಶಬ್ದಬ್ರಹ್ಮ ನಿಃಶಬ್ದಬ್ರಹ್ಮ
ವಿಶ್ವಬ್ರಹ್ಮ ಏಕ[ಂ]ಬ್ರಹ್ಮ ಸರ್ವಂ ಖಲ್ವಿದಂ ಬ್ರಹ್ಮ
ಇದಕ್ಕೆ ಶ್ರುತಿ—
ನಾದಬ್ರಹ್ಮಮಿದಂ ದೇವಂ ನಾದಾತೀತಂ ತು ತತ್ವದಂ।
ಶಬ್ದಬ್ರಹ್ಮಮಯಂ ಸರ್ವಂ ನಿಶ್ಯಬ್ದಂ ಬ್ರಹ್ಮವೇದಿನಃ॥
ವಿಶ್ವಬ್ರಹ್ಮ ಪ್ರವರ್ತಂತೇ ಏಕ[ಂ] ಬ್ರಹ್ಮಂ ಚ ತದ್ದ್ವೈವಂ।
ಸರ್ವಂತು ಖಲ್ವಿದಂ ಬ್ರಹ್ಮ ಸರ್ವಾತೀತಂ ಮಹಾಪ್ರಭುಃ॥
ನಮ್ಮ ಸಾರಾಷ್ಟ್ರ ಸೋಮೇಶ್ವರಲಿಂಗವು.

೧೯

ಸಗುಣನಾಗಬಲ್ಲ ನಿರ್ಗುಣನಾಗಬಲ್ಲ
ಸಗುಣ ನಿರ್ಗುಣವೆರಡೊಂದಾಗಬಲ್ಲ.
ಅಣುವಾಗಬಲ್ಲ ಮಹತ್ತಾಗಬಲ್ಲ
ಅಣು ಮಹತ್ತುಗಳೆರಡೊಂದಾಗಬಲ್ಲ.
ಶಿವನಾಗಬಲ್ಲ ಜೀವನಾಗಬಲ್ಲ
ಶಿವಜೀವಂಗಳೆರಡೊಂದಾಗಬಲ್ಲ.
ಸಕಲನಾಗಬಲ್ಲ ನಿಃಕಲನಾಗಬಲ್ಲ
ಸಕಲ ನಿಃಕಲವೆರಡೊಂದಾಗಬಲ್ಲ.
ಶೂನ್ಯನಾಗಬಲ್ಲ ನಿಃಶೂನ್ಯನಾಗಬಲ್ಲ
ಶೂನ್ಯ ನಿಃಶೂನ್ಯವೆರಡೊಂದಾಗಬಲ್ಲ
ಸೌರಾಷ್ಟ್ರ ಸೋಮೇಶ್ವರಲಿಂಗ
ಸರ್ವನಾಗಬಲ್ಲನೊರ್ವನಾಗಬಲ್ಲ
ಸರ್ವನೊರ್ವನೆರಡೊಂದಾಗಬಲ್ಲನಯ್ಯ.

೨೦

ಸಕಲ ನಿಃಕಲವ ಕೂಡಿಕೊಂಡುಯಿಪ್ಪೆಯಾಗಿ
ಸಕಲ ನೀನೇ ನಿಃಕಳ ನೀನೇ ಕಂಡಯ್ಯ.
ವಿಶ್ವತಃ ಚಕ್ಷು ನೀನೇ ದೇವಾ
ವಿಶ್ವತೋಮುಖ ನೀನೇ ದೇವಾ

ವಿಶ್ವತೋ ಬಾಹು ನೀನೇ ದೇವಾ
ವಿಶ್ವತೋಪಾದ ನೀನೇ ದೇವಾ
ಕೂಡಲಸಂಗಮದೇವಾ.

೨೧

ನಿರವಯಃ ನಿರಾಮಯಂ ನಿರಾಕುಳಂ
ನಿರ್ದ್ವಂದ್ವಂ ನಿರ್ಮಳ ನಿಜಸ್ವರೂಪಂ
ನಿರ್ಭಾವ ನಿಃಪುರುಷ ನಿರಂಜನ ನಿರಾಕಾರಂ
ನಿರಾವರಣ ನಿರುಪಮ ನಿರ್ಗುಣ ನಿರಾಧಾರ ನಿರಾಲಂಬ
ಸರ್ವಾಧಾರ ಸದಾಶಿವಂ ಅತ್ಯತಿಷ್ಟದ್ದಶಾಂಗುಲಂ ನಿತ್ಯ ನಿಶ್ಚಿಂತಂ
ನಿರ್ಮಲ ನಿರ್ಮಾಯ ನಿರಾಳಕಂ
ಹರಹರಾ ಶಿವ ಶಿವಾ ಜಯ ಜಯ ಜಯತು
ಶರಣು ಕರುಣಾಕರ ತ್ರಾಹಿಮಾಂ ಭಕ್ತವತ್ಸಲ
ಮತ್ಪ್ರಾಣನಾಥ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ

೨೨

ಜ್ಞಾನಗಮ್ಯಂ ದೃಢಪ್ರಾಜ್ಞಂ ದೇವದೇವಂ ತ್ರಿಲೋಚನಂ
ಮಹಾದೇವಂ ಮಹಾತ್ಮಾನಂ ಮಹಾಜ್ಞಾನ ಪರಾತ್ಪರಂ
ಮಹಾಪಾಪಹರಂ ದೇವಂ ಮದ್ದೇವದೇವ ದೇವಂ
ಹರಹರಾ ಶಿವ ಶಿವಾ ಜಯ ಜಯ ಜಯತು
ಶರಣು ಕರುಣಾಕರ ತ್ರಾಹಿಮಾಂ ಭಕ್ತವತ್ಸಲ
ಮತ್ಪ್ರಾಣನಾಥ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

೨೩

ಕನಕಗಿರಿನಿವಾಸಂ ಕಾಮನಾಶಂ ಕಮಲವೈರಿ ಭೂಷಂ
ವಿನುತನಾಮಧೇಯಂ ಅನುಪಮಾವತಾರಸಾರಂ
ಪರಮವೀರಶೈವ ಭಕ್ತಿಭಾವಂ ಜನಿತಪುಣ್ಯಕಾಯಂ
ಭವರೋಗವೈದ್ಯಂ ಭವಹರಂ
ಹರಹರಾ ಶಿವಶಿವಾ ಜಯ ಜಯ ಜಯತು
ಶರಣು ಕರುಣಾಕರ ತ್ರಾಹಿಮಾಂ ಭಕ್ತಿವತ್ಸಲ
ಮತ್ಪ್ರಾಣನಾಥ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

೨೪

ಕೆಂಜೆಡೆಯ ಭಾಳನೇತ್ರಂ
ರಂಜಿಪ ರವಿಕೋಟಿತೇಜದಿಂದುರವಣಿಪಂ
ಕಂಜಪದಯುಗದೊಳು ಹೊಳೆವುತ್ತಿಹ ನಂಜುಗೊರಳಭವ
ಭವ ಕುಕ್ಷಿಯೊಳೀರೇಳು ಭುವನವುಂ ಮಿಗೆ ತಾಳ್ದ ರಾಕ್ಷಸಹರ ರಕ್ಷಿಸೆನ್ನುವಂ
ಹರಹರಾ ಶಿವಶಿವಾ ಜಯ ಜಯ ಜಯತು
ಶರಣು ಕರುಣಾಕರ ತ್ರಾಹಿಮಾಂ ಭಕ್ತವತ್ಸಲ
ಮತ್ಪ್ರಾಣನಾಥ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

೨೫

ಪಂಚವಕ್ತ್ರಂ ದಶಭುಜಂ ದಶಪಂಚನೇತ್ರಂ
ದ್ವಿಪಾದಂ ತನುವೇಕಂ ಶುದ್ಧಸ್ಫಟಿಕಪ್ರದ್ಯುಕ್ತಂ ಪ್ರಭಾಮಯಮೂರ್ತಿ
ಹರಹರಾ ಶಿವಶಿವಾ ಜಯ ಜಯ ಜಯತು
ಶರಣು ಕರುಣಾಕರ ತ್ರಾಹಿಮಾಂ ಭಕ್ತವತ್ಸಲ
ಮತ್ಪ್ರಾಣನಾಥ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

೨೬

ದನುಜಮನುಜದಿವಿಜಲೋಕಭರಿತಂ
ಧರ್ಮಚರಿತಂ ದುರಿತದೂರಂ ವನಧಿವಡಬ ತೇಜೋಮಯಂ
ಪಂಚವಕ್ತ್ರಂ ಪ್ರಪಂಚರಹಿತಂ ಪರಾತ್ಪರಂ
ಹರಹರಾ ಶಿವ ಶಿವಾ ಜಯ ಜಯ ಜಯತು
ಶರಣು ಕರುಣಾಕರ ತ್ರಾಹಿಮಾಂ ಭಕ್ತವತ್ಸಲ
ಮತ್ಪ್ರಾಣನಾಥ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

೨೭

ನಾದಪ್ರಿಯಂ ನಾದಮಯಂ ನಾದೋರ್ಲಿಂಗಂ ನಗೇಶ್ವರಂ
ಆದಿಮಧ್ಯಾಂತರಹಿತಂ ವೇದೋವೇದವಿದಂ ವರಂ
ಮಂತ್ರಮೂರ್ತಿ ಮಹಾರುದ್ರಂ ಓಂಮಿತಿ ಜ್ಯೋತಿರೂಪಕಂ
ಹರಹರಾ ಶಿವ ಶಿವಾ ಜಯ ಜಯ ಜಯತು

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ....956..............

ಶರಣು ಕರುಣಾಕರ ತ್ರಾಹಿಮಾಂ ಭಕ್ತವತ್ಸಲ
ಮತ್ಪ್ರಾಣನಾಥ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

೨೮

ಅಶ್ವತ ಕಂಬಳರ ಕರ್ಣದಲ್ಲಿ ಧರಿಸಿದೆಯಯ್ಯಾ,
ಪಂಚಮುಖದಿಂ ಪಂಚಮಹಾವೇದಂಗಳನುಸುರಿ ವೇದಸ್ವರೂಪನಾದೆಯಯ್ಯಾ,
ಶಕ್ತಿಯರ ನೆತ್ತಿಯಲ್ಲಿ ಅರ್ಧಾಂಗನಾಲಿಂಗನಾದೆಯಯ್ಯಾ,
ಅಂಧಕಾಸುರನ ಎದೆಯ ಮೆಟ್ಟಿ ನಾಟ್ಯವನಾಡಿದೆಯಯ್ಯಾ,
ಸೌರಾಷ್ಟ್ರ ಸೋಮೇಶ್ವರ ನಿಮ್ಮ ಮಹಿಮೆಯ ಪರಿ ಇನ್ನೆಂತುಟೋ.

೨೯

ಅ[1][ದುರಿತು][1] ಪಾದಘಾತದಿಂ ಧರೆ
ಬಿ[2][ದಿರಿದವು][2] ಮಕುಟತಾಗಿ ತಾರಕೆಗಳು
[3][ಉದುರಿದುವು][3] ಕೈ ತಾಗಿ ಲೋಕಂಗಳೆಲ್ಲಾ.
॥ಶ್ರುತಿ॥
ಮಹೀ ಪಾದಾಘಾತಾದ್ ವ್ರಜತಿ ಸಹಸಾ ಸಂಶಯಪದಂ
ಪದಂ ವಿಷ್ಣೋರ್ ಭ್ರಾಮ್ಯಾದ್ ಭುಜಪರಿಘರುಗ್ಣಗ್ರಹಗಣಂ
ಮುಹುರ್ ದ್ಯೌರ್ ದೌಸ್ಥ್ಯಂ ಯಾತ್ಯ ನಿಭೃತ ಜಟಾತಾಡಿತತಟಾ
ಜಗದ್‌ರಕ್ಷಾಯೈ ತ್ವಂ ನಟಸಿ ನನು ವಾಮೈವ ವಿಭುತಾ॥
ನಮ್ಮ ಕೂಡಲಸಂಗಮದೇವನಿಂದು ನಾಟ್ಯವನಾಡೆ

೩೦

ಧರೆ ರಸಾತಳಕ್ಕಿಳಿವಂದು
ಹರಿಬ್ರಹ್ಮಾದಿಗಳಳಿವಂದು
ಮಹಾದೇವ ಮಹಾದೇವಯೆಂನುತಿರ್ದನು.
ಬ್ರಹ್ಮಾಂಡ ನಾಮಸಂಖ್ಯಾನಾಂ ಬ್ರಹ್ಮವಿಷ್ಣೋರ್ಮಹಾತ್ಮನಃ।
ಉದ್ಭವಂ ಪ್ರಳಯಾಂತಿರ್ಮಹಾದೇವಾದಿತಿ ಶ್ರುತಿಃ॥
ಅಗ್ರದ ಕೊನೆಯಿಂದತ್ತತ್ತ ಏೀ ತತ್ತ್ವಮಸಿ
ನಮ್ಮ ಕೂಡಲಸಂಗಮದೇವ.

೧–೧ ಅದ್ರಿ. ೨–೨ ಬಿದ್ರಿ. ೩–೩ ದ್ರಿದಾ,

೩೧

ಅಸುರ ಸುರರ ಶಿರಮಾಲೆಯು ಕೊರಳಲ್ಲಿಕ್ಕಿ ಶಿವಕಳೆ ಎದ್ದಾಡುವಲ್ಲಿ
ಅವಕಳೆಯಾಗದೆ ಅಸುರದೇವಾದಿಗಳ[ಲ್ಲಿ]ಲೆಯಯ್ಯಾ?
ನೀ ಮಾಡಿದ ಧರಣಿ ರಸಾತಳಕ್ಕಿಳಿದು ಕೂರ್ಮ ಕುಸಿದುದು.
ದಿಗುದಂತಿಗಳು ಘೀಳಿಟ್ಟು
ಫಣಿಯ ಹೆಡೆ ಮುರಿದು
ನಿನ್ನ ಪಾದದ ಗುಡಿಗಾಟದಿಂದ ಕೆಂಧೂಳನೆಗೆದು
ನರಲೋಕ ಸುರಲೋಕ ಬ್ರಹ್ಮಲೋಕ
ವಿಷ್ಣುಲೋಕ ಇಂದ್ರಲೋಕ ಸೂರ್ಯಲೋಕ
ಚಂದ್ರಲೋಕ ತಾರಾಲೋಕ ಅಸುರಲೋಕ
ಬೂದಿಯಲ್ಲಿ ಮುಸುಕಿದವಯ್ಯಾ.
ಪ್ರಭುವೆದ್ದು ಹಗರಣವಾಡುತ್ತಿರಲು
ಈರೇಳುಭುವನದೊಳಗುಳ್ಳ ಆತ್ಮಾದಿಗಳೆಲ್ಲ ದೆಸೆಗೆಡಲು
ಶಶಿಧರ ನಾಟ್ಯಕ್ಕೆ ನಿಂದಲ್ಲಿ
ಇನ್ನಾರಯ್ಯ ಸಂತೈಸುವರು ಕೂಡಲಚೆನ್ನಸಂಗಯ್ಯನ.

೩೨

ನೊಸಲಕಣ್ಣ ಬಿಸಿಗೆಂಪಿಗೆ
ಶಶಿಯಮೃತ ಒಸರಲು ಸುರಿದಹವೆ ಕಪಾಲಮಣಿಮಾಲೆ ಮೇಲೆ.
ಉಲಿದಹವೆ ನಲಿದಹವೆ
ಮಲದಹವೆ ಕೆಲದಹವೆ
ಎಲುವೆದ್ದಾಡುವದನು ನೋಡಿ ನಗುತ್ತಿಹೆ
ಸೊಡ್ಡಳ ನಿಮ್ಮ ಮೂರ್ತಿಯಿಂದ.

೩೩

ಹರನ ಕೊರಳಲಿಪ್ಪ ಕರೋಟಿಮಾಲೆಯು
ಶಿರದ ಲಿಖಿತವ ಕಂಡು ಮರುಳು ತಂಡಗಳು ಓದಿ ನೋಡಿ
'ಇವನಜ ಇವ ಹರಿ, ಇವ ಸುರಪತಿ
ಇವ ಧರಣೇಂದ್ರ ಇವನಂತಕನೆಂದು'
ಹರುಷದಿಂದ ಸರಸವಾಡಿತ್ತ ಕಂಡು

ಹರ ಮುಕುಳಿತನಾಗಿ ನಸುನಕ್ಕನು
ನಮ್ಮ ಕೂಡಲಸಂಗಮದೇವ.

೩೪

ಶೈವವಾದ ತತ್ತ್ವವಾದ ಮಾಯಾವಾದ
ಇಂತೀ ವಾದಂಗಳಲ್ಲಿ ಹೋರುವಾಗ ವೇದ ಹೇಳುತ್ತದೆ:
ಓಂ ಯೆಂದಲ್ಲಿ ಎರಡಳಿದು ಒಂದೆ ಉಳಿಯಿತ್ತು.
ಕೆಲ ವಸ್ತು ದೇವಂಗೆ ಸರಿಯೆಂದಡೆ
ಅದು ನಿಮ್ಮ ಒಲುಮೆಯ ಒಲವರವೈಸಲ್ಲದೆ ಬಲುಹಿನ ಮಾತು ಬೇಡ.
ಕಾಲಾಂತಕನ ಕರದಲ್ಲಿ ಕಪಾಲವದೆ,
ಪಾದಯುಗಳದಲ್ಲಿ ಅಕ್ಷಿಯುದೆ,
ಮಿಕ್ಕಾದ ಅರಿಕುಲದೈವಂಗಳ ಶಿರಮಾಲೆಯಲ್ಲಿ ಸಿಕ್ಕಿಯುದೆ,
ಮತ್ತಿನ್ನು ಒಱಲಲೇಕೆ? ಸದಾಶಿವಮೂರ್ತಿಲಿಂಗವಲ್ಲದಿಲ್ಲಾ ಎಂದೆ.

೩೫

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣುವೇ
ಶಿವಸ್ಯ ಹೃದಯಂ ವಿಷ್ಣು ವಿಷ್ಣೋಶ್ಚ ಹೃದಯಂ ಶಿವಃ
ಯಥಾ ಶಿವಮಯಂ ವಿಷ್ಣು ಏವಂ ವಿಷ್ಣುಮಯಂ ಶಿವಃ
–ಇಂತೆಂಬ ಪಾತಕರು ನೀವು ಕೇಳಿ ಭೋ!
'ಓಂ ಭೂಃ ಓಂ ಭುವಃ ಓಂ ಸುವಃ ಓಂ ಜನಃ
ಓಂ ಮಹಃ ಓಂ ತಪಃ ಓಂ ಸತ್ಯಂ
ಓಂ ತತ್ಸವಿತುರ್ವರೇಣ್ಯಂ ಭರ್ಗೋದೇವಸ್ಯ ಧೀಮಹೀ
ಧಿಯೋ ಯೋನಃ ಪ್ರಚೋದಯೇತ್'
–ಇಂತೆಂಬ ಶ್ರುತಿಯೊಳಗೆ ಆ ಶಬ್ದವುಳ್ಳರೆ ತೋಱರೆ
ಹಿಂದನಱಿಯರು ಮುಂದೆ ವಿಚಾರಿಸರು
ಇಂತಪ್ಪ ಅಂತ್ಯಜರನೇನೆಂಬೆ ಕೂಡಲಚೆನ್ನಸಂಗಮದೇವಾ.

೩೬

ಹರಿ–ಹರನೊಂದೆ ಎಂದರೆ ಸುರಿಯುವೆ ಬಾಯಲ್ಲಿ ಬಾಲಹುಳುಗಳು?
ಹರಿಗೆ ಹತ್ತು ಪ್ರಳಯ, ಬ್ರಹ್ಮಂಗನಂತ ಪ್ರಳಯ,

ಹರಂಗೆ ಪ್ರಳಯುವುಂಟೆಂಬುದ ಬಲ್ಲರೆ ನೀವು ಹೇಳಿರೆ?
ಪ್ರಳಯು ಪ್ರಳಯು ಅಂದಂದಿಂಗೆ ಹಳೆಯು ಕೂಡಲಸಂಗಮದೇವ.

೩೭

ವದನದ್ವಾರಕ್ಕೆ ಗುದದ್ವಾರ ಸರಿಯೆಂದು
ಗುದದ್ವಾರದಲ್ಲಿ ಬಂದುದ ವದನದ್ವಾರದಲ್ಲಿ ಕೊಟ್ಟವಂಗೆ
ಹೋ ಹೋ ಹರಂಗೆ ಹರಿಯು ಸರಿಯೆನಬಹುದು.
ಯಥಾಸ್ಯ ಪಾನಯೋಸ್ಸಾಮ್ಯಂ ಛಿದ್ರತ್ವೇಪಿ ನವಿದ್ಯತೇ।
ತಥಾ ವಿಷ್ಣು ವಿಬುದ್ಧಸ್ತು ರುದ್ರಸ್ಸಾಮ್ಯಂ ನವಿದ್ಯತೇ॥
–ಇಂತೆಂದುದಾಗಿ
ಇದು ಕಾರಣ ಹರಿವಿರಿಂಚ್ಯಾದಿದೇವತೆಗಳನು
ಶಿವಂಗೆ ಸರಿಯೆಂದು ಗಳಹುವ ನರಕಿಗಳ
ಬಾಯಲ್ಲಿ ಹುಳುಸುರಿಯದಿಹವೇ
ಬಸವಪ್ರಿಯು ಕೂಡಲಚೆನ್ನಸಂಗಮದೇವಾ.

೩೮

ಶಿವಂಗೆ ಬ್ರಹ್ಮ ವಿಷ್ಣುಗಳ ಸರಿಮಿಗಿಲೆನಲಾಗಿ
ಸುರಿಯುವೆ ಬಾಯಲ್ಲಿ ಬಾಲ ಬಾಲಹುಳುಗಳು?
ಧರೆ ಚಂದ್ರ ರವಿಯುಳ್ಳನ್ನಕ್ಕ
ಇರದೆ ಉರಿವುತ್ತಿಪ್ಪರವರು ನರಕದ ಕಿಚ್ಚಿನಲ್ಲಿ.
ರುದ್ರಸ್ಯ ಬ್ರಹ್ಮ ವಿಷ್ಣುಭ್ಯಾಂ ಸಾಮ್ಯಂ ವಾಚಂತಿಯೇ ಜನಃ।
ತೇಷಾಂ ಮವಶ್ಯ ಸಾಂಕರ್ಯಂ ಮಸ್ತಿತಿರ್ಮಮನಿಶ್ಚಯಃ॥
ರುದ್ರಸ್ಯ ಬ್ರಹ್ಮ ವಿಷ್ಣುಭ್ಯಾಂ ನಾಧಿಕಂ ಪ್ರವದಂತಿಯೋ।
ಹನ್ಯಂತೇನ ವಿಚಾರೇಣ ಹಂತುರ್ದೋಷೋ ನಕಶ್ಚನಃ॥
ರುದ್ರಸ್ಯ ಬ್ರಹ್ಮ ವಿಷ್ಣುಭ್ಯಾಂ ಮಾಧಿಕ್ಯಂ ಪ್ರವದಂತಿಯೇ।
ತೇಷಾಂ ವಶಂಸ್ಯ ವೈಕಲ್ಯಮಸ್ಥಿತಿರ್ಮಮ ನಿಶ್ಚಯಃ॥
–ಇಂತೆಂದುದಾಗಿ
ಇದು ಕಾರಣ ಹರಿಬ್ರಹ್ಮಾದಿಸುರರೆಲ್ಲರು
ನಿಮ್ಮ ಡಿಂಗರಿಗರೆಂದಱಿದರಿಗೆ ಪರಮಪದವಯ್ಯ
ಬಸವಪ್ರಿಯಃ ಕೂಡಲಚೆನ್ನಸಂಗಮದೇವಾ.

೩೯

ಮಿಂಚುಬುಳು ಒಮ್ಮೆ ಪ್ರಚಂಡ ತೇಜೋಮಯ ಸೂರ್ಯಂಗೆಸರಿಯಾದಂದು
ಹರಿ ಹರಂಗೆ ಸರಿಯಹನು.
ಕರಿಬೇವಿನ ಕೊರಡು ಬಾವನ್ನ ಶ್ರೀಗಂಧಕ್ಕೆ ಸರಿಯಾದಂದು
ವಿರಿಂಚಿ ಗಿರೀಶಂಗೆ ಸರಿಯಹನು.
ಅಜ್ಞಾನ ಸುಜ್ಞಾನಕ್ಕೆ ಸರಿಯಾದಂದು
ವಜ್ರಪಾಣಿ ಮೊದಲಾದ ದೇವದಾನವ ಮಾನವರು ಶೂಲಪಾಣಿಗೆ ಸರಿಯಹರು.
ಏನ ಹೇಳುವೆ ಅಜ್ಞಾನ ಜನರ ಅಜ್ಞಾನ ಪ್ರಬಲ ಚೇಷ್ಟೆಯನು?
'ಖದ್ಯೋತೋ ಯದಿ ಚಂಡಭಾನು ಸದೃಶಸ್ತುಲ್ಯೋ ಹರಿಃ ಶಂಭುನಾ
ಕಿಂಕಾಷ್ಠ ಹರಿಚಂದನೇನ ಸದೃಶಂ ತುಲ್ಯೋಹವಿರೀಶೇನ ಚ
ಅಜ್ಞಾನಂ ಯದಿ ವೇದನೇನ ಸದೃಶಂ ದೇವೇನ ತುಲ್ಯೋಜನಾ
ಕಿಂ ವಕ್ಷೇ ಸುರಪುಂಗವಾ ಅಹಮಹೋ ಮೋಹಸ್ಯ ದುಶ್ಚೇಷ್ಟಿತಂ?
–ಇಂತೆಂದು ಬ್ರಹ್ಮಗೀತೆಯಲ್ಲಿ ಬ್ರಹ್ಮನುಡಿಯಲು
ನಿಮಗೆ ಸರಿಯೆಂಬವರಿಗೆ ನರಕವೇ ಗತಿಯಯ್ಯಾ
ಬಸವಪ್ರಿಯ ಕೂಡಲಚೆನ್ನಸಂಗಮದೇವಾ.

೪೦

ಅಗ್ಗದ ಹರಿಬ್ರಹ್ಮರ
ಮಱಿದೊಮ್ಮೆ ಹರಂಗೆ ಸಮವೆಂದರೆ
ಅವನು ಚಾಂಡಾಲನು ಅವನ ಮುಖವ ನೋಡಲಾಗದು
–ಎಂದುದು ಸೌರಪುರಾಣದಲ್ಲಿ.
ಅದೆಂತೆಂದಡೆ
ಯೋ ಮಹಾದೇವ ಮನ್ಯೇನ ಹಿ ನ ದೇವೇನ ದುರ್ಮತಿ
ಸಕೃತ್ಸಾಧಾರಣಂ ಬ್ರೂಯಾತ್ ಸೋಂತ್ಯಜೋನಾಂತ್ಯ ಜೋಂತ್ಯಜಃ
–ಇಂತೆಂದುದಾಗಿ
ನಿಮಗೆ ಕಿಱುಕುಳದೈವಂಗಳ ಸಮವೆಂದು
ಬೊಗಳುವನ ಬಾಯ ಪಾಕುಳ ತಪ್ಪದು
ಬಸವಪ್ರಿಯ ಕೂಡಲಚೆನ್ನಸಂಗಮದೇವಾ.

೪೧

ಮೃಡನನೊಂದು ದೈವಕ್ಕೆ ಪಡಿಗಟ್ಟಿ ನುಡಿವನ ಬಾಯಲ್ಲಿ
ಬಿಡದೆ ಬೆಟ್ಟುವೆನಯ್ಯ ದಾರುಗೆಜ್ಜೆಯ ಗೂಟಗಳನು.
ಪೊಡವಿ ಭೂಮಂಡಲದೊಳಗೆ
ಕಲಿದೇವಂಗೆ ಹುಲುದೈವವ ಸರಿಯೆಂದು ನುಡಿವನ ಬಾಯ
ಎಡದ ಕಾಲಕೆರಹಿಂದ ಬಡಿಯೆಂದ ಮಡಿವಾಳ ಮಾಚಯ್ಯ.

೪೨

ಮುಱಿಸಬೇಕು ಹೊಲೆಯರ ಕೈಯಿಂದವನ ಮನೆಯ,
ಕೆಱಿಸಬೇಕು ಮಂಡೆಯ ಏಳು ಬಟ್ಟೆಯಾಗಿ,
ಕುಳ್ಳಿರಿಸಬೇಕು ಕತ್ತೆಯ ನಡು ಬೆನ್ನ ಮೇಲೆ,
೧[ಹುಟ್ಟಿಗೆಯನುಡಿಸಬೇಕು]೧, ಕಡವಸಿಗನ ಮಾಡಿ
ಹಿಡಿಸಬೇಕು ಹಳೆಯ [ಮೊಱಿನ ಸತ್ತಿಗೆಯನವರಿಗೆ],
ಇಟ್ಟೊರಸಬೇಕು ನೊಸಲಕ್ಕರವ,
೧[ನಾಲಿಗೆಯ]೧ ಸರಸರನೆ ಸೀಳಬೇಕು.
ಎನ್ನೊಡೆಯ ಮಹಾಮಹಿಮ ಸೊಡ್ಡಳಂಗೆ
ಅನ್ಯದೈವವ ಸರಿಯೆಂಬ ಕುನ್ನಿಯ.

೪೩

ಎಲ್ಲಾ ದೈವಕ್ಕೆ ಶಿವನೊಡೆಯನೆಂಬುದನಱಿಯದೆ
ವಿಷ್ಣು ದೈವವೆಂಬ ಭೇದವಾದಿ ನೀನು ಕೇಳಾ:
ಎಲ್ಲಾ ದೈವಕ್ಕೆ ಶಿವನೇ ಘನವೆಂದಱಿಯದೆ
ವಿಷ್ಣುವೆ ಘನವೆಂಬ ಮಾಯವಾದಿ ನೀನು ಕೇಳಾ:
ಅದೆಂತೆಂದೊಡೆ
ಓಂ ಗಾಯತ್ರೀ ಛಂದಃ ವಿಶ್ವಾಮಿತ್ರಋಷಿ ಸವಿತಾ ದೇವತಾ
ಅಗ್ನಿ ಮುಖಃ ಬ್ರಹ್ಮ ಶಿರಃ ವಿಷ್ಣು ಹೃದಯ ರುದ್ರ ಲಲಾಟವೆಂದು
ಹೀಂಗೆ ಶ್ರುತಿ ಹೇಳುತ್ತಿದೆ.
ಮತ್ತೆ ಗಾಯತ್ರಿಕಲ್ಪದಲ್ಲಿ

೧–೧. ಗಣಭಾಷಿತ ರತ್ನಮಾಲೆ, (ಸಂ) ಪ್ರಭುಸ್ವಾಮಿಗಳು, ಧಾರವಾಡ, ೧೯೫೮, ಪು. ೩೭೬.

ಓಂ ಭೂಃ ಓಂ ಭುವಃ ಓಂ ಸುವಃ ಓಂ ಮಹಃ ಓಂ ಜನಃ ಓಂ ತಪಃ ಓಂ ಸತ್ಯಮ್
ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋನಃ ಪ್ರಚೋದಯಾತ್
ಇಂತೆಂಬ ಗಾಯತ್ರಿಯನೋದಿಯು ಕೇಳಿಯು
ಶಿವಂಗೆ ಸಮವಾದ ದೈವವುಂಟೆಂಬ
ಅಜ್ಞಾನ ಹೊಲೆಯರ ಕೂಡೆ ತರ್ಕಿಸಲುಂಟೆ?
ಸರ್ವದೇವ ಶಿಖಾಮಣಿಯಯ್ಯ ನಮ್ಮ ದೇವರಾಯ ಸೊಡ್ಡಳನು.

೪೪

ಕೇಶವನಲ್ಲದೆ ಅತಃ ಪರದೈವವಿಲ್ಲೆಂದು
ವೇದವ್ಯಾಸಮುನಿ ಭಂಗವಾದುದನಱಿಯರೆ?
'ಅಹಂ ಸರ್ವಜಗತ್ಕರ್ತಾ ಮಮ ಕರ್ತಾ ಮಹೇಶ್ವರಃ
–ಎಂದು ವಿಷ್ಣು ಹೇಳಿದ ವಚನವ ಮಱೆದಿರಲ್ಲಾ
ಕೂಡಲ ಚೆನ್ನಸಂಗಮದೇವನು
ದಕ್ಷನ ಯಜ್ಞವ ಕೆಡಿಸಿದುದ ಮಱೆದಿರಲ್ಲಾ.

೪೫

ಹರನ ಡಿಂಗರಿಗ ದಧೀಚಿಯ ಶಾಪದಿಂದ
ಕರ ಬೇವಂತೆ ಬೆಂದರಾಗಳೆ ಹುರುಡಿಸುವವರು.
ಇದು ಕಾರಣ, ದಿಟ ದಿಟ ಗರುಡ ಧ್ವಜ ದೇವನೆಂದೆಂಬೆ
ಗರುಡವಾಹನನಲ್ಲದೆ ಬೇರೆರಡನೆಯ ದೇವರಿಲ್ಲೆಂದಡೆ
ಹಱಿದು ಕಳೆವರು ತೋಳೆರಡ ನಂದಿ ಮಹಾಕಾಳರು.
ಬರಡು ಮನಸಿನ ಹೊಱಸುಗಳು
ನಿಃಕರಡರಱಿವರೆ ಶಿವನ ನಿಲವನು?
ಹರನ ಹೋಲುವ ದೇವರೊಳರೆ ನಮ್ಮ
ನಮ್ಮ ಪಂಚವದನ ಸೊಡ್ಡಳಂಗೆ.

೪೬

ಶಿವನಲ್ಲದೆ ಮತ್ತೆ ದೈವವಿಲ್ಲೆಂಬುದನು
ದಕ್ಷನ ಜನ್ನವು ತಾನೆ ಹೇಳದೆ?
ಉಳ್ಳಡೆ ಕ್ರತುವ ಕಾಯಲಾಗದೆ?
ಉಳ್ಳಡೆ ತಮ್ಮ ಶಿರಂಗಳ ಹೋಗಾಡಲೇಕೆ?

ಈ ಕ್ರತುಗಳಿಗೆ ಶಿವನೆ ಒಡೆಯನೆಂದುದು ಋಗ್ವೇದ-
ಓಂ ಅವೋ ರಾಜಾನ ಮಧ್ವರಸ್ಯ ರುದ್ರಂ ಹೋತಾರಂ ಸತ್ಯಯಜಂ
ರೋದಸ್ಯೋ ಅಗ್ನಿಂ ಪುರಾತನ ಇತ್ನೋರ ಚಿದಾದ್ಧಿರಣ್ಯ ರೂಪಮವ ಸತ್ನಣಧ್ವಂ
-ಎಂಬ ಶ್ರುತಿ ಇದೆ.
ಇದು ಕಾರಣ ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲದಿಲ್ಲ.

೪೭

'ಸ್ವಾಮಿ ನೀನು ಶಾಶ್ವತ ನೀನು'
ಎತ್ತಿದೆ ಬಿರುದ ಜಗವೆಲ್ಲಱಿಯಲು.
'ಮಹಾದೇವ ಮಹಾದೇವ ಮಹಾದೇವ'
ಇಲ್ಲಿಂದ ಮೇಲೆ ಶಬ್ದವಿಲ್ಲ.
ಪಶುಪತಿ ಜಗಕ್ಕೆ ಏಕೋದೇವ.
ಸ್ವರ್ಗ ಮರ್ತ್ಯ ಪಾತಾಳದೊಳಗೆ
ಒಬ್ಬನೇ ದೇವ ಕೂಡಲ ಸಂಗಮದೇವ.

೪೮

ಶ್ರುತಿಗಗಮ್ಯ ದ್ವಾದಶಾಂತ್ಯನಪ್ರತಿಮ ಮಹಿಮಂಗೆ ಪ್ರತಿಯುಂಟೆ?
'ಸೋಮಃ ಪವತೇ' ಎಂಬ ಶ್ರುತಿಯುನಱಿತು
ಶಿವ 'ನೇಕೋ ದೇವ ರುದ್ರನದ್ವಿತೀಯ' ನೆಂದು
ನಂಬುವುದು ಕಾಣಿರಣ್ಣಾ.
'ಕೂಡಲ ಸಂಗಮದೇವನಲ್ಲದೆಯಿಲ್ಲ'ವೆಂದು ಎತ್ತಿದೆ
ಬಿರುದ ಜಗವೆಲ್ಲಱಿಯಲು.

೪೯

'ವೇದ ಸ್ವಯಂಭು' ವೆಂಬ ವಾದಿ ನೀ ಕೇಳೆಲವೋ:
'ಏಕೋದೇವ ರುದ್ರನದ್ವಿತೀಯ'ನೆಂದು
ನಂಬುವುದು ಕಾಣಿರಣ್ಣಾ.
'ಓಂ ದ್ಯಾವಾ ಭೂಮೀ ಜನಯಂ ದೇವ ಏಕೋ ದೇವ
ಏಕೋ ಹಿ ರುದ್ರೋ ನದ್ವಿತೀಯಾಯ [ತಸ್ಥುಃ]'
ಎಂದು ನಂಬುವುದು ಕಾಣಿರಣ್ಣಾ.

'ಚಕಿತಮಭಿದತ್ತೇ' ಎಂದು ಶ್ರುತಿ ಸಾಱುತ್ತೈದಾವೆ.
ಜಗದಕರ್ತ ಕೂಡಲ ಸಂಗಮದೇವನೊಬ್ಬನೇ ಕಾಣಿರಣ್ಣಾ.

೫೦

ಜಲ ಕೂರ್ಮ ನಾಗ ಮೇದಿನಿ ಸಪ್ತಸಾಗರ
ಅಜಾಂಡಭಾಂಡ ಹರಿವಿರಿಂಚಿಗಳು
ನಿಮ್ಮ ಉದರದ ಕೊನೆಯ ಪ್ರಾಣಿಗಳಯ್ಯಾ.
ಕೂಡಲಸಂಗನ ಮಹಾಮನೆಯಲ್ಲಿ
ಅಸ್ಥಿಗ್ರಾಹಕನೆಂಬ ಗಣೇಶ್ವರನ ಇಚ್ಛಾಮಾತ್ರದಿಂದ ಜಗಜುಗವಯ್ಯಾ.

೫೧

ರುದ್ರ ಮುಖದಲ್ಲಿ, ವಿಷ್ಣು ಭುಜದಲ್ಲಿ, ಜಂಘೆಯಲ್ಲಿ ಅಜ ಜನನವು.
ಇಂದ್ರ ಪಾದದಲ್ಲಿ, ಚಂದ್ರ ಮನದಲ್ಲಿ, ಚಕ್ಷುವಿನಲ್ಲಿ ಸೂರ್ಯ ಜನನವು.
ಮುಖದಲ್ಲಿ ಅಗ್ನಿಯೂ, ಪ್ರಾಣದಲ್ಲಿ ವಾಯು,
ನಾಭಿಯಲ್ಲಿ ಅಂತರಿಕ್ಷವು,
ಶಿರದಲುದಯವು ತೆತ್ತೀಸಕೋಟಿ ದೇವತೆಗಳು.
ಪಾದತಳದಲ್ಲಿ ಭೂಮೀಜನನವು,
ಶ್ರೋತ್ರದಲ್ಲಿ ದಶದಿಕ್ಕುವೂ.
ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ ಅಕ್ಷಯನಗಣಿತನು.
ಸಾಸಿರತಲೆ ಸಾಸಿರಕಣ್ಣು ಸಾಸಿರಕೈ ಸಾಸಿರಪಾದ
ಸಾಸಿರ ಸನ್ನಿಹಿತ ಕೂಡಲಸಂಗಯ್ಯ.

೫೨

ವಿಶ್ವಾಧಿಕೋ ರುದ್ರನ ಹೊಗಳುವ ಶ್ರುತಿಗಳು
'ವಿಶ್ವರೂಪಾಯವೈ ನಮಃ'
ಪರಮರೂಪನೇ ನಮೋ ಪರತತ್ತ್ವನೇ ನಮೋ
ಆದಿಯಾರೂಢ ಭಯಂಕರನೇ ನಮೋ
ಹರಿಯನು ಹರಿಸಿದನೆಂದು ಶ್ರುತಿ ಸಾರುತ್ತಿರಲು
ಸಂಹಾರಕಾರಣನೇ ನಮೋ
ನಮ್ಮ ಕೂಡಲಸಂಗ ಮಹಾತ್ ಮಹಾದ್ಭೋ ನಮಃ

೫೩

ಅಯ್ಯುದ್ದೇ ಬ್ರಹ್ಮನ ಕಪಾಲ ಕರದಲ್ಲಿ?
ಅಯ್ಯುದ್ದೇ ವಿಷ್ಣುವಿನ ನಯನ ಪಾದದಲ್ಲಿ?
ಅಯ್ಯುದ್ದೇ ಕಾಮನ ಸುಟ್ಟ ಭಸ್ಮ ಮೈಯ್ಯ ಮೇಲೆ?
ಮುಖ ಮೂದಲೆ ಏಕಯ್ಯಾ ಕೂಡಲಸಂಗಮದೇವಾ.

೫೪

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ.
ಒಬ್ಬನೇ ಕಾಣಿರೋ ಇಬ್ಬರೆಂಬುದು ಹುಸಿನೋಡಾ,
ಕೂಡಲಸಂಗಮದೇವನಲ್ಲದಿಲ್ಲೆಂದಿತ್ತು ವೇದ.

೫೫

ಹುಟ್ಟಿಸುವಾತ ಬ್ರಹ್ಮನೆಂಬರು
ರಕ್ಷಿಸುವಾತ ವಿಷ್ಣುವೆಂಬರು ನೋಡಾ.
ಬ್ರಹ್ಮ ತನ್ನ ಶಿರವನೇಕೆ ಹುಟ್ಟಿಸಲಾರ?
ವಿಷ್ಣು ತನ್ನ ಮಗನನೇಕೆ ರಕ್ಷಿಸಲಾರ?
ದುಷ್ಟನಿಗ್ರಹ ಶಿಷ್ಟಪರಿಪಾಲಕ ನಮ್ಮ ಕೂಡಲ ಸಂಗಮದೇವ.

೫೬

ಯುಗ ಜುಗ ಪ್ರಳಯವಹಂದೂ ಕಾಣೆನಿಂದೂ ಕಾಣೆ
ದಿಗಿಲು ಭುಗಿಲೆಂದುರಿವಂದೂ ಕಾಣೆನಿಂದೂಕಾಣೆ
ಕೂಡಲಸಂಗಮದೇವನಲ್ಲದೆ ತಲೆದೋಱುವ
ದೈವಂಗಳನಂದೂ ಕಾಣೆನಿಂದೂ ಕಾಣೆ.

೫೭

ನಾರಾಯಣನೆಂಬುವನ ಕಾಣೆ, ಗೀರಾಯಣನೆಂಬುವನ ಕಾಣೆ,
ಬೊಮ್ಮನೆಂಬುವನ ಕಾಣೆ, ಬೊಮ್ಮುಗನೆಂಬುವನ ಕಾಣೆ,
ವಿಷವಟ್ಟಿ ಸುಡುವಲ್ಲಿ, ವೀರಭದ್ರ ಬಡಿವಲ್ಲಿ
ಕೂಡಲಸಂಗಯ್ಯಂಗೆ ಶರಣೆಂದು ಮೊಱೆಯಿಟ್ಟರೆಲ್ಲರು.

೫೮

ಕಲಿವೀರ ಕಡಿವಲ್ಲಿ ಬಲುವಿಷವು ಸುಡುವಲ್ಲಿ
ನೆಲೆಗೆಟ್ಟು ಮೊಱೆಯೊಯೆಂಬಲ್ಲಿ
ನಿಮ್ಮ ತಲೆಗಾದು ರಕ್ಷಿಸಿದ ಸುಲಭನನಱಿಯಿರೆ ಹೊಲೆಯರಿರಾ.
ಸಲೆ ನಂಬಿ ಬದುಕಿರೊ ರಾಮನಾಥನಾ

೫೯

ಅಮೃತವ ಕಡೆವಲ್ಲಿ ವಿಷವಟ್ಟಿ ಸುಡುವಲ್ಲಿ
ದೇವರೆಂಬವರೆತ್ತ ಹೋದರೇನೀಂ ಭೋ?
ಅಂದೊಮ್ಮೆ ಓಡಿಹೋಗಿ ಆ ಶಿವನ ಮಱೆ ಹೊಗುವಂದು
ದೇವರೆಂಬವರೆತ್ತ ಹೋದರೇನೀಂ ಭೋ?
ಕೂಡಲಸಂಗಯ್ಯ ದೇವರಿಗೆ ದೇವನು
ನೀವೆಲ್ಲ ಆಳೆಂಬುದನಱಿಯಿರಿಂ ಭೋ.

೬೦

ಮಱೆಯಲಾಗದು ಹರಿಯ
ಮಱೆಯಲಾಗದು ಬ್ರಹ್ಮನ
ಮಱೆಯಲಾಗದು ತೆತ್ತೀಸಕೋಟಿ ದೇವರ್ಕಳ.
ನಮ್ಮ ಕೂಡಲಸಂಗಮದೇವನ ಮಱೆಯಲಹುದು.

೬೧

ರಿಣತಪ್ಪಿದ ಹೆಂಡಿರಲ್ಲಿ ಗುಣ ತಪ್ಪಿದ ನಂಟನಲ್ಲಿ
ಜೀವವಿಲ್ಲದ ದೇಹದಲ್ಲಿ ಫಲವೇನೋ?
ಆಳ್ದನೊಲ್ಲದಾಳಿನಲ್ಲಿ ಸಿರಿ ತೊಲಗಿದ ಅರಸಿನಲ್ಲಿ
ವರವಿಲ್ಲದ ದೈವದಲ್ಲಿ ಫಲವೇನೋ?
ಕಳಿದ ಹೂವಿನಲ್ಲಿ ಕಂಪನುಳಿದ ಸೂಳೆಯಲ್ಲಿ ಹೆಂಪ
ಕೊಳಚೆಯ ನೀರಿನಲ್ಲಿ ಗುಂಪನಱಸುವಿರಿ ಮರುಳೆ!
ವರಗುರು ವಿಶ್ವಕ್ಕೆಲ್ಲ ಗಿರಿಜಾಮನೋವಲ್ಲಭ
ಪರಮಕಾರಣಿಕ ನಮ್ಮ ಕೂಡಲಸಂಗಮದೇವ.

೬೨

ಲಿಂಗಶಿವಾಲಯದ ಮುಂದೆ ಸಿಂಹ ಶೂದ್ರಿಕನಲ್ಲದಿಲ್ಲ.
ನಂದಿಕೇಶ್ವರ ಭೃಂಗಿನಾಟ್ಯ ನಮ್ಮ ಲಿಂಗನ ಮುಂದೆ.
ಇದಕ್ಕೆ ದಿಷ್ಟದೀವಿಗೆ ನಮ್ಮ ಲಿಂಗನ ಮುಂದೆ.
ಅನ್ಯದೈವವೆಂಬುದ ತೋಱಿಯೂ ಕಾಣಬಾರದು
ನೊಸಲಕಣ್ಣಭವನೊಬ್ಬನೆ ಕೂಡಲಸಂಗಮದೇವ.

೬೩

ಉಪ್ಪರಗುಡಿ ನಂದಿವಾಹನ ಸದ್ಯೋಜಾತನ
ಬಾಗಿಲ ಮುಂದೆ ಸಾಱುತ್ತೈದಾವೆ ನೋಡಾ.
ಶ್ರುತಿಗಳು ನಾಲ್ಕುವೇದವು ಹುಸಿಯದೆ
'ಭರ್ಗೋ ದೇವಸ್ಯ ಧೀಮಹಿ' ಎಂದುದಾಗಿ
ಕೂಡಲಸಂಗನಲ್ಲದಿಲ್ಲೆಂದುದು ವೇದ.

೬೪

ಶಿವಲೋಕಕ್ಕೆ ಸರಿ ಬೇಱೆ ಲೋಕವಿಲ್ಲ,
ಶಿವಮಂತ್ರಕ್ಕೆ ಸರಿ ಬೇಱೆ ಮಂತ್ರವಿಲ್ಲ.
ಜಗಕ್ಕೆ ಇಕ್ಕಿದೆ ಮುಂಡಿಗೆಯ ಎತ್ತಿಕೊಳ್ಳಿ
ಕೂಡಲಸಂಗಮನೊಬ್ಬನೆ ದೇವನೆಂದು.

೬೫

'ಈಶ್ವರಸದ್ಭಾವೇ ಕಿಂ ಪ್ರಮಾಣಂ'
ಎಂಬ ಮೀಮಾಂಸಕನ ಮೂಗಿನ ಕೊನೆಯ
ವಿಶ್ವತಶ್ಚಕ್ಷುರುತ ವಿಶ್ವತೋ ಮುಖೋ ವಿಶ್ವತೋ ಬಾಹುರುತ
ವಿಶ್ವತಸ್ಪಾತ್ ಸ ಬಾಹುಭ್ಯಾಂ ಧಮತಿ ಸಂಪತತ್ರೈರ್
ದ್ಯಾವಾಭೂಮೀ ಜನಯುನ್ ದೇವ ಏಕಃ ಏವ
ಎಂಬ ಸುರಗಿಯಲಿಱಿದು
ವೈಶೇಷಿಕವೆಂಬ ಇಟ್ಟಿಗೆಯಲ್ಲಿ ಒರಸಿ
ಕೂಡಲಸಂಗಯ್ಯನೆಂಬ ಕನ್ನಡಿಯ ತೋಱುವೆನು.

೬೬

ಅಮೃತಮತಿ ಸೋಮಶಂಭುವಿಂಗೆ ಹುಟ್ಟಿದಾತ ಇಂದ್ರ.
ಸತ್ಯಋಷಿ ಜೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ,
ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು,
ನಾಭಿರಾಜ ಮರುತಾದೇವಿಗೆ ಹುಟ್ಟಿದಾತನರುಹ,
ಇವರೆಲ್ಲರೂ ಯೋನಿಜರೆಂಬುದ ತ್ರೈಜಗಬಲ್ಲುದು.
ಉತ್ಪತ್ತಿಸ್ಥಿತಿಪ್ರಳಯಕ್ಕೆ ಹೊಱಗಾದ
ಕೂಡಲಸಂಗಮದೇವಂಗೆ ಮಾತಾಪಿತರುಳ್ಳರೆ ಹೇಳಿರೋ.

೬೭

ಹೊಱಗೆಂಟು ತನು ಒಳಗೆ ನಿರಂಜನಜ್ಯೋತಿ
ತೆಱಹಿಲ್ಲದಿಪ್ಪವನನೆಲ್ಲರು ಬಲ್ಲವರಿಲ್ಲ ಕೇಳಿರೆ.
ಶಿವನಲ್ಲದೆ ಬೇಱೆ ದೈವವಿಲ್ಲ
ಹುಲಿಗೆಱೆಯ ವರದ ಸೋಮನಾಥನು
'ಏಕೋರುದ್ರ'ನೆಂದುದು ಶ್ರುತಿ.

೬೮

ವಿಶ್ವವೆಲ್ಲ ಪಶು ಶಿವನೊಬ್ಬನೆ ಪತಿ,
ಬೇಱೊಬ್ಬ ಪತಿಯಿಲ್ಲ. ಇದು ಸತ್ಯವೆಂದು
ನಮ್ಮ ಹುಲಿಗೆಱೆಯ ವರದ ಸೋಮನಾಥನಲ್ಲದೆ
ಬೇಱೊಬ್ಬರುಂಟಾದರೆ ತೋಱಿಕೊಡಿಭೋ ನೀವು ಬಲ್ಲರೆ.

೬೯

ಶಿವಂಗೆ ತಪ್ಪಿದ ಕಾಲ ಭಸ್ಮವಾದುದನಱಿಯ,
ಶಿವಂಗೆ ತಪ್ಪಿದ ಕಾಮನುರಿದುದನಱಿಯ,
ಶಿವಂಗೆ ತಪ್ಪಿದ ಬ್ರಹ್ಮನ ಶಿವಹೋದುದನಱಿಯ,
ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ
ಭವ ಘೋರನರಕವೆಂದಱಿಯ ಮರುಳೆ.

೭೦

ಸೃಷ್ಟಿಯ ಪ್ರತಿಪಾಲಕ ಪ್ರತಿಕೂಲವಾದೊಡೆ
ಸಿಟ್ಟುಗುಟ್ಟಿ ಚಿವುಟನೆ ಬ್ರಹ್ಮನ ಶಿರವನು?
ಅವನಿಗೊಡೆಯ ನಾನೆಂದೊಡೆ
ಬಂಧನದಲ್ಲಿರಿಸನೆ ಬಂಟನಿಂದ ಬಲಿಯ?
ಜಗವಂದ್ಯವಿರಹಿತನಾಗಿ ಭೂಮಿಯನಳೆದುಕೊಂಡಡೆ
ಒಂದು ಕಾಲಲ್ಲಿರಿಸನೆ ಹರಿಯ?
ಹುಟ್ಟಿಸುವನಯ್ಯ ಕುಸಕುಳಿಯೊಳಗೆ ದುರ್ಜೀವಿಗಳ ಮಾಡಿ
ಕತ್ತಿ ಕವುಚಿಯಲ್ಲಿ ಕುಸುಱಿದಱಿಸಿಕೊಂಡು
ನೆಟ್ಟನೆ ಶಿವನ ದೃಷ್ಟವನಱಿಯದೆ
ಹುಟ್ಟುಗೆಟ್ಟು ಬಟ್ಟ ಬಯಲಲ್ಲಿ ಹೋದರು
ಸೃಷ್ಟಿಗೀಶ್ವರಕರ್ತು ಸೊಡ್ಡಳನನಱಿಯದನ್ಯಾಯಿಗಳು.

೭೧

ಎರಡನುಡಿದ ವಿಷ್ಣುವೇನಾದ?
ಎರಡ ನುಡಿದ ಬ್ರಹ್ಮನೇನಾದ?
ಎರಡನುಡಿದ ಇಂದ್ರನೇನಾದ?
ಎರಡ ನುಡಿದ ದಕ್ಷನೇನಾದ?
ಎರಡ ನುಡಿದ ವ್ಯಾಸನೇನಾದನೆಂದು
ಇವರುಗಳು ನುಡಿದ ಪರಿಯನು
ಅವರ ಪರಿಯನು ವಿಚಾರಿಸಿ ನೋಡಿದಡೆ,
ಶಿವನೆ ಕರ್ತನೆಂದು ನುಡಿದು ಮರಳಿ ಅಹಂ ಕರ್ತನೆಂದು ನುಡಿದು
ಶಾಸ್ತಿಗೊಳಗಾದರು ಮಾನಹಾನಿಯಾದರು ನೋಡಿರೆ.
ವಿಶ್ವವೆಲ್ಲವು ಪಶು ಶಿವನೊಬ್ಬನೇ ಪತಿ,
ಸರ್ವವು ಶಕ್ತಿರೂಪು ಶಿವನೊಬ್ಬನೇ ಪುರುಷನು,
ಸರ್ವರು ಭೃತ್ಯರು ಶಿವನೊಬ್ಬನೇ ಕರ್ತನೆಂದಱಿದು
ಮನವಚನವೊಂದಾಗಿ ನೆನವುತಿಪ್ಪವರು ಶಿವನೊಂದಾದರಯ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರನೊಬ್ಬನೆ ಎರಡಿಲ್ಲ

೭೨

ವಿಷ್ಣು ಬಲ್ಲಿದನೆಂಬೆನೆ?
ದಶಾವತಾರದಲ್ಲಿ ಭಂಗ ಬಟ್ಟುದಕ್ಕೆ ಕಡೆಯಿಲ್ಲ.
ಬ್ರಹ್ಮ ಬಲ್ಲಿದನೆಂಬೆನೆ?
ಶಿರಹೋಗಿ ನಾನಾ ವಿಧಿಯಾದ.
ವೇದ ಬಲ್ಲಿತ್ತೆಂಬೆನೆ?
ನಾನಾ ಮುಖದಲ್ಲಿ ಸ್ತುತಿಯಿಸಿತ್ತಲ್ಲದೆ ಲಿಂಗದ ನಿಲುಕಡೆಯ ಕಾಣದು.
ಶಾಸ್ತ್ರ ಬಲ್ಲಿತ್ತೆಂಬೆನೆ? ಶಬ್ದಕ್ರೀ.
ಪುರಾಣ ಬಲ್ಲಿತ್ತೆಂಬೆನೆ? ಪೂರ್ವಕ್ರೀ.
ಆಗಮ ಬಲ್ಲಿತ್ತೆಂಬೆನೆ? ವಾಯು ಹೊಂದಿತ್ತು
ಇದು ಕಾರಣ
ಕೂಡಲ ಸಂಗಯ್ಯನೇ ನಿತ್ಯ,
ಉಳಿದ ದೈವವೆಲ್ಲ ಅನಿತ್ಯ ಕಾಣಿ ಭೋ.

೭೩

ಬಲ್ಲಿದ ಬಲ್ಲಿವರೆಂಬವರು ತಮ್ಮಿಂದ ತಾವಾದ ಸ್ವತಂತ್ರಶೀಲರೆ? ಅಲ್ಲ.
ಬ್ರಹ್ಮ ಬಲ್ಲಿದನೆಂದರೆ ಶಿರಹೋಗಲದೇನು?
ಹರಿ ಬಲ್ಲಿದನೆಂದರೆ ಹಲವು ಭವಕ್ಕೆ ಬಂದನು.
ಅಂಧಕಾಸುರ ಬಲ್ಲಿದನೆಂದರೆ ಹರನ ಅಂಗಾಲ ಕೆಳಗೆ ಇರಲದೇನು?
ದಕ್ಷ ಬಲ್ಲಿದನೆಂದರೆ ಹೋಮಕ್ಕಿ ಗುರಿಯಾಗಲದೇನು?
ಕೋಪದಲ್ಲಿ ಜಮದಗ್ನಿ ಬಲ್ಲಿದನೆಂದರೆ ಆತನ ತಲೆಯನರಿಯೆಂದೇನು?
ಪರಶುರಾಮ ಬಲ್ಲಿದನೆಂದರೆ ತನ್ನ ಬಿಲ್ಲ ಬಿಟ್ಟು ಹೋಗಲದೇನು?
ಸಹಸ್ರಾರ್ಜುನ ಬಲ್ಲಿದನೆಂದರೆ ತೋಳ ತುಂಡಿಸಲದೇನು?
ಅಂಬುಧಿ ಬಲ್ಲಿತೆಂದರೆ ಆಪೋಷಣಕ್ಕೊಳಗಾಗಲದೇನು?
ಅಗಸ್ತ್ಯ ಬಲ್ಲಿದನೆಂದರೆ ಅರಣ್ಯದೊಳಗೆ ತಪಸ್ಸು ಮಾಡಲದೇನು?
ನಳರಾಜ ಬಲ್ಲಿದನೆಂದರೆ ತನ್ನ ಸತಿಯುನಿಕ್ಕಿಟ್ಟು ಹೋಗಲದೇನು?
ಕೃಷ್ಣ ಬಲ್ಲಿದನೆಂದರೆ ಬೇಡನ ಅಂಬು ಅಂಗಾಲ ತಾಗಲದೇನು?
ರವಿ ಶಶಿಗಳು ಬಲ್ಲಿದರೆಂದರೆ ರಾಹು ಕೇತು ಗ್ರಹಿಸಲದೇನು?
ಶ್ರೀರಾಮ ಬಲ್ಲಿದನೆಂದರೆ ತನ್ನ ಸತಿ ಕೋಳುಹೋಗಲದೇನು?
ಪಾಂಡವರು ಬಲ್ಲಿದರೆಂದರೆ ತಮಗೆ ಹಳುವಟ್ಟು ಹೋಗಲದೇನು?

ಹರಿಶ್ಚಂದ್ರ ಬಲ್ಲಿದನೆಂದರೆ ಸ್ಮಶಾನವ ಕಾಯಲದೇನು?
ನೀ ಮಾಡಲಿಕೆ ಬಲ್ಲಿದರು
ನೀ ಮಾಡಲಿಕೆ ವೀರರು
ನೀ ಮಾಡಲಿಕೆ ಧೀರರು
ನೀ ಮಾಡಲಿಕೆ ರುದ್ರರು
ನೀ ಮಾಡಲಿಕೆ ದೇವರ್ಕಳು,
ಅಮೂರ್ತಿ ಮೂರ್ತಿ ನಿರಾಕಾರ ನಿರ್ಮಾಯ.
ಇಂತು ಬಲ್ಲಿದರೆಂಬವರ ಇನ್ನಾರುವ ಕಾಣೆ
ನಿಮ್ಮ ತಪ್ಪಿಸಿ ಕೂಡಲ ಚೆನ್ನಬಸಂಗಮದೇವಾ?

೭೪

ಸೃಷ್ಟಿಯ ಕಲ್ಪಿಸುವ ಕರ್ತ ಬ್ರಹ್ಮಂಗೆ ಶತಾಯುವೆಂಬ ಗಣಿತವಿದೇನು?
ಸಕಲಜೀವಿಗಳ ರಕ್ಷಿಸುವ ವಿಷ್ಣುವಿಂಗೆ ದಶಾವತಾರವೆಂಬ ಗಣಿತವಿದೇನು?
ಕೋಪಾಗ್ನಿ ರುದ್ರನೆಂಬ ಜಮದಗ್ನಿಯ ತಲೆಯನರಿದವರಾರು?
ಮೂವತ್ತುಮೂರುಕೋಟಿ ದೇವರ್ಕಳನಾಳಿದ ರಾವಣಂಗೆ ಅಳಿವೆಂಬುದೇನು?
ಹರಸಿ ಲಕ್ಷವಿಪ್ರರು ನಿಚ್ಚ ಮಂತ್ರಾಕ್ಷತೆಯನಿಡಲು
ಆ ದುರ್ಯೋಧನಂಗೆ ಸಾವೆಂಬುದೇನು?
ಹರನೆ ನೀ ಹರಸಿ ಪಟ್ಟವ ಕಟ್ಟಿಕೊಟ್ಟಂತಲ್ಲದೆ ಎಲ್ಲರಿಗೆಯೂ
ಮೂರು ಲೋಕಕ್ಕೆ ನೀನೊಬ್ಬನೇ ಒಡೆಯನೆಂದನಂಬಿಗರ ಚೌಡಯ್ಯ.

೭೫

ಹಲವು ದೇವರುಗಳ ಭಜಿಸಿ ಹೊಲಬುದಪ್ಪಿ ಹೋದರೆಲ್ಲ.
ದೇವರು ದೇವರೆಂದೇನು? ಒಮ್ಮೆಲಿ ದೇವರೇ?
ವಿಶ್ವಾಧಿಪತಿ ಶಿವನೊಬ್ಬನೇ ದೇವನಲ್ಲದೆ ಉಳಿದವರೆಲ್ಲ ದೇವರೆ?
ಬ್ರಹ್ಮದೇವರೆಂಬಿರೆ ಬ್ರಹ್ಮನ ಶಿರವ ಹರ ಚಿವುಟಿದ.
ವಿಷ್ಣುದೇವರೆಂಬಿರೆ ವಿಷ್ಣು ಹತ್ತವತಾರದಲ್ಲಿ ಹರನಿಂದ ಹರಸಿಕೊಂಡ.
ಇಂದ್ರದೇವರೆಂಬಿರೆ ಇಂದ್ರನ ಮೈಯೆಲ್ಲಾ ಭಗವಾಗಿ ನಿಂದೆಗೊಳಗಾದ.
ಚಂದ್ರ ದೇವರೆಂಬಿರೆ ಚಂದ್ರ ಕುಂದು ಹೆಚ್ಚ ತಾಳಿ ಕ್ಷಣಿಕನಾದ.
ಸೂರ್ಯ[ದೇವರೆಂಬಿರೆ] ಕುಷ್ಠವ್ಯಾಧಿಯಿಂದ ಭ್ರಷ್ಟನಾದ.
ಇನ್ನು ಉಳಿದ ದೇವತೆಗಳು ಭಂಗಬಟ್ಟುದಕ್ಕೆ ಕಡೆಯಿಲ್ಲ.
'ಸರ್ವದೇವಪಿತಾ ಶಂಭು: ಭರ್ಗೋ ದೇವಸ್ಯ ಧೀಮಹಿ'

—ಎಂದುದಾಗಿ
ಸರ್ವದೇವರುಗಳ ಉತ್ಪತ್ತಿಸ್ಥಿತಿಲಯಂಗಳ ಮಾಡುವ
ಕರ್ತ ಶಿವನೊಬ್ಬನೇ ದೇವನೆಂದು ನುಡಿದೆನು [ನಡೆದೆನು]
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲದೆಯಿಲ್ಲವೆಂದು.

೭೬

ಅಷ್ಟತನುಮೂರ್ತಿ ಲಿಂಗವೆಂಬ ಕಷ್ಟದ ಮಾತ ಕೇಳಲಾಗದು.
ಪೃಥ್ವಿಯಂತೆ ಕಠಿಣವುಳ್ಳಾತನೇ?
ಅಪ್ಪುವಿನಂತೆ ಓಟ ಭರಿತವುಳ್ಳಾತನೆ?
ತೇಜದಂತೆ ತೃಣಕಾಷ್ಟವಿಲ್ಲದಿದ್ದರೆ ನಂದುವಾತನೆ?
ವಾಯುವಿನಂತೆ ಚಲನೆಯುಳ್ಳಾತನೆ?
ಆಕಾಶದಂತೆ ಬಚ್ಚಬಱಿಯ ಬಯಲಾದಾತನೆ?
ಸೋಮ ಸೂರ್ಯರಂತೆ ದಿವರಾತ್ರೆಯ ನಡಸುವಾತನೆ?
ಆತ್ಮನಂತೆ ಜನನ ಮರಣವುಳ್ಳಾತನೆ?
ಇದು ಕಾರಣ ಕೂಡಲ ಚೆನ್ನಸಂಗಾ
ನೀನು ನಿನ್ನಂತೆ ಇವರೆಲ್ಲರೂ ನೀನಿರಿಸಿದಂತೆ.

೭೭

ಬೀಸುವ ಬಿಱುಗಾಳಿ ಬೀಸಬಾರದು ಬೀಸದಿರಬಾರದು,
ಸುರಿವ ಮಳೆ ಸುರಿಯಬಾರದು ಸುರಿಯದಿರಬಾರದು,
ಉರಿವ ಕಿಚ್ಚು ಉರಿಯಬಾರದು ಉರಿಯದಿರಬಾರದು.
ಚಂದ್ರ ಸೂರ್ಯರು ನಿಂದ ಕಾಲದಲ್ಲಿಯೆ ಸಂದಿತು
ಸೊಡ್ಡಳ ನಿಮ್ಮ ರಾಜತೇಜದ ಮಹಿಮೆ.

೭೮

ಶರಧಿಯ ಮೇಲೆ ತಿರೆಯ ಕರಗದಂತಿರಿಸಿದೆ,
ಅಂಬರಕ್ಕೆ ಗಡಿಗೆ ಬೋದಿಗೆ ಇಲ್ಲದಂತಿರಿಸಿದೆ,
ಎಲೆ ಮೃಡನೆ ನೀನಲ್ಲದುಳಿದ ದೈವಂಗಳಿಗೆ ಅಹುದೆ ರಾಮನಾಥ.

೭೯

ಇಬ್ಬರು ಮೂವರು ದೇವರೆಂದು ತಬ್ಬಿಬ್ಬುಗೊಂಡು ನುಡಿಯಬೇಡ.
ಒಬ್ಬನೇ ದೇವಕಾಣಿರಣ್ಣಾ.
ಸರ್ವಸ್ಮಾದಧಿಕೋ ರುದ್ರಃ ಪರಮಾತ್ಮಾ ಸದಾಶಿವಃ
ಇತಿ ಯಸ್ಯ ನಿಶ್ಚಿತಾ ಧೀಃ ಸವೈ ಮಾಹೇಶ್ವರಃ ಸ್ಮೃತಃ
—ಎಂದುದಾಗಮಂಗಳು;
ಶಿವನೇಕೋದೇವನೆಂದು ಸಾಱುತ್ತಿವೆ ಶ್ರುತಿಪುರಾಣಂಗಳು.
ಇದು ಕಾರಣ
ಶಿವನಿಲ್ಲದೆ ದೈವವಿಲ್ಲವೆಂದಱಿದ ಮಾಹೇಶ್ವರನ ಹೃದಯ
ನಿವಾಸವಾಗಿಪ್ಪ ನಮ್ಮ ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರನು.

೮೦

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ವಾಙ್ಮನಕ್ಕಗೋಚರನೆಂದು ಹೊಗಳುತೈದಾವೆ ಶ್ರುತಿವಾಕ್ಯಂಗಳು,
'ಅತ್ಯತಿಷ್ಠದ್ದಶಾಂಗುಲಂ ಏಕ ಏವ ಪುರುಷಂ'
–ಎಂಬ ಶ್ರುತಿಯು
ಅಣುವಿನೊಳಗಣುವಾಗಿ ಮಹತ್ತಿನೊಳಗೆ ಮಹತ್ತಾಗಿ
ಇಹಪರಕ್ಕೆ ಒಬ್ಬನೇ ಕರ್ತನಾಗಿ
ಅಧ್ಯಕ್ಷತನಕ್ಕೆ ಕಾರಣಿಕನಾಗಿ
ಸತ್ಯ ಜ್ಞಾನಾನಂದ ಮಹಾಮಹಿಮ ಶಿವಂಗೆ
ನಮೋ ನಮೋ ಯೆಂಬೆನು ಕಾಣ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ.

೮೧

ಶಿವಮಹಿಮೆಯ ಘನವನೇನೆಂಬೆನಯ್ಯ?
ಉದಕಂಗಳ ಸಮೂಹಂಗಳ ದೊಡ್ಡ ಕೆಱೆಗಳ ತರಂಗಗಳಿಂದೆ
ಉನ್ನತವಾದಂಥ ಗಂಗೆಯು
ಶಿವನ ಜಟಾಗ್ರದಲ್ಲಿ ಧರಿಸಲ್ಪಟ್ಟಳು.
ಒಂದು ಬಾಣದಿಂದೆ ತ್ರಿಪುರವು ಸುಡಲ್ಪಟ್ಟಿತ್ತು.
ನೊಸಲಕಣ್ಣ ಅಗ್ನಿಯಿಂದೆ ಮನ್ಮಥನು ಬೇಯಲ್ಪಟ್ಟನು.
ಶ್ರೇಷ್ಠವಾದ ತ್ರಿಶೂಲದಿಂದೆ ಅಂಧಕಾಸುರನು ಇಱಿಸಿಕೊಳಲ್ಪಟ್ಟನು.

ಚರಣಕಮಲದ ಹೆಬ್ಬೆರಲಿಂದೌಕುವದಱಿಂದೆ
ರಾವಣಾಸುರನು ಮೂರ್ಛಿತನಾಗಿ ಬಿದ್ದನು.
ಅದೆಂತೆಂದಡೆ–ಕಾಳಿಕಾಕಾಂಡದಲ್ಲಿ
"ಜಟಾಘ ಕಲ್ಲೋಲ ತರಂಗಗಂಗಾಧೃತಯೇನ ಜಟಾಗ್ರಭಾಗೇ
ಪಾದಾಂಬುಜಾಂಗುಷ್ಠ ನಿಪೀಡನೇನ ಪಪಾತ ಲಂಕಾಧಿಪತಿರ್ವಿಸಂಜ್ಞಾಃ
ಏತೋನ ದಗ್ಧಃ ತ್ರಿಪುರಂ ಶರೇಣ ಕಾಮೋ ಲಲಾಟಾಗ್ನಿ ಹುತಾಶನೇನ
ಭಿನ್ನಂಧಕಃ ಶೂಲವರೇಣ ಯೇನ ಕಸ್ತ್ರೋನ ಸಾರ್ಥಂ ಕುರುತೇ ವಿರೋಧಂ'
–ಇಂತೆಂದುದಾಗಿ
ಶಿವನೊಡನೆ ವೈರವ ಮಾಡುವರಾರುಂಟು?
ಭಾಪು ಭಾಪು ನಿಮಗೆ ಸರಿಯುಂಟೇ? ದೇವರಾಯ ಸೊಡ್ಡಳಾ.

೬೨

ಕಿಚ್ಚಿಲ್ಲದುರಿವಾತ ಮತ್ತೊಬ್ಬರಿಗಂಜುವನಲ್ಲ.
ಕೌತುಕದ ದೇವ ಕಾಣಿಭೋ ನಮ್ಮ ಶಿವನು,
ಕೌತುಕದ ದೇವ ಕಾಣಿಭೋ ನಮ್ಮ ಹರನು,
ಬಿರುದರ ಬಿಂಕದ ಬಿಂಕವ ಮುಱಿದು,
ಉಬ್ಬಿದವರ ಗಬ್ಬವ ಕಲಕುವ,
ಬಲ್ಲಿದನ ತಲೆ ಕಯ್ಯಲ್ಲಿ,
ಮೆಲ್ಲಿದನ ನಯುನ ಚರಣದಲ್ಲಿ,
ಅಯ್ಯಯ್ಯ ಮರಷು ಭಾಪುರೆ ರಾಉ ರಾಉ ಸೊಡ್ಡಳಾ.

೬೩

ಕಾಮನ ದಹನವ ಮಾಡಿದನು,
ದಕ್ಷನ ಯಜ್ಞವ ಕೆಡಿಸಿದನು,
ಒಳ್ಳಿಹ ತ್ರಿಪುರವನುರುಹಿದನು,
ಹಾಳಾಹಳವನೊಮ್ಮೆ ಧರಿಸಿದನು,
ನಮ್ಮ ಕೂಡಲಸಂಗಮದೇವನು.

೬೪

ಬ್ರಹ್ಮನಾದರಾಗಲಿ ವಿಷ್ಣುವಾದರಾಗಲಿ
ಇಂದ್ರತಾನಾದರಾಗಲಿ ಚಂದ್ರನಾದರಾಗಲಿ

ಅವರನೊರಸುವನುರುಹುವ. ನಮ್ಮ ಕಪಿಲ ಸಿದ್ಧಮಲ್ಲಿಕಾರ್ಜುನ
ತನ್ನ ನೊಸಲಕಣ್ಣಿಂಗೆ ಬೆಸನನಿತ್ತರೆ
ನಿಲ್ಲ ಬಲ್ಲ ಗರುವರನಾರನು ಕಾಣೆ.

೮೫

ಕಣ್ಣಿಂ ತ್ರಿಜಗಮಂ ಸುಟ್ಟು[೧][ಒಟ್ಟಿ ಬೊಟ್ಟಿ][೧]ಡುವನು
ಪಾಪಕಂಜನು ನೆರೆಗಂಜನು ಹೊರೆಗಂಜನು
ಕೋಟಿ ಕೋಟಿ ಬ್ರಹ್ಮಹತ್ಯಮಂ ಮಾಡಿಪ್ಪನು
ಮಾರಿ ತೊತ್ತು ಮುರಾರಿ ಒಂಟನು
ತನಗಾರು ಇದಿರಿಲ್ಲ ನೋಡಾ.
ಎಲುಗಳ ತಲೆಗಳ ಮಾಲೆಯು ಕೊರಳ ಲೇವಳವನು ಮಾಡಿಕ್ಕಿದ.
ಒಲಿದವರ ಕಾವ ಒಲ್ಲದವರ ಕೊಂದೀಡಾಡುವ
ಸೊಡ್ಡಳ ದೇವನು.

೮೬

ಕಾಲಾಂತ್ಯಕಾಲದಲ್ಲಿ ಪ್ರಳಯಾಂತ್ಯ ಪ್ರಳಯದಲ್ಲಿ
ಕಾಲ ಮಹಾಕಾಲನಂ ಕೊಂದು ಹರನು ಲೀಲೆಯಾಡುವಲ್ಲಿ,
ತ್ರಿವಿಕ್ರಮನ ನಿಟ್ಟೆಲವು ಕಟ್ಟಿಗೆ
ವಾಸುಗಿ ತೆಗೆನೇಣು
ನರಸಿಂಹನು ಗುರು ಕೊಂಕಿ
ಆದಿ ವರಾಹನ ಎರೆಯು ಮಾಡಿ
ಅದೆಂತೆಂದಡೆ—
ಕಲ್ಪಾಂತೇ ಶಮಿತ ತ್ರಿವಿಕ್ರಮು ಮಹಾಕಂಕಾಳಬದ್ಧ ಸ್ಫುರ
ಚ್ಛೈಷಃ ಸೂತ್ರ ಮದೋನ್ನಸಿಂಹನಬರ ಪೋತ್ರಿದಿಕೋಲಾಮಿಷಂ.
ವಿಶ್ವೈಕಾರ್ಣವ ಸಂಪಿಹಾರಮುದಿತೌ ಯೌಮತ್ಸ್ಯಕೂರ್ಮಾವುಭೌ
ಕಪರ್ದಿವರತಾಂಗತಃ ಸ್ಯಾತು ಸತಾಂ ಮೋಹಂ ಮಹಾ ಭೈರವಃ
ಇಂತಪ್ಪ ಮತ್ಸ್ಯ ಕೂರ್ಮಂಗಳಂ ತೆಗೆದಾಡುವಂದು
ಹರಿಹರನೆಂಬ ಹೆಸರೆಲ್ಲಿಯದೂ ಸೊಡ್ಡಳಾ?

೧—೧ ಮುಚ್ಚಿ ಬಚ್ಚಿ

೮೭

ಪಡೆದ ಕಾಣಿಭೋ ಕಾಲನ ಸಂಹರಿಸಿ ಕಾಲಹರನೆಂಬ ನಾಮವ.
ಪಡೆದ ಕಾಣಿಭೋ ಕಾಮನಂ ಸಂಹರಿಸಿ ಕಾಮಹರನೆಂಬ ನಾಮವ.
ಪಡೆದ ಕಾಣಿಭೋ ಮತ್ಸ್ಯ ಕಚ್ಛಪ ನರಸಿಂಹಾದಿಗಳ ಸಂಹರಿಸಿ
ವೀರಭದ್ರನೆಂಬ ಪೆಸರ.
'ಸರ್ವಂ ವಿಷ್ಣುಮಯಂ ಜಗತ್'
–ಎಂಬ ಶ್ರುತಿಯ ಮತದಿಂ ತೋರ್ಪ ಸಮಸ್ತ ಜಗತ್ತನು
ಉರಿಗಣ್ಣ ಬಿಟ್ಟು ಸುಟ್ಟು
ಹರಿಹರನೆಂಬ ಪೆಸರನು ಪಡೆದ ಕಾಣಿಭೋ ಹರನು
ಹರಿಯನು ಕೊಂದು[ದ] ಸಲೆ ಸಾಱುತ್ತಿದೆ ಯಜುರ್ವೇದ:
'ಓಂ ಹರಿಂ ಹರಂತಿಮನಯಂತಿದೇವಾಃ
ವಿಶ್ವ ಸ್ಮಶಾನಂ ವೃಷಭಂ ಮತಿನಾಂ'
ಇಂತೆಂದುದಾಗಿ
ಕಾಲಹರ ಕರ್ಮಹರ ತ್ರಿಪುರಹರ ದುರಿತಹರ
ಮುಖಹರ ಹರಿಹರ ಸಕಲಹರ ಸೊಡ್ಡಳರಾಯನು.

೮೮

ಕೆಮ್ಮ ಕೆಮ್ಮ ಕೆಮ್ಮನೆ ಕೇಳಯ್ಯ
ಬ್ರಹ್ಮಾಂಡವ ಬೆರಣಿಯ ಮಾಡಿ ಅಯ್ಯ.
ಕಾಲಕರ್ಮವೆಂಬ ಯುಗ ಜುಗಂಗಳನೆಲ್ಲವ ಬಣ್ಣಿಗದೆನೆಯ ಮಾಡಿ
ಅವ [ಹು]ರಿವನು ಒರಸುವನು ಮುಕ್ಕುವನು.
ಈಶಃ ಸರ್ವಸ್ಯ ಜಗತಃ ಪ್ರಭು ಪ್ರೇರಕಃ ವಿಶ್ವಭುಕ್'
ಇಂತೆಂದುದು ಶ್ರುತಿ.
ಸರ್ವ ಜಗಂಗಳಂ ಪುಟ್ಟಿಸುವ ರಕ್ಷಿಸುವ
ತನ್ನಿಚ್ಛೆಗಾಱ ಸೊಡ್ಡಳ ದೇವನು.

೮೯

ನಿಮ್ಮ ತಾಯಿತನವನೊಲ್ಲದವರು ನಾಯಿ ಬಾರದ ಭವವಬಂದರು.
ಒಬ್ಬ ಹೆಬ್ಬಕ್ಕಿಯಾದ ಒಬ್ಬ ಸೂಕರನಾದ.
ಒಬ್ಬ ಬೆರಳನೆತ್ತಿ ಕಟ್ಟುವಡೆದ

ಒಬ್ಬರೊಬ್ಬರ ವಿಧಿಯನೊಮ್ಮಿಂಗೆ ಕೈಕೊಳ್ಳ
ಉರ್ವೀಶ ಸೊಡ್ಡಳ ಭಾಪು ಭಾಪುರೆ.

೯೦

ಮತ್ಸ್ಯ ತಲೆಸುತ್ತಾಗಿ ಶಿವನ ಅಚ್ಚರಿಯ ಮುಡಿಯಲದೇಕೋ?
ಕೂರ್ಮನ ಕಪಾಲ ಹರನ ಹಾರ ಮಧ್ಯದೊಳದೇಕೋ?
ನಿಮ್ಮ ಆದಿ ವರಾಹನದಾಡೆ ಹರನ ಪದಕದೊಳದೇಕೋ?
ನಿಮ್ಮ ನರಹರಿಯ ಶಿರಸ್ಸು ನಮ್ಮ ಮಹಾದೇವನ ಉಡಿಯೊಳದೇಕೋ?
ನಿಮ್ಮ ತ್ರಿವಿಕ್ರಮನ ನಿಟ್ಟೆಲವು ಖಟ್ವಾಂಗವಾಗಿ ನಮ್ಮೀಶ್ವರನ ಕೈಯ್ಯೊಳದೇಕೋ?
ನೀವು ಸರಿಯೆಂಬ ಕೇಶವನ ಕಣ್ಣು ನಮ್ಮ ಸೋಮೇಶ್ವರನ ಶ್ರೀ ಚರಣದೊಳದೇಕೋ?
ನಿಮ್ಮಗ್ಗ[ಳ]ದ ನಾರಾಯಣನ ಹೆಣ ನಮ್ಮ ರುದ್ರನ ಶೂಲದ ಕೊನೆಯೊಳದೇಕೋ?
ಸಮಸ್ತ ದೇವಾಸುರರ ಶಿರಂಗಳು ಇತ್ತರದ ಸರಮಾಲೆಗೊದ[ಗ]ಲೇಕೋ?
ಬಲ್ಲಿದ ನರಹರಿಯ ತೊವಲ ಕಂಚುಕವಾಗಿ ತೊಟ್ಟ,
ಕರಿಗಜಾಸುರನ ಚರ್ಮವ ಹೊದ್ದ,
ಕಲಿಪುಲಿದೊವಲನುಟ್ಟ
ಹಾವಿನಾಭರಣವ ತೊಟ್ಟ,
ಕಾಮನ ಸುಟ್ಟು ಬೂದಿಯನಿಟ್ಟ,
ದುಷ್ಟರಿಗೆ ದುಷ್ಟ ಮಹಾಶ್ರೇಷ್ಠ ಅ[ಘ]ಘರಟ್ಟ
ಕಟಕ್ಕುಗ್ರದೇವ ಭಾಪು ಭಾಪು ಸೊಡ್ಡಳಾ.

೯೧

ಏರುವರೆ ಮೊಲನಾಗನ ಗದ್ದುಗೆ ಕಪಾಲ ಕೈಯ್ಯಲ್ಲಿ.
ಹೇಳುವರೆ ಹರಿಯ ಹೆಣ ಹೆಗಲ ಮೇಲೆ ನೋಡಾ.
ಬಿಚ್ಚಿಹೊದವರೆ ನಾರಸಿಂಹನ ಹಸಿಯ ತೊವಲು,
ಉಬ್ಬಿ ಹಿಡಿವಡೆ ನಿನಗಾದಿವರಾಹನ ದಾಡೆ
ನಲಿದು ಪಿಡಿವಡೆ ನಿನಗೆ ತ್ರಿವಿಕ್ರಮನ ನಿಟ್ಟೆಲವು.
ಕರಿಗಳ ತಲೆಗಳ ಮಾಲೆಗಳಾರಾದಡೇನು ಯೋಗ್ಯವೇ?
ಸುಡುಸುಡು
ಎಲುಗಳ ಮುಟ್ಟಬಹುದೆ ದೇವರಾಯ ಸೊಡ್ಡಳಾ?

೯೨

ಉಡಲು ತೊಡಲು ಹೊದೆಯಲೆಂದು
ಮುಡಿಹಿದ ಮೃಡ ಮೂವರನೆಂದು.
ತೊಗಲನುಗಿದನಮ್ಮ!
ಕರಿದಾನವ ಕೇಸರಿದಾನವ ಚಮೂರ ದಾನವರ
ದೇವರಾಯ ಸೊಡ್ಡಳನೆಂದು.

೯೩

ಹಣೆಗಣ್ಣು ಕೊರಳಕಪ್ಪು ಫಣಿಕುಂಡಲ ದಶಭುಜದ
ಉಡುಪತಿಯ ಜಡೆಯ ನಡುವಿನ ಗಂಗೆಯ
ಉಡಿಯ ಪುಲಿಚರ್ಮದ ತೊಡಿಗೆಯ
ಕರೋಟಿಮಾಲೆಯ ಪಿಡಿದ ಕಂಕಾಳದಂಡದ
ನಮ್ಮ ಮೃಡ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು
ರಾಜಿಸಿದ ತನಗೆ ಪ್ರತಿಯಿಲ್ಲವೆಂಬೊಲು.

೯೪

ತಲೆಯ ಮೇಲೆ ತಲೆಯುಂಟೇ?
ಗಳದಲ್ಲಿ ವಿಷವುಂಟೇ?
ಹಣೆಯಲ್ಲಿ ಕಣ್ಣುಂಟೇ? ಕಣ್ಣಲಿ ಕಿಡಿಯುಂಟೇ?
ದೇವರೆಂಬವರಿಗೆಂಟೊಡಲುಂಟೇ?
ತಂದೆಯಿಲ್ಲದ ದೇವರುಂಟೇ?
ತಾಯಿಯಿಲ್ಲದ ದೇವರುಂಟೇ?
ಎಲೋ ನಿನ್ನ ನೊಸಲಲ್ಲಿ ನೇಸಱು ಮೂಡದೇ?
ಶಂಭುತೆಲುಗೇಶ್ವರಾ
ನಿನಗಲ್ಲದುಳಿದ ದೈವಗಳಿಗುಂಟೆ ಕಾಲೊಳು ಕಣ್ಣು?

೯೫

ಹರಿ ಭಕ್ತಿಯಿಂದ ಸಾವಿರ ಕಮಲಕುಸುಮವಂ ತಂದು
ಪಶುಪತಿಯ ಚರಣಕ್ಕೆ ಒಸೆದು ಮಾಡುತ್ತಿರಲಾಗಿ
ಶಶಿಧರ ಒಂದು ಕುಸುಮವ ಕಡಮೆ ಮಾಡಲಾಗಿ
ಹುಸಿಯ ಹೊಜಿಲಾಱದೆ ತೆಗೆದಿಕ್ಕಿದ ಕಣ್ಣು.

ಕಾಲಸಂಹರನ ಕಾಲಲಿದೆ. ಇದು ಕಾರಣ
ನಾರಾಯಣಪ್ರಿಯ ರಾಮನಾಥನಾದ.

೯೭

ಅನಂತದೇವರೆಲ್ಲರು ನೆರೆದು,
ತಂಡತಂಡದಲ್ಲಿ ಬಂದು ದಂಡಪ್ರಣಾಮಂಗೈಯ್ಯಲು
ಅವರ ಮಕುಟತಟಸಂಘಟ್ಟ ರಜ ಉರುಳಲ್ಕೆ
ಆಹಾ! ಅಯ್ಯ! ಅಲ್ಲಿ ಮೇರು ಮಹಾರಜತಗಿರಿಗಳಾದವು
ಎನ್ನ ಕಪಿಲಸಿದ್ಧಮಲ್ಲಿಕಾರ್ಜುನ ದೇವರದೇವಾ, ನಿಮ್ಮ ಮುಂದೆ.

೯೭

ಅಯ್ಯ, ನಿಮಾಜ್ಞೆಯಲ್ಲಿಪ್ಪುದು ಕಂಡಾ ಸಕಲಲೋಕಂಗಳು,
ಅಯ್ಯ, ನಿಮಿಚ್ಛಾ ಮಾತ್ರದಲ್ಲಿಪ್ಪುದು ಕಂಡಾ ಕೋಟಿ ಹರಿವಿರಿಂಚಾದಿಗಳು,
ಅಯ್ಯ, ನಿಮ್ಮ ಮೀಱಿದಾಧಿಕ್ಯ ಒಂದೂ ಇಲ.
ಎಲೆ ಅಯ್ಯ, ಸಮಸ್ತ ಬ್ರಹ್ಮಾಂಡಗಳು ನಿಮ್ಮ ರೋಮಕೂಪದಲ್ಲಿಪ್ಪವು.
ಉರುತರ ಶಿವನೆ ನಿಮ್ಮನಱಿಯದೆ
ಏಕೆ ಕೆಡುವರಯ್ಯ ನರರು ಕಪಿಲಸಿದ್ಧಮಲ್ಲಿಕಾರ್ಜುನಾ.

೯೮

ಧರೆಗಿರಿಯೆಂಬರವ ಕರಕಿರಣಪ್ರಭೆಯು
ಸುರಿವ ಮಳೆ ಉರಿವಗ್ನಿ ಮಾರುತನಂ
ಹರಿವಿರಂಚಿಗಳು ಕುಬೇರ ಇಂದ್ರ ಚಂದ್ರಾಮರರನು
ಹರನು ಪಡೆವಲ್ಲಿ ನೆರವಾದವರೊಳರೆ?
ಕರಕಷ್ಟ ಮಾನವರು ಪರಪುಟ್ಟದ ಮಱಿಯಂತೆ
ಹರನ ದಾನವನುಂಡು ಬೇರೆ ಪರದೈವವುಂಟೆಂದು ಬೆಸಕೈಯ್ವರು
ಎರಡೇಳು ಲೋಕಕ್ಕೆ ಪರಮಪ್ರಭು ತೆಲುಗೇಶ್ವರನೊಬ್ಬನೆ
ಎಂದೆನ್ನದವನ ಬಾಯಿ ಪಾಕುಳ.

೯೯

ಇಳೆ ನಿಮ್ಮದಾನ [ಬೆಳೆ ನಿಮ್ಮ ದಾನ]
ಸುಳಿದು ಸೂಸುವ ವಾಯು ನಿಮ್ಮ ದಾನ
ಎತ್ತು ನಿಮ್ಮ ದಾನ ಬಿತ್ತು ನಿಮ್ಮ ದಾನ

ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ
ಕಾಯು ನಿಮ್ಮ ದಾನ ಜೀವ ನಿಮ್ಮ ದಾನ
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನೆಂಬೆ ಹೇಳಾ ರಾಮನಾಥ.

೧೧೦

ಅಜನಂದು ಸಾಱಿ ಹೇಳಿದ ಸಕಲ ಮುನಿಗಳೆಲ್ಲರಿಗು:
ಶಿವನನೆ ಧ್ಯಾನಿಸಿ ಶಿವನನೆ ಪೂಜಿಸಿ
ಶಿವಭಕ್ತಿಯೆ ನಿಮಗೆ ಗತಿ ಪರಮಸಾಧನವೆಂದು.
ಬೊಬ್ಬಿಟ್ಟು ಬೆರಳನೆತ್ತಿ ಸಾಱಿದನು
ವಿಷ್ಣು ಭಕ್ತಿಯಿಂದಲು ತನ್ನ ಭಕ್ತಿಯಿಂ
ಗತಿಗೆ ಸಾಧನವಿಲ್ಲ ವಿಲ್ಲವೆಂದು.
'ವಿಷ್ಣು ಭಕ್ತ್ಯಾಚ ಮದ್ಭಕ್ತ್ಯಾ ನಾಸ್ತಿ ಪರಾಂ ಗತಿಃ
ಶಂಭು ಭಕ್ತ್ಯಾಚ ಸರ್ವೇಷಾಂ ಸತ್ಯಮೇವ ಮಯೋಧಿಕಂ'
ಸರ್ವರಿಗಿದೇ ಉಪದೇಶ ಪದ ಬೇಱಿನ್ನು ಮಾತಿಲ್ಲ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನೊಬ್ಬನೇ ಮುಕ್ತಿಸಾಧನವು.

೧೧೧

ಅಯ್ಯ ವೈಷ್ಣವರಾದವರು ತಮ್ಮ ವಿಷ್ಣುವನೇ ಬಿಟ್ಟು ಕಳೆದು
ಲಿಂಗಭಕ್ತರಾದರನೇಕರು.
ಅಯ್ಯ ಜೈನರಾದವರು ತಮ್ಮ ಜಿನ್ನನ ಬಿಟ್ಟು ಕಳೆದು
ಲಿಂಗಭಕ್ತರಾದರನೇಕರು.
ಅಯ್ಯ ದ್ವಿಜರುಗಳಾದವರು ತಮ್ಮ ಕರ್ಮಂಗಳೆಲ್ಲವನೇ ಬಿಟ್ಟು ಕಳೆದು
ಲಿಂಗಭಕ್ತರಾದರನೇಕರು.
ಲಿಂಗವ ಬಿಟ್ಟು ಇವ ಹಿಡಿದವರೊಳರೆ, ಹೇಳಿರಯ್ಯಾ?
ಉಳ್ಳಡೆ ಅವ ವ್ರತಹೇಡಿ ನಡೆಯೆನಿಸುವನಲ್ಲದೆ
ಇದು ಕಾರಣ
ಕೃತಕದಿಂದ ಕುಟಿಲದೈವಂಗಳೆ ದಿಟನೆಂದು ಬಗೆವರೆ ಬುದ್ಧಿವಂತರು?
ಸಟೆಯ ಬಿಡಲಾರದೆ ದಿಟವನಂಬಲಱಿಯದೆ
ನಷ್ಟವಾಗಿ ಹೋಯಿತ್ತೀ ಜಗವವು ನೋಡಾ.
ಸಕಲ ದೈವಂಗಳಿಗೆ ಸಕಲ ಸಮಯಂಗಳಿಗೆ
ನೀವೆ ಶರಣಯ್ಯ ಬಸವಪ್ರಿಯ ಕೂಡಲಚೆನ್ನಸಂಗಮದೇವಾ.

೧೦೨

ಪಕ್ಷಿ ಜನಿಸಿ ಅಮೃತವನಱಿಯದಂತೆ
ಶಿವನಲ್ಲದೆ ಅನ್ಯದೈವ ಭಜನೆಯುಳ್ಳವನೇತಕ್ಕೆ ಬಾತೆ?
ಅನ್ಯಥಾ ವಧೆ ಮಾಡುವ ಅರ್ಥಿಕಾಱ ದೋಷವನಱಿಯ
ಪಾಪಿಯ ಕೈಯ ದಾರ ಗಾಳದ ಕೊನೆಗೆ ಬಂದುಂಡ ಮತ್ಸ್ಯದ ಲಕ್ಷಣದಂತೆ,
ಮನುಷ್ಯ ಜನ್ಮದಲ್ಲಿ ಹುಟ್ಟಿ
ಶಿವಾಚಾರವನಱಿಯದೆ ದುರಾಚಾರಕ್ಕೆಱಗುವರು
ಪೆಱಿದಲೆಯನನಱಿಯದೆ ಕಿಱುಕುಳ ದೈವಮಂ ಪಿಡಿವರು
ಕೇಶವಂಗೆ ದಾಸತ್ವಮಂ ಮಾಡಿದೊಡೆ ಪ್ರತ್ಯಕ್ಷ ಮುದುಹಂ ಸುಡಿಸನೆ?
ಮೈಲಾರದೇವರೆಂಬುವರ ನಾಯಾಗಿ ಬಗುಳಿಸನೆ?
ಜಿನ್ನ ದೈವವೆಂಬುವನ ತಲೆಯ ತಱಿಸನೆ?
ಹಲವು ದೈವವ ಪೂಜಿಸುವಾತ ಕೈಲಾಸದ ಬಟ್ಟೆಯ ಹೊಲಬುದಪ್ಪಿದ
ಇನ್ನು ಮಾಡುವವರಿಗೇ ವಿಧಿಯಹುದೋ?
ನಮ್ಮ ದೇವರಾಯ ಸೊಡ್ಡಳಂಗೆ
ಒಂದರಳನೇ[ಱಿ]ಸಿದವ ಕೈಲಾಸಕ್ಕೆ ಹೋದನು.

೧೦೩

ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೆ?
ಚಂದನಗಂಧವಿದ್ದಂತೆ ದುರ್ಗಂಧ ಮೈಯ್ಯಲ್ಲಿ ಪೂಸುವರೆ?
ಸುರಭಿ ಮನೆಯಲ್ಲಿ ಕಱಿವುತ್ತಿರೆ ಹರಿವರೆ ಸೊಣಗನ ಹಾಲಿಂಗೆ ಬಯಸಿ?
ಅಮೃತವಿದ್ದರೆ ಅಂಬಿಲವನೆಱಿದುಂಬ ಭ್ರಮಿತ ಮಾನವ ನೀ ಕೇಳಾ:
ಪರಮ ಪದವಿಯನೀವ ಚೆನ್ನ ಸೊಡ್ಡಳನಿರ್ದು
ಸಾವದೇವರ ನೋಂತರೆ ಕಾವರೇ ನಿಮ್ಮನು?

೧೦೪

ಬ್ರಹ್ಮನನಾರಾಧಿಸಿ ನಿರ್ಮಾಲ್ಯವಾದರು,
ವಿಷ್ಣುವನಾರಾಧಿಸಿ ಭವಭವಕ್ಕೆ ಬಂದರು,
ಭೈರವನನಾರಾಧಿಸಿ ಬಾಹಿರರಾದರಯ್ಯ,
ಮೈಲಾರನನಾರಾಧಿಸಿ ಕುರುಳು ಬೆರಳು ಕಡಿಸಿಕೊಂಡು ನಾಯಾಗಿ ಬಗುಳುತ್ತಿಪ್ಪರು.
ಜಿನ್ನನನಾರಾಧಿಸಿ ಲಜ್ಜೆನಾಚಿಕೆಯೋದರು.

ನಮ್ಮ ಕೂಡಲ ಚೆನ್ನಸಂಗಯ್ಯನನಾರಾಧಿಸಿ
ದೇವಾ, ಭಕ್ತರೆನಿಸಿಕೊಂಡರು ನೋಡಯ್ಯ.

೧೦೫

ಹರಿಯ ಬೇಡಿದರವಗೆ ಬಲೀಂದ್ರ ದಾನವನಿಕ್ಕಿದನು,
ಬ್ರಹ್ಮನ ಬೇಡಿದರವಗೆ ಶಿರವಿಲ್ಲ,
ಬೌದ್ಧನ ಬೇಡಿದ[ರ]ವಗೆ ಬುದ್ಧಿ ಸಮನಿಸದು,
ಜಿನ್ನನ ಬೇಡಿದ[ರ]ವಗೆ ಉಡಲಿಲ್ಲ,
ಬೆನಕನ ಬೇಡಿದ[ರ]ವಗೆ ಕೋಡುಮುಱಿಯಿತ್ತು,
ಭೈರವನ ಬೇಡಿದ[ರ]ವಗೆ ಉಟ್ಟುದನಿಕ್ಕಿ ಆಡುತಿದ್ದನು.
ಅಭಯಕರ ಜಗಕ್ಕೆಲ್ಲ ಜಗದಾನಿಯ ಬೇಡುವೆನು
ಕೂಡಲ ಸಂಗಯ್ಯನ.

೧೦೬

ಅಯ್ಯ ನಿಮ್ಮನೊಂದ ಬೇಡುವೆ.
ಎನಗೊಂದ ಪಾಲಿಸಯ್ಯ
ನಾರಿಯುರ ಉರದ ಗಾಳಿ
ಎನ್ನ ಮುಟ್ಟದಂತೆ ಮಂತ್ರಿಸಿ ರಕ್ಷಿಸಯ್ಯ.
ಅಯ್ಯ ಎನಗಿಂತಪ್ಪ ಲೇಸನಿತ್ತು ಬದುಕಿಸಾ
ಕಪಿಲಸಿದ್ಧ ಮಲ್ಲಿಕಾರ್ಜುನಾ.

೧೦೭

ಸಂಸಾರವೆಂಬ ಶ್ವಾನನ ಅಟ್ಟಿ ಮೊಸಲ ಬೀಸರವ ಮಾಡದಿರಯ್ಯ
ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ
ನೀವಲ್ಲದೆ ಮತ್ತೇನನೂ ಅಱಿಯೆನು.
ಕನ್ನೆಯಲ್ಲಿ ಕೈವಿಡಿದೆನು ನಿಮ್ಮಲ್ಲಿ ನೆರೆದೆನು.
ಮನ್ನಿಸು ಕಂಡಾ ಮಹಾಲಿಂಗವೇ
ಸತಿಯಾನು ಪತಿ ನೀನಯ್ಯ.
ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ
ನೀಸೆನ್ನ ಮನವ ಕಾಯ್ದಿಪ್ಪ ಗಂಡನು

ನಿಮಗೋತ ಮನವನನ್ಯಕ್ಕೆ ಹರಿಸಿದರೆ
ನಿಮ್ಮಭಿಮಾನದ ಹಾನಿ ಕೂಡಲ ಸಂಗಮದೇವ.

೧೦೮

ಶಿವನೇ ನಿಮ್ಮನಲ್ಲದೆ ಮತ್ತೊಂದ ನಾನಱಿಯೆನಯ್ಯ.
ಶಿವನೇ ನಿಮ್ಮ ಸೇವೆಯಲ್ಲಿ ಮತ್ತೊಂದಕ್ಕೆ ಮನವ ಹಾರೈಸದಂತೆ ಮಾಡಯ್ಯ
ಕಪಿಲಸಿದ್ಧಮಲ್ಲಿನಾಥಯ್ಯ.

೧೦೯

ಆವಾವ ಭಾವದಲ್ಲಿ ನಿಮ್ಮನಲ್ಲದೆ ನಾನಱಿಯದಿದ್ದೆನಯ್ಯ.
ದೇವ ಕಾಯಯ್ಯ, ಕಾಯಯ್ಯ.
ಕರುಣಿ ಕರುಣಿ ಕೃಪಾವಲ್ಲಭ ಗುರುವೇ
ಕಪಿಲಸಿದ್ಧಮಲ್ಲಿನಾಥಯ್ಯ.

೧೧೦

ಸಂಸಾರವೆಂಬ ಘೋರಕಾಂತಾರದೊಳಗೆನ್ನನಾಸುರದಿ ಬಿಡದಿರಾ ಬೊಪ್ಪ.
ಎನ್ನ ಬೆಂಬಳಿಯೊಳಿರ್ದು ಸಾಕಾ ಬೊಪ್ಪ.
ಎನ್ನ ಹೊರೆಯೊಳಿರ್ದು ಸಾಕಾ ಬೊಪ್ಪ.
ಐಯ್ವಾಯು ನಾಯಿ ತೋಡಿ ತಿನ್ನುತಿದೆ
ಕಾಮನೆಂಬ ವೈರಿಗೆನ್ನನೊಪ್ಪಿಸದಿರೆನ್ನ ಬೊಪ್ಪ.
ಅವ್ವೆಯ ಮನೋನಾಥ ನಿರಂಜನ ನಿರ್ಮಾಯ
ನಿರವಯ ನಿಃಶೂನ್ಯ ನಿರಾಲಂಬ ನಿರಾಭಾರಿ ನಿರ್ವೇಶನೀ
ಮುಕ್ತಿಸಾಮ್ರಾಜ್ಯಕ್ಕೆ ಒಡೆಯ ನೀನೇ ಅಯ್ಯ.
ನಿನ್ನನಗಲದಂತೆ ನಿನ್ನ ಶ್ರೀಪಾದದೊಳಿಂಬಿಡಯ್ಯ
ಕಪಿಲಸಿದ್ಧಮಲ್ಲಿನಾಥಯ್ಯ.

೧೧೧

ಕತ್ತಲೆಯನೊಳಕೊಂಡ ಬೆಳಗಿನಂತೆ
ಪಕ್ಷಿಯನೊಳಕೊಂಡ ತತ್ತಿಯಂತೆ
ಮುತ್ತನೊಳಕೊಂಡ ಚಿಪ್ಪಿನಂತೆ

ಸಾಗರವನೊಳಕೊಂಡ ಶಶಿಯಂತೆ
ಜಗವನೊಳಕೊಂಡ ಆಕಾಶದಂತೆ
ಎನ್ನ ನೀವು ಒಳಕೊಂಡಿರಿಯಾಗಿ,
ನಾನು ನೀನು ಏನೆಂದಱಿಯೆನಯ್ಯ
ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ.

ಶಿವನ ಬಿರುದಾವಳಿಸ್ತೋತ್ರದ ವಚನಗಳು ಸಮಾಪ್ತ ಮಂಗಳ ಮಹಾಶ್ರೀ.

ಅನುಬಂಧ

ಪ್ರಭುದೇವರ ಸ್ತೋತ್ರದ ವಚನಗಳು

ವಚನಾಂಕಿತ	ವಚನಕಾರ	ಕ್ರಮಾಂಕ	ಒಟ್ಟು
ಅಜಗಣ್ಣ ತಂದೆ	ಮುಕ್ತಾಯಕ್ಕ	೧-೨	(೨)
ಅಭಿನವಮಲ್ಲಿಕಾರ್ಜುನಾ	ಡೋಹರ ಕಕ್ಕಯ್ಯ	೯೩	(೧)
a) ಕಪಿಲಸಿದ್ಧಮಲ್ಲಿಕಾರ್ಜುನಾ	ಸಿದ್ಧರಾಮ	೩-೧೯, ೨೧-೪	(೨೧)
b) ಯೋಗಿನಾಥ	,,	೨೦	(೧)
ಕಲಿದೇವ(ರದೇವ)	ಮಡಿವಾಳ ಮಾಚಯ್ಯ	೭೬-೮೨	(೭)
ಕೂಡಲಚೆನ್ನಸಂಗ	ಚೆನ್ನಬಸವಣ್ಣ	೬೧-೭೫	(೧೫)
ಕೂಡಲಸಂಗಮದೇವಾ	ಬಸವಣ್ಣ	೨೫-೬೦	(೩೬)
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲಾ	ಘಟ್ಟಿವಾಳಯ್ಯ	೧೦೨-೦೩	(೨)
ಚೆನ್ನಮಲ್ಲಿಕಾರ್ಜುನ	ಅಕ್ಕಮಹಾದೇವಿ	೯೦-೨	(೩)
i) ನಿಃಕಳಂಕ ಮಲ್ಲಿಕಾರ್ಜುನಾ	ಮೋಳಿಗೆ ಮಾರಯ್ಯ	೧೦೧	(೧)
ii) ನಿಃಕಳಂಕ ಮಲ್ಲಿನಾಥಾ		೯೯	(೧)
iii) [ನಿಃಕಳಂಕ] ಮಲ್ಲಿನಾಥ ಪ್ರಭು		೧೦೦	(೧)
ಬಸವಣ್ಣಪ್ರಿಯ ಚೆನ್ನಸಂಗಯ್ಯ	ಅಕ್ಕನಾಗಮ್ಮ	೮೯	(೧)
ಬಸವಪ್ರಿಯ ಕೂಡಲ ಚೆನ್ನ ಸಂಗಯ್ಯ	ಹಡಪದ ಅಪ್ಪಣ್ಣ	೧೦೪-೦೮	(೫)
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ	ತೋಂಟದ ಸಿದ್ಧೇಶ್ವರ	೮೭-೮	(೨)
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚೆನ್ನಮಲ್ಲಿಕಾರ್ಜುನಾ	ಮರುಳಶಂಕರದೇವ	೮೩-೬	(೪)
ಸೊಡ್ಡಳ	ಸೊಡ್ಡಳ ಬಾಚರಸ	೯೪-೮	(೫)

ಪ್ರಭುದೇವರ ಸ್ತೋತ್ರದ ವಚನಗಳ ಆಕಾರಾದಿ

ಅನುಮಿಷನಾದ ನಿಬ್ಬೆಱಗಿನ	೧೦೭
ಅಯ್ಯಾ ಅಯ್ಯಾ ನೀನು	೨೨
ಅಯ್ಯಾ ನಿಮ್ಮ ಕರಸ್ಥಲದ	೧೩
ಅಯ್ಯಾ ನಿಮ್ಮ ಕಂಡಕಂಗಳು	೪
ಅಯ್ಯಾ ನಿಮ್ಮ ಮಹಾನುಭಾವಿಗಳ	೩೨
ಅಯ್ಯಾ ನಿಮ್ಮ ಸರ ಉಂಡ	೧೪
ಅಯ್ಯಾ ನೀವೆನ್ನ ಬಲ್ಲಿರಲ್ಲದೆ	೪೫
ಅರತವಡಗಿತ್ತೆನ್ನ	೫೮
ಅರಿದರಿದು ಎನಗಿಂದು	೪೮
ಅಱಲುಗೊಂಡ ಕೆಱೆಗೆ	೩
ಅಱಿಯದೆ ಮಱಹಿಂದ	೮೯
ಅಷ್ಟತನುವಿನ ನಿಷ್ಠೆ	೭೯
ಅಹುದಹುದು ಶಿವಶರಣರ	೨
ಅಂಗ ಕ್ರಿಯ ಲಿಂಗವೇಧಿಸಿ	೯೨
ಅಂಗದಲಳವಟ್ಟ	೫೧
ಅಂಗದಲ್ಲಿ ಲಿಂಗವಱಿತು	೬೭
ಅಂಗಯ್ಯ ಲಿಂಗ ಕಂಗಳ ನೋಡ	೮೬
ಅಂಗವಿಸದಿರು ಇನ್ನು	೧೮
ಆಕಾರವಿಲ್ಲದ ನಿರಾಕಾರದ	೯೮
ಆದಿಯನಱಿಹಿದ	೩೧
ಆದಿಯ ಲಿಂಗವ ತಂದಾತ	೪೭
ಆದಿಯಲ್ಲಿ ನಿಮ್ಮಿಂದ	೧೨
ಆಮಿಷ ತಾಮಸವೆಂಬ	೬೫
ಆಯತವಿಲ್ಲದನುಭಾವ	೬೪
ಆಸೆಯಾಮಿಷವಳಿದು	೯೩
ಇಲ್ಲದ ಸಂಸಾರ ಕಣ್ಣ	೬೧
ಉತ್ಪತ್ಯ ಸ್ಥಿತಿ ಲಯ	೭
ಉಪಮೆ ಅನುಪಮೆಯೆಂಬುದ	೧೫
ಎನಗೆ ಹಱಿಯಿತ್ತು	೮೫
ಎನ್ನ ಅನುಭಾವದ ಗಮ್ಯನೆ	೭೫
ಎನ್ನ ಅಷ್ಟವಿಧಾರ್ಚನೆ	೮೦
ಎನ್ನ ಮನವು ನಿಮ್ಮ	೪೪
ಎನ್ನ ಶಿರ ನಿಮ್ಮ	೨೭
ಎಲೆ ಅಯ್ಯಾ ಎನ್ನ ಶಿರ	೧೦
ಎಲೆ ಅಯ್ಯಾ ನಿಮ್ಮ ನಚ್ಚಿನ	೨೪
ಏಕಮೇವನ ದ್ವಿತೀಯಂ	೯೪
ಕತ್ತಲೆಯ ನುಂಗಿದ ದೀಪ	೨೮
[ಕರ್ಣದ ಕೊನೆಯಲ್ಲಿ...]	೮೭
ಕರಸ್ಥಲಕ್ಕೆ ಕರಣದ	೨೦
ಕಂಗಳನೆ ಱೀಟ ಕರಸ್ಥಲದ	೬೯
ಕಂಗಳ ಲಿಂಗ ಕರಸ್ಥಲದ	೩೮
ಕಾಲ ಮುಟ್ಟಲಮ್ಮದ	೫೦
ಕಾಲಿಲ್ಲದೆ ನಡೆವ	೩೯
ಕೂರ್ಮನ ಶಿಶುವಿನ ಸ್ನೇಹ	೯೫
ಕೆಱೆ ತೊಱೆ ದೇಗುಲ	೧೯
ಕೆಱೆಯ ತುಂಬಿದಾಪ್ಯಾಯನ	೫೩
ಕೊಟ್ಟ ದ್ರವ್ಯವನು ಲಿಂಗಕ್ಕೆ	೧೦೦
ಗುರುವೇ ಬೋನ ಶಿಷ್ಯನೇ	೭೩
ಜನನವಿಲ್ಲದ ಜನಿತ	೩೪
ಜಯ ಜಯ ತ್ರಾಹಿತ್ರಾಹಿ	೮೩
ಜಂಗಮವೆ ಜ್ಞಾನರೂಪು	೩೭
ತನು ಗುಣವಳಿದು ಲಿಂಗ	೭೮
ತನುವನೆಲ್ಲವ	೯೦
ತ್ರಾಹಿ ತ್ರಾಹಿ ದಯಾಗುಣ	೨೬
ತೊಱೆಯುದಕವ ಕೆಱೆ	೫೪
ದೇವ ದೇವ ಮಹಾಪ್ರಸಾದ	೪೯
ದೇವ ದೇವ ಮಹಾಪ್ರಸಾದ	೫೫
ದೇವ ದೇವ ಮಹಾಪ್ರಸಾದ	೪೬

ದೇವ ದೇವ ಶರಣಾರ್ಥಿ ೧
ಧರೆಯಾಕಾಶದ ನಡುವೆ ೬
ನಾನೇನ ಮಾಡುವ ಜ್ಞಾನಕ್ರೀ ೧೭
ನಿನ್ನಳವಲ್ಲ ಎನ್ನಳವಲ್ಲ ೧೦೫
ನಿಮ್ಮ ಕಂಡು ಕೈಮುಗಿದು ೩೬
ನಿಮ್ಮ ನಿಜದಯವನಾರು ೬
ನಿರಾಕಾರದ ಶಕ್ತಿಯಲ್ಲ ೧೦೮
ನಿಯಮಿ ಸಿಂಹಾಸನೋ ೨೧
ನಿಸ್ಸಂಗತ್ವಂ ನಿರಾಭಾರಿ ೮೪
ನೀನಳವಡಿಸಿ ಕೊಟ್ಟ ೭೧
ನೀರ ಒರಳು ಮಾಡಿ ೫೭
ನೀರು ಕ್ಷೀರದ ಸಂದುಳಗ ೧೬
ನೀರೊಳಗೆ ಕಿಚ್ಚಿದ್ದು ೧೦೩
ನೀಲದ ಮಣಿಯೊಂದು ೩೦
ನೆಲನ ಹೊದ್ದದು ೧೦೪
ಪರಿಮಿತಕ್ಕೆ ನಡೆತಂದು ೫೨
ಪುಣ್ಯಪಾಪಂಗಳನರಿಯದ ೧೧
ಬಟ್ಟ ಬಯಲಲ್ಲಿ ಬಂದು ೭೦
ಬಟ್ಟಬಯಲೊಳಗೊಂದು ೭೪
ಬಡವಂಗೆ ನಿಧಾನ ೧೦೧
ಬಯಸುವ ಬಯಕೆಗೆ ಕೈಸಾರಿ ೧೦೬
ಬರಿದಲ್ಲಿ ಅರಿಲುಗೊಂಡವಂಗೆ ೯೬
ಬಲಕ್ಕೆ ಮುರಿದನು ಪೌಳಿಯ ೭೭
ಬಸುರಿ ಬಾಯಾಗಿ ೫೬
ಬಾಗಿಲಕಾಯ್ದಿರ್ದ ಗೊಲ್ಲಂಗೆ ೭೨
ಬೆಟ್ಟವ ನೆಮ್ಮಿ ಕಟ್ಟಿಗೆಯು ೮೬
ಭವರೋಗವೈದ್ಯ ೨೫
[ಮನದ] ಸಂಚದೋವರಿ ೯೭
ಮನದೊಡೆಯನೆನ್ನ ೪೩
ಮನಮುಟ್ಟಿದ ಭಕ್ತಿಗೆ ೨೬
ಮನೆಯೊಳಗಣ ಕಿಚ್ಚು ೬೬
ಮರುಗದ ಗಿಡುವಿನಂತೆ ೨೯
ಮುತ್ತೊಡೆದ ಚಿಪ್ಪಿನ ೯೯
ಯೋಗದ ಹೊಲಬ ೧೦೨
ರೂಪಿಲ್ಲದ ರೂಪು ೬೩
ಲಿಂಗಗಂಭೀರ ಗಮನ ೫೯
ಲಿಂಗ ಜಂಗಮ ಜಂಗಮ ೩೫
ಲಿಂಗವೆ ಶರಣ ಶರಣನೆ ೮೮
ಲಿಂಗ ಸಂಗ ಸುಖದಲ್ಲಿ ೯೧
ಲೋಕಾಚಾರಿಯಲ್ಲದ ೮೧
ವೀರ ದನುಜರೆಲ್ಲಾ ೩೩
ವೇದಪ್ರಿಯನಲ್ಲಯ್ಯ ೯
ಸತ್ತು ಚಿತ್ತು ಆನಂದ ೭೯
ಸಾಕಾರ ನಿರಾಕಾರ ೪೨
ಸ್ತೋತ್ರವೆಂಬುದು ೮
ಹರಿಯೆಂಬಾತ ನಿಮ್ಮ ೫
ಹಸಿವು ಹರದು ತೃಷೆ ಬತ್ತಿ ೬೨
ಹೆಣ್ಣಿಗೆ ಬಂದಾತನಲ್ಲ ೮೬
ಹೊನ್ನಿಂಗೆಂದು ಬಂದಾತನಲ್ಲ ೪೦
ಹೊನ್ನಿನಾಪ್ಯಾಯನಕ್ಕೆ ೪೧

ಪ್ರಭುದೇವರ ಸ್ತೋತ್ರದ ವಚನಗಳು ಮತ್ತು ಗೂಳೂರು ಶೂನ್ಯಸಂಪಾದನೆಯ ಸಮಾನ ವಚನಗಳು

೧ = ii–೧೦
೨ = ii–೩೯
೩ = iii–೩೫
೪ = iii–೩೬
೫ = iii–೪೦
೬ = iii–೩೮
೭ = iii–೬೬
೮ = iii–೪೫
೯ = iii–೪೭
೧೦ = iii–೩೭
೧೧ = x–೩೫
೧೨ = iii–೭೫
೧೩ = iii–೧೩೭
೧೪ = iii–೧೩೩
೧೫ = iii–೧೦೪
೧೬ = iii–೧೦೭
೧೭ = iii–೧೦೦
೧೯ = iii–೧೩೧
೨೨ = iii–೭೪
೨೪ = xi–೫೩
೨೫ = v–೨೪
೨೭ = v–೨೮
೨೯ = vii–೧೭
೩೦ = xix–೯೭
೩೧ = v–೮೮
೩೨ = vii–೩
೩೩ = xix–೯೬
೩೪ = vii–೨೯
೩೫ = vii–೩೬
೩೬ = vii–೨೭
೩೭ = vii–೨೪
೩೯ = v–೮೭
೪೧ = xix–೯೩
೪೩ = xi–೧
೪೪ = xviii–೭
೪೫ = xviii–೩೯
೪೬ = xviii–೨೮
೪೭ = xix–೨೬
೪೮ = xix–೯
೪೯ = xix–೨೭
೫೦ = xix–೨೮
೫೧ = xix–೧
೫೨ = xi–೨
೫೪ = xix–೮೪
೫೫ = xx–೩
೫೬ = xix–೯೫
೫೭ = xix–೯೮
೫೮ = xx–೨೯
೫೯ = xxi–೧೩
೬೦ = xxi–೪೮
೬೧ = viii–೫೪
೬೩ = xix–೧೦೫
೬೪ = xix–೨೩
೬೬ = xix–೫೧
೬೭ = xix–೫೨
೬೮ = xix–೫೩

೬೯ = xvii–೪೫
೭೦ = xviii–೩
೭೧ = xix–೩೭
೭೩ = xix–೩೩
೭೪ = xix–೧೦೬
೭೫ = xxi–೧೪
೭೬ = xxi–೧೫
೭೭ = xviii–೨
೭೮ = xix–೧೨೬
೭೯ = xi–೧೫
೮೦ = ix–೧೯
೮೩ = vi–೧೦
೮೪ = vi–೩೮
೮೫ = vi–೧೧
೮೬ = vi–೧೫
೮೯ = xix–೧೪೫
೯೧ = xvi–೭೦
೯೩ = xix–೧೫೧
೯೪ = xi–೧೬
೯೫ = xix–೧೫೫
೯೬ = xix–೧೪೬
೯೭ = xix–೧೪೭
೯೮ = xviii–೫
೯೯ = xviii–೫೮
೧೦೦ = xviii–೫೯
೧೦೧ = xix–೧೫೨
೧೦೨ = xv–೫೫
೧೦೩ = xv–೫೪
೧೦೪ = xviii–೪
೧೦೫ = v–೧೨
೧೦೬ = xvii–೪೩
೧೦೭ = xix–೧೪೨
೧೦೮ = xix–೧೪೩

ಶಿವನ ಬಿರುದಾವಳಿಸ್ತೋತ್ರದ ವಚನಗಳು

ವಚನಾಂಕಿತ	ವಚನಕಾರ	ವಚನ ಸಂಖ್ಯೆ
— ಅಂಬಿಗರ ಚೌಡಯ್ಯ (ಅಂಬಿಗರ ಚೌಡಯ್ಯ) ೭೪		(೧)
— ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರ (ಉರಿಲಿಂಗಪೆದ್ದಿ) ೨, ೩, ೧೪, ೭೧, ೮೦		(೫)
— ಏಣಾಂಕಧರ ಸೋಮೇಶ್ವರಲಿಂಗ (ಬಿಬ್ಬ ಬಾಚಯ್ಯ) ೧		(೧)
— ಕಪಿಲಸಿದ್ಧ ಮಲ್ಲಿಕಾರ್ಜುನ (ಸಿದ್ಧರಾಮ) ೨೦, ೮೪, ೯೬, ೯೭, ೧೦೬, ೧೦೮, ೧೦೯, ೧೧೦		(೮)
— ಕಲಿದೇವ (ಮಡಿವಾಳ ಮಾಚಿದೇವ) ೪೧		(೧)
— ಕೂಡಲ ಚೆನ್ನಸಂಗ (ಚೆನ್ನಬಸವಣ್ಣ) ೩೧, ೩೫, ೪೪, ೭೩, ೭೬, ೧೦೪		(೬)
— ಕೂಡಲ ಸಂಗ (ಬಸವಣ್ಣ) ೫, ೧೧, ೨೦, ೨೯, ೩೦, ೩೩, ೩೬, ೪೭ ರಿಂದ ೫೭, ೫೯ ರಿಂದ ೬೬, ೭೨, ೮೩, ೧೦೫, ೧೦೭)		(೩೦)
— ಗುಹೇಶ್ವರ (ಅಲ್ಲಮಪ್ರಭುದೇವ) ೯		(೧)
— ಚೆನ್ನಮಲ್ಲಿಕಾರ್ಜುನ (ಅಕ್ಕಮಹಾದೇವಿ) ೬೯		(೧)
— ನಾರಾಯಣಪ್ರಿಯ ರಾಮನಾಥ (ಗುಪ್ತ ಮಂಚಣ್ಣ) ೯೫		(೧)
— ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರ (ಸ್ವತಂತ್ರ ಸಿದ್ಧಲಿಂಗ) ೭, ೧೫, ೧೬, ೭೫, ೭೫, ೭೯, ೯೩		(೬)
— ಬಸವಪ್ರಿಯ ಕೂಡಲ ಚೆನ್ನಸಂಗಮದೇವ (ಹಡಪದ ಅಪ್ಪಣ್ಣ) ೩೭, ೩೮, ೩೯, ೪೦, ೪೬, ೧೦೦, ೧೦೧		(೭)
— ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ (ತೋಂಟದ ಸಿದ್ಧಲಿಂಗಯತಿ) ೨೧, ೨೨, ೨೩, ೨೪, ೨೫, ೨೬, ೨೭, ೧೧೧		(೮)

— ರಾಮನಾಥಾ (ಜೇಡರ ದಾಸಿಮಯ್ಯ)
೫೮, ೭೮, ೯೯ (೩)
— ಶಂಭು ತೆಲುಗೇಶ್ವರ (ತೆಲುಗೇಶ ಮಸಣಯ್ಯ)
೯೪, ೯೮ (೨)
— ಸಕಳೇಶ್ವರ (ಸಕಲೇಶ ಮಾದರಸ)
೪ (೧)
— ಸದಾಶಿವಮೂರ್ತಿಲಿಂಗ (ಅರಿವಿನ ಮಾರಿತಂದೆ)
೩೪ (೧)
— ಸೊಡ್ಡಳ (ಸೊಡ್ಡಳ ಬಾಚರಸ)
೩೨, ೪೨, ೪೩, ೪೫, ೭೦, ೭೭, ೮೧, ೮೨,
೮೫, ೮೬, ೮೭, ೮೮, ೮೯, ೯೦, ೯೧, ೯೨, ೧೦೨, ೧೦೩ (೧೮)
— ಸೌರಾಷ್ಟ್ರ ಸೋಮೇಶ್ವರ (ಆದಯ್ಯ)
೬, ೮, ೧೨, ೧೩, ೧೭, ೧೮, ೧೯, ೨೮ (೮)
— ಹುಲಿಗೆರೆಯ ವರದ ಸೋಮನಾಥ (ಅಗ್ಘವಣಿ ಹೊನ್ನಯ್ಯ)
೭೭, ೭೮ (೨)

ಶಿವನ ಬಿರುದಾವಳಿ ಸ್ತೋತ್ರದ ವಚನಗಳ ಅಕಾರಾದಿ

ಅಗ್ಗದ ಹರಿಬ್ರಹ್ಮರ ೪೯
ಅಜನಂದು ಸಾಕ್ಷಿ ಹೇಳಿದ ೧೦೦
ಅ[ದುರಿತು] ಪಾದಘಾತದಿಂ ೨೦
ಅನಂತಕೋಟಿ ಪ್ರಕಾಶ ೯
ಅನಂತ ದೇವರೆಲ್ಲರು ೯೬
ಅಮೃತವ ಕಡಿವಲ್ಲಿ ೫೯
ಅಮೃತಮತಿ ಸೋಮಶಂಭು ೬೬
ಅಯ್ಯ ನಿಮ್ಮನೊಂದು ಬೇಡುವೆ ೧೦೬
ಅಯ್ಯ ನಿಮ್ಮಾಜ್ಞೆಯಲ್ಲಿ ೯೭
ಅಯ್ಯ ವೈಷ್ಣವರಾದವರು ೧೦೧
ಅಯ್ಯುದ್ದೇ ಬ್ರಹ್ಮನ ಕಪಾಲ ೫೩
ಅಶ್ವತ್ಥ ಕಂಬಳರ ೨೮
ಅಷ್ಟತನುಮೂರ್ತಿ ಲಿಂಗ ೭೬
ಅಸುರ ಸುರರ ಶಿರಮಾಲೆಯು ೩೧
ಅಂದೊಮ್ಮೆ ಒಡಿಹೋಗಿ ೫೯
ಆದಿಮುಕ್ತ[ನು] ೭
ಆ ಪರಬ್ರಹ್ಮನೆ ೧೬
ಆವಾವ ಭಾವದಲ್ಲಿ ೧೦೯
ಇಬ್ಬರು ಮೂವರು ದೇವರೆಂದು ೫೪
ಇಬ್ಬರು ಮೂವರು ದೇವರೆಂದು ೭೯
ಇಳೆ ನಿಮ್ಮ ದಾನ ೯೯
ಈಶ್ವರ ಸದ್ಭಾವೇ.... ೬೫
ಉಡಲು ತೊಡಲು ೯೨
ಉಪ್ಪರಗುಡಿ ನಂದಿವಾಹನ; ೬೩
ಋಗ್ವೇದ ಕಾಣದಯ್ಯ ೪
ಎರಡ ನುಡಿದ ವಿಷ್ಣು ೭೧
ಎಲ್ಲಾ ದೈವಕ್ಕೆ ವಿಷ್ಣು ೪೩
ಎಲೆ ಅಯ್ಯ ನೀನು ನಿರಾಕಾರ ೧೬
ಏಟುವರೆ ಮೊಲನಾಗನ ಗದ್ದುಗೆ ೯೧
ಓಂ ಪ್ರಥಮದಲ್ಲಿ ೧
ಕಣ್ಣಿಂ ತ್ರಿಜಗಮಂ ಸುಟ್ಟ ೮೫
ಕತ್ತಲೆಯನೊಳಗೊಂಡ ೧೧೧
ಕನಕಗಿರಿನಿವಾಸಂ ೨೩
ಕಲಿವೀರ ಕಡಿವಲ್ಲಿ ೫೮
ಕಾಮನ ದಹನವ ೮೩
ಕಾಮಿತವಿಲ್ಲ ಕಲ್ಪಿತವಿಲ್ಲ ೧೩
ಕಾಲಾಂತ್ಯಕಾಲದಲ್ಲಿ ೮೬
ಕಿಚ್ಚಿಲ್ಲದುರಿವಾತ ೮೨
ಕೆಮ್ಮ ಕೆಮ್ಮ ಕೆಮ್ಮನೆ ೮೮
ಕೆಲರು ಚತುರ್ವೇದ ೮
ಕೆಂಜೆಡೆಯ ಭಾಳನೇತ್ರಂ ೨೪
ಕೇಶವನಲ್ಲದೆ ೪೪
ಗಂಗಾನದಿಯಲ್ಲಿ ಮಿಂದು ೧೦೩
ಚಿದ್ಬ್ರಹ್ಮಾಂಡವೆಂಬ ೧೨
ಜಗದಗಲ ಮುಗಿಲಗಲ ೮೦
ಜಲ ಕೂರ್ಮ ನಾಗ ಮೇದಿನಿ ೫೦
ಜ್ಞಾನಗಮ್ಯಂ ದೃಢಪ್ರಾಜ್ಞಂ ೨೨
ಜೀವಂಗೆ ಜೀವನಾದಾತ ೬
ತಲೆಯುಮೇಲೆ ತಲೆ ೯೪
ತಂದೆ ತಾಯಿ ಸಂಯೋಗ ೧೪
ದನುಜ ಮನುಜ ದಿವಿಜ ೨೬
ಧರೆಗಿರಿಯಂಬರವ ೯೮
ಧರೆ ರಸಾತಳಕ್ಕಿಳಿವಂದು ೩೦
ನಾದಪ್ರಿಯಂ ನಾದಮಯಂ ೨೭
ನಾದಬ್ರಹ್ಮ ನಾದಾತೀತಬ್ರಹ್ಮ ೧೮
ನಾರಾಯಣನೆಂಬುವನ ೫೭
ನಿಮ್ಮ ತಾಯಿತನವ ೮೯
ನಿರವಯ ನಿರಾಮಯಂ ೨೧

ನೊಸಲಕಣ್ಣ ಬಿಸಿ	೩೨	ಶಿವಂಗೆ ಬ್ರಹ್ಮ ವಿಷ್ಣುಗಳ	೩೮
ಪಕ್ಷಿ ಜನಿಸಿ ಅಮೃತವ	೧೦೨	ಶಿವ [ನ] ಮಹಿಮೆಯು	೮೧
ಪಡೆದ ಕಾಣಿಭೋ	೮೭	ಶಿವನಲ್ಲದೆ ಮತ್ತೆ ದೈವ	೪೬
ಪರಶಿವನು ಸುಖಮಯ	೨	ಶಿವನು ಸರ್ವಗತನು	೩
ಪಂಚವಕ್ತ್ರಂ ದಶಭುಜಂ	೨೫	ಶಿವನೇ ನಿಮ್ಮನಲ್ಲದೆ	೧೦೮
ಬಲ್ಲಿದ ಬಲ್ಲಿದರೆಂಬ	೭೩	ಶಿವಲೋಕಕ್ಕೆ ಸರಿ	೬೪
ಬ್ರಹ್ಮನನಾರಾಧಿಸಿ	೧೦೪	ಶಿವಾಯ ವಿಷ್ಣುರೂಪಾಯ	೩೫
ಬ್ರಹ್ಮನಾದರಾಗಲಿ	೮೪	ಶ್ರುತಿಗಗಮ್ಯ ದ್ವಾದಶಾಂತ್ಯ	೪೮
ಬೀಸುವ ಬಿಱುಗಾಳಿ	೭೭	ಶೈವವಾದ ತತ್ತ್ವವಾದ	೩೪
ಮತ್ಸ್ಯ ತಲೆಸುತ್ತಾಗಿ	೯೦	ಸಕಲ ನಿಃಕಲವ ಕೂಡಿ	೨೦
ಮಱೆಯಲಾಗದು	೬೦	ಸಗುಣನಾಗಬಲ್ಲ	೧೯
ಮಿಂಚುಬುಳು ಒಮ್ಮೆ	೩೯	ಸಂಸಾರವೆಂಬ ಘೋರ	೧೧೦
ಮುಱಿಸಬೇಕು ಹೊಲೆಯರ	೪೨	ಸಂಸಾರವೆಂಬ ಸ್ವಾನ	೧೦೭
ಮೃಡನೊಂದು ದೈವಕ್ಕೆ	೪೧	ಸ್ವಾಮಿ ನೀನು ಶಾಶ್ವತ ನೀನು	೪೭
ಯುಗ ಜುಗ ಪ್ರಳಯವ	೫೬	ಸೃಷ್ಟಿಯ ಕಲ್ಪಿಸುವ	೭೪
ರಿಣತಪ್ಪಿದ ಬಳಿಕ	೬೧	ಸೃಷ್ಟಿಯ ಪ್ರತಿಪಾಲಕ	೭೦
ರುದ್ರ ಮುಖದಲ್ಲಿ	೫೧	ಹಣೆಗಣ್ಣು ಕೊರಳ ಕಪ್ಪು	೯೩
ಲಿಂಗ ಶಿವಾಲಯದ ಮುಂದೆ	೬೨	ಹರನ ಕೊರಳಲಿಪ್ಪ	೩೩
ವದನದ್ವಾರಕ್ಕೆ ಗುದದ್ವಾರ	೩೭	ಹರನ ಡಿಂಗರಿಗ ದಧೀಚಿ	೪೫
ವಿಶ್ವಜಿತನು ಧನುಜಿತನು	೧೧	ಹರಿ ಭಕ್ತಿಯಿಂದ	೯೫
ವಿಶ್ವವೆಲ್ಲ ಪಶು	೬೮	ಹರಿಯು ಬೇಡಿದರವಗೆ	೧೦೫
ವಿಶ್ವಾಧಿಕೋ ರುದ್ರನ	೫೨	ಹರಿಯೆಂಬಾತ ನಿಮ್ಮ	೧೦
ವಿಷ್ಣು ಬಲ್ಲಿದನೆಂಬೆನೆ	೭೨	ಹರಿಹರನೊಂದೆ ಎಂದರೆ	೩೬
ವೇದ ಸ್ವಯಂಭುವೆಂಬ	೪೯	ಹಲವು ದೇವರುಗಳ	೭೫
ವೇದಾತೀತ ಷಡುವರ್ಣರಹಿತ	೫	ಹುಟ್ಟಿಸುವಾತ ಬ್ರಹ್ಮ	೫೫
ಶರಧಿಯ ಮೇಲೆ ತಿರೆಯ	೭೮	ಹುಟ್ಟು ಹೊಂದೆಂಬುದಿಲ್ಲದ	೧೫
ಶಿವಗಂಗೆ ತಪ್ಪಿದ	೬೯	ಹೊಱಗೆಂಟು ತನು	೬೭

□□

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ....956..........

ಸಮಗ್ರ ವೀರಶೈವ ಅಪ್ರಕಟಿತ ಪ್ರಾಚೀನಸಾಹಿತ್ಯ ಪ್ರಕಟನಮಾಲಿ

೧೯೬೨ ಏಪ್ರಿಲ್

೧) ವೀರಶೈವ ಅಪ್ರಕಟಿತ ಗ್ರಂಥಸೂಚಿ
೨) ಕಡಕೋಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು
೩) ಜಕ್ಕಣಯ್ಯನ ನಿರಾಳ ಮಂತ್ರಗೌಪ್ಯ
೪) ಕಸ್ತೂರದೇವರ ಸ್ವರವಚನಗಳು ೫) ಡಂಗುರ ಪದಗಳು

೧೯೬೩ ಏಪ್ರಿಲ್

೬) ಸಿರುಮಣನಾಯಕನ ಸಾಂಗತ್ಯ
೭) ಕೂಡಲೂರ ಬಸವಲಿಂಗ ಶರಣರ ಸ್ವರವಚನಗಳು
೮) ಜಿಗುನಿ ಮರುಳದೇವರ ಕೃತಿಗಳು ೯) ಅದ್ವೈತಾನಂದದ ವಚನಗಳು
೧೦) ಎಳಮಲೆಯ ಗುರುಶಾಂತದೇವರ ವಚನಗಳು
೧೧) ಚನ್ನಬಸವಣ್ಣನವರ ವಚನೈಕೋತ್ತರ ಶತಸ್ಥಲ

೧೯೬೪ ಏಪ್ರಿಲ್

೧೨) ಶೀಲ ಸಂಪಾದನೆ ೧೩) ಶರಣ ಚಾರಿತ್ರ್ಯದ ವಚನಗಳು
೧೪) ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತ ಚಾರಿತ್ರ್ಯ ಸಂಪಾದನೆಯ ವಚನಗಳು

೧೯೬೫ ಏಪ್ರಿಲ್

೧೫) ಭಕ್ತ್ಯಾನಂದ ಸುಧಾರ್ಣವ
೧೬) ಶ್ರೀ ಜ. ತೋಂಟದಾರ್ಯ ಸಂ. ಮಠದ ಹಸ್ತಪ್ರತಿ ಸೂಚಿ

೧೯೬೬ ಏಪ್ರಿಲ್

೧೭) ಕಂಬಾಳ ಶಾಂತಮಲ್ಲೇಶನ ಗಣವಚನರತ್ನಾವಳಿ
೧೮) ಗುರುಬಸವಾರ್ಯನ ಸ್ವರವಚನಗಳು
೧೯) ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು

೧೯೬೭ ಏಪ್ರಿಲ್

೨೦) ಶಂಕರದೇವರ ಸ್ವರವಚನಗಳು ೨೧) ಷಟ್ಕಾರಸಂಗ್ರಹ
೨೨) ಸೂಕ್ಷ್ಮಮಿಶ್ರಷಟ್‌ಸ್ಥಲ ೨೩) ಮೊಲ್ಲೆಬೊಮ್ಮಯ್ಯಗಳ ಕಾವ್ಯ
೨೪) ಸುಖಸಂಪಾದನೆಯ ವಚನಗಳು ೨೫) ಶಿವಯೋಗ ಚಿಂತಾಮಣಿ

೧೯೬೮ ಏಪ್ರಿಲ್

೨೬) ಮರಿಶಾಂತ ಬಸವದೇವರ ಸ್ವರವಚನಗಳು
೨೭) ಎಲ್ಲ ಪುರಾತರ ಸ್ತೋತ್ರದ ವಚನಗಳು ೨೮) ಸಂಪಾದನೆಯ ಸಾರಾಮೃತ
೨೯) ಶರಣಮುಖಮಂಡನ

೧೯೬೯ ಏಪ್ರಿಲ್

೩೦) ಸರ್ವಾಚಾರ ಸಾರಾಮೃತ ಸಂಧಿ ೩೧) ವಚನಸಾರ
೩೨) ಅನುಭಾವ ಜ್ಞಾನಸಾರಾಮೃತ ಸಂಪಾದನೆಯ ಸ್ತೋತ್ರ

೧೯೭೦ ಏಪ್ರಿಲ್

೩೩) ಪ್ರಭುದೇವರ ಷಟ್‌ಸ್ಥಲ ಜಂಗಮಸ್ಥಲ ನಿರ್ದೇಶ
೩೪) ಚೆನ್ನಬಸವಣ್ಣನವರ ಷಟ್‌ಸ್ಥಲವಚನ ಮಹಾಸಂಪುಟ
೩೫) ವಚನ ಸಂಕಲನ ಸಂಪುಟ-೧ ೩೬) ವಚನ ಸಂಕಲನ ಸಂಪುಟ-೨
೩೭) ಕುಷ್ಟಗಿ ಕರಿಬಸವೇಶ್ವರ ವಚನಗಳು